

## ಸರ್ವಮೂಲ ಸಂದೇಶ

### ಸಮತ್ವ–ವಿಷಮತ್ವ

**ಯಸ್ಯ ಯತ್ರ ಯಥಾ ವೃತ್ತಿರ್ವಿಹಿತಾ ವರ್ತನಂ ತಥಾ ।**
**ಜ್ಞಾನಂ ವಾಽಪಿ ಸಮತ್ವಂ ತದ್ ವಿಷಮತ್ವಮತೋಽನ್ಯಥಾ ॥**

ಯಾರ ವ್ಯವಹಾರವು ಯಾರೊಡನೆ ಹೇಗಿರಬೇಕೆಂದು ಶಾಸ್ತ್ರದಲ್ಲಿ ವಿಧಿಸಲ್ಪಟ್ಟಿದೆಯೋ ಹಾಗೆಯೆ ವ್ಯವಹರಿಸುವುದು ಅಥವಾ ತಿಳಿಯುವುದು ಸಮಾನತೆಯೆಂದು ಕರೆಯಲ್ಪಡುತ್ತದೆ. ಇದಕ್ಕೆ ವಿರುದ್ಧವಾದುದು ಅಸಮಾನತೆ.

**–ತ್ರೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದರು**

**ಸಂಪುಟ–೭ ಸಂಚಿಕೆ–೨ ಸರ್ವಜಿತ್ ಸಂ.॥ ಪುಷ್ಯ–ಮಾಘ ಫೆಬ್ರವರಿ ೨೦೦೮**

ಸಂಸ್ಥಾಪಕರು:

**ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು**

**ಶ್ರೀವಿದ್ಯಾಮಾನ್ಯ ಪ್ರಕಾಶನ**

ಶ್ರೀಮದ್ ಹೃಷೀಕೇಶ ತೀರ್ಥ ಸ್ವಾಮಿಯರ್ ಸ್ಮಾರಕ ಟ್ರಸ್ಟ್ (ರಿ.)

ಶ್ರೀ ಪಲಿಮಾರು ಹೃಷೀಕೇಶ ಮಠ, ಉಡುಪಿ.

## ವಿಷಯಾನುಕ್ರಮಣಿಕೆ

| | |
|---|---|
| ಅಂತರಂಗದ ಸಮುದ್ರಮಥನ –ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು | 1 |
| ಮುಖಪುಟ ಲೇಖನ | 3 |
| ರಜತಪೀಠ ಮಹಾತ್ಮ್ಯೆ | 7 |
| ಉಪನಿಷತ್ ಚಿಂತನ | 11 |
| ಧಾರ್ಮಿಕ ಚರ್ಚೆ | 13 |
| ಯುವಚಿಂತನ | 15 |
| ಶ್ರೀಮಧ್ವಚರಿತ್ರೆ– ಅನಂತಕೃಷ್ಣ ಆಚಾರ್ಯ | 17 |
| ದಾಸ ಸಾಹಿತ್ಯಸಾರ – ವಿ॥ ಹಯವದನ ಪುರಾಣಿಕ | 20 |
| ವಿದ್ವತ್ ಪ್ರಪಂಚ– ಶ್ರೀ ವಿದ್ಯಾಮಾನ್ಯ ತೀರ್ಥರು | 23 |
| ಪುರಾಣ ಪರಿಚಯ | 25 |
| ಉಪನಿಷತ್ ಸಂದೇಶ | 29 |
| ಆಧ್ಯಾತ್ಮ ಪ್ರವೇಶ | 31 |
| ಶ್ರೀಕೃಷ್ಣ ಮೆಚ್ಚಿದ ಕೃಷ್ಣಾಪುರ ಪರ್ಯಾಯ | 33 |
| ಜ್ಯೋತಿಷ ಮಿಮಾಂಸ | 41 |

**ಪ್ರಕಾಶಕರು**
ಶ್ರೀ ಶಿಬರೂರು ವೇದವ್ಯಾಸ ತಂತ್ರಿ, ಉಡುಪಿ

**ಪ್ರಧಾನ ಸಂಪಾದಕರು**
ವಿಸಗ್ರಿ ರಾಘವೇಂದ್ರ ಉಪಾಧ್ಯಾಯ, ಉಡುಪಿ

**ಸಂಪಾದನೆ ಹಾಗೂ ನಿರ್ವಹಣೆ:** ಶ್ರೀ ಅನಂತಕೃಷ್ಣ ಆಚಾರ್ಯ, ಉಡುಪಿ

**ಸಲಹಾ ಮಂಡಳಿ:**

ವಿಬಲರಾಮ ಭಟ್ಟ, ಉಡುಪಿ

ಶ್ರೀ ರಘುಪತಿ ತಂತ್ರಿ, ಬೆಂಗಳೂರು

ಶ್ರೀ ಗಿರೀಶ ಉಪಾಧ್ಯಾಯ, ಉಡುಪಿ

**ಅಕ್ಷರ ವಿನ್ಯಾಸ ಮತ್ತು ಜೋಡಣೆ:** ಶ್ರೀಮತಿ ಸ್ವಾತಿ ಭಾಗವತ್

**ಬಿಡಿಸಂಚಿಕೆ** : ರೂ. 8.00 **ವಾರ್ಷಿಕಚಂದಾ** : ರೂ. 90.00
**15 ವರ್ಷಕ್ಕೆ** : ರೂ. 1,250.00 **ಸದಸ್ಯರು** : ರೂ. 2,250.00
**ಪೋಷಕರು : ರೂ.** 3,000.00

# ಅಂತರಂಗದ ಸಮುದ್ರಮಥನ



–ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು
ಶ್ರೀ ಪಲಿಮಾರು ಮಠ, ಉಡುಪಿ

ಸಮಸ್ತ ಸಂಪತ್ತು ಸಮುದ್ರದ ಪಾಲಾದಾಗ ಸರ್ವಸುರರೂ ಅಸಂಖ್ಯಾತ ಅಸುರರೊಂದಿಗೆ ಸಂಧಾನ ನಡೆಸಿದರು. ಸಮುದ್ರಮಥನವನ್ನು ಮಾಡುವ ತೀರ್ಮಾನ ಮಾಡಿದರು. ಸಮುದ್ರಮಥನ ಭರದಿಂದ ಸಾಗಿತು. ಈ ಮಥನಕಾಲದಲ್ಲಿ ಪ್ರಥಮವಾಗಿ ಪ್ರಾಪ್ತವಾಯಿತು ಕಾಲಕೂಟವಿಷ. ಆದರೂ ಆರಂಭಿಸಿದ ಕಾರ್ಯವನ್ನು ಅರ್ಧದಲ್ಲಿಯೇ ಬಿಡಲಿಲ್ಲ. ಆರಂಭಶೂರರಾಗಲಿಲ್ಲ. ನಿರುತ್ಸಾಹರಾಗದೆ ಇನ್ನಷ್ಟು ತೀವ್ರವಾದ ಪ್ರಯತ್ನವನ್ನೇ ನಡೆಸಿದರು. ಪ್ರಯತ್ನ ಸಾರ್ಥಕವಾಯಿತು. ಸಮನಂತರದಲ್ಲಿಯೇ ಸಿದ್ಧಿಸಿತು ಸರ್ವಾಭಿಲಷಿತವಾದ ಸುಧಾಮಯ ಅಮೃತಾನ್ನ. ಸರ್ವರ ಮೋರೆಯಲ್ಲೂ ಸಂತಸದ ನಿಟ್ಟುಸಿರು. ದೈತ್ಯದಾನವರ ಹಸ್ತವನ್ನು ಸೇರಿದ ಸುಧೆಯ ಕಲಶದ ಚಷಕವನ್ನು ಶ್ರೀಹರಿಯು ಮೋಹಿನಿಯ ರೂಪ ತೊಟ್ಟು, ಅವರಿಗೆ ಮೋಹವನ್ನು ಹುಟ್ಟಿಸಿ, ಗಿಟ್ಟಿಸಿಕೊಂಡ. ಎಲ್ಲರಿಗೂ ಸಮಾನವಾಗಿ ಅಮೃತವನ್ನು ಉಣ್ಣಿಸುವ ಪೊಳ್ಳು ಭರವಸೆಯನ್ನು ಅರ್ಪಿಸಿದ. ಎದುರು ಬದುರಾಗಿ ದೇವದಾನವರನ್ನು ಭೋಜನಕ್ಕಾಗಿ ಕುಳ್ಳಿರಿಸಿದ. ರಾಹು ಕಣ್ಣು ತೆರೆದು ದೇವತೆಗಳ ಸಾಲಿನಲ್ಲಿಯೆ ಸುಧೆಯ ಪರಿವೇಷಣ ಮಾಡಿದ್ದನ್ನು ಕಂಡ. ಸುಧೆಗಾಗಿ ಕೂತಿದ್ದ ತನ್ನ ಸಾಲನ್ನು ತೊರೆದು ದೇವತೆಗಳ ಪಂಕ್ತಿಯನ್ನು ಪ್ರವೇಶಿಸಿದ. ಭಗವಂತ ತಿಳಿದೂ ಆತನ ಕೈಗೆ ಸುಧೆಯ ಧಾರೆಯನ್ನು ಸುರಿದ. ರಸನೇಂದ್ರಿಯದಿಂದಲೇ ಸುಧೆಯ ರಸವನ್ನು

*ಈ ಸಂಚಿಕೆಯಲ್ಲಿ......*

**ಶಿವರಾತ್ರಿಯಂದು ವಿಶೇಷವಾಗಿ ಶಿವನ ಆರಾಧನೆ. ಶಿವನಿಗೆ ರಾತ್ರಿಯಲ್ಲೇಕೆ ಆರಾಧನೆ? ಹೀಗಿರಬಹುದು. ರಾತ್ರಿ ಅಜ್ಞಾನದ ಸಂಕೇತ. ಶಿವನ ಆರಾಧನೆ ಹೆಚ್ಚಾಗಿ ಅಜ್ಞಾನದಿಂದ ಕೂಡಿಕೊಂಡೇ ನಡೆಯುತ್ತದೆ ಎಂಬುದರ ಸಂಕೇತವೇ ಶಿವರಾತ್ರಿ ಇರಬಹುದು. ಅದರಿಂದಲೆ ಶಿವನಿರಲಿ–ಬಿಡಲಿ, ಲಿಂಗದಂತೆ ಕಂಡಲ್ಲೆಲ್ಲಾ ಶಿವನ ಪೂಜೆ. ಹೀಗಾಗಬಾರದು. ಶಿವರಾತ್ರಿಯು ಬೆಳಕಿನಿಂದ ಬೆಳಗಬೇಕು. ಶಿವನ ಆರಾಧನೆ ಶಾಸ್ತ್ರೋಕ್ತ, ಜ್ಞಾನಪೂರ್ವಕವಾಗಿ ಸಾಗಬೇಕು.**

**–ಸಂಪಾದಕ**

ನಂಬಿದವರ ಸಲಹುವವರಲ್ಲಿ ಶ್ರೀಕೃಷ್ಣನೇ ಅಗ್ರಗಣ್ಯ



ಸವಿದ, ತತ್ವಮಾನೀ ಭಗವಂತನು ರಾಹುವಿನ ಶಿರಸ್ಸನ್ನು ತುಂಡರಿಸಿದ. ಅಮೃತವು ಅವನ ವದನದಲ್ಲಿ ಸದನ ಮಾಡಿತು. ಹೃದಯದ ತನಕ ತಲುಪಲೇ ಇಲ್ಲ. ರಾಹುವಿಗೆ ಅಮೃತ ಸಿಕ್ಕಿತು. ಆದರೆ ದಕ್ಕಲಿಲ್ಲ. ದೇವತೆಗಳಿಗೆ ಅಮೃತ ಪ್ರಾಶನ ಮಾಡಿಸಿದ ಶ್ರೀಹರಿ. ದೇವತೆಗಳು ಅಮೃತತ್ವವನ್ನು ಹೊಂದಿದರು. ಅಮರ್ತ್ಯರೆನಿಸಿದರು. ನಿತ್ಯ ತೃಪ್ತಿಯನ್ನು ಅನುಭವಿಸಿದರು.

ಇಂತಹ ಸಮುದ್ರಮಥನವನ್ನು ನಮ್ಮ ಜೀವನದಲ್ಲೂ ಸದಾ ಕಾಣುತ್ತಿದ್ದೇವೆ. ದೇವತೆಗಳೂ ಅಸುರರೂ ನಮ್ಮ ಮಾನಸ ಸಾಗರವನ್ನು ಮಥಿಸುತ್ತಲೇ ಇದ್ದಾರೆ. ನಮ್ಮ ಅಂತರಂಗದಲ್ಲಿ ಪ್ರಾದುರ್ಭವಿಸುವ ಸದಿಚ್ಛೆ, ಸದ್ವಿಚಾರ, ಸತ್ ಪ್ರವೃತ್ತಿ, ಸದ್ಗುಣಗಳೇ ದೇವತೆಗಳು. ತದ್ವಿಪರೀತವಾದ ಕೆಟ್ಟ ಕಾಮನೆಗಳು, ದುಷ್ಪಾಲೋಚನೆಗಳು, ದುರಾಚಾರ ದುರ್ಗುಣಗಳೇ ಅಸುರರನ್ನು ಸಂಕೇತಿಸುತ್ತವೆ. ಈ ಈರ್ವರು ನಡೆಸಿದ ಸತತಮಂಥನದಲ್ಲಿ ಮೊಟ್ಟ ಮೊದಲು ಕಾಲಕೂಟಕ್ಕೆ ಸೃಷ್ಟಿ ಎನ್ನುವ ಅಂಶದಲ್ಲಿ ಎರಡನೆಯ ಮಾತಿಲ್ಲ. ವಿಷಯಾಭಿಲಾಷೆ, ದುಷ್ಪ್ರವೃತ್ತಿ ಎಂಬ ಭಯಾನಕ ವಿಷ ನಮ್ಮನ್ನು ಹಾಗೆ ಜೀವಂತ ದಹಿಸುತ್ತಿದೆ ಎನ್ನುವುದು ಸರ್ವಾನುಭವ ಸಿದ್ಧ. ಆದ್ದರಿಂದ ಅಷ್ಟರಲ್ಲೇ ಪರ್ಯವಸಾನವಾಗಕೂಡದು. ಈ ವಿಷಸಿದ್ಧಿ ನಮ್ಮ ಜೀವನದ ಉದ್ದೇಶವಲ್ಲ. ಅಮೃತಮಯವಾದ ಸತ್ ಪ್ರವೃತ್ತಿ ದೊರೆಯುವ ತನಕ ಶಾಂತಿ ಲಭಿಸುವ ತನಕ ಮಾನಸಸಮುದ್ರಮಂಥನ ನಡೆಯಲೇ ಬೇಕು. ಆ ಕಾಲಕೂಟವೇ ಬದುಕಿನ ಗುರಿಯಾಗಿದ್ದರೆ, ಅಂತಹವರ ಹಣೆಬರಹಕ್ಕೆ ನಾವೇಕೆ ನಮ್ಮ ಹಣೆ ಬಡಿದುಕೊಳ್ಳಬೇಕು.

ಈ ರೀತಿಯಾಗಿ ನಮ್ಮ ಅಂತರಂಗದಲ್ಲಿ ಒಂದು ರೀತಿಯಾದ ಸಮುದ್ರಮಥನ ನಡೆದರೆ ಇನ್ನೊಂದು ವಿಧವಾದ ಶಾಸ್ತ್ರವೆಂಬ ಸಾಗರದ ಮಂಥನವೂ ಜರಗಬೇಕು. ನಡೆದಷ್ಟು ತಳ ಎಟಕದ ಆಳ. ಶಾಸ್ತ್ರ ಸಾಗರಕ್ಕಿಳಿದು ಉಪ್ಪಿನಂತಹ ಮೇಲ್ಸ್ತರದ ಅರ್ಥದ ಪ್ರಾಪ್ತಿಯಿಂದಲೇ ತೃಪ್ತಿಪಟ್ಟವರೂ ಇದ್ದಾರೆ. ಭಯಾನಕವಾದ ಮೊಸಳೆ ಮುಂತಾದ ಜಲಚರಗಳಂತಹ ವಿವಿಧ ವಿರೋಧಗಳ ಅವಲೋಕನದಿಂದಲೇ ಕಂಗೆಟ್ಟು ಅಲ್ಲಿಂದಲೇ ಪರಾರಿಯಾದವರೂ ಹೇರಳವಾಗಿದ್ದಾರೆ. ಬುದ್ಧಿಭ್ರಮಣೆಯಾದವರೂ ವಿಪುಲವಾಗಿದ್ದಾರೆ. ಹಾಗೆಯೇ ಅತ್ಯಮೂಲ್ಯವಾದ ರತ್ನಗಳಂತಹ ಅಮೃತಮಯ ಪ್ರಮೇಯಗಳನ್ನು ಪಡೆದು ಧನ್ಯರಾದವರೂ ಇದ್ದಾರೆ. ಆತ ಏವ ಅಮೃತದಿಂದ ತೃಪ್ತಿಯಾಗುವ ತನಕ ಶಾಸ್ತ್ರ ಸಾಗರದ ಮಥನೆ ನಡೆಯಿಸಲೇ ಬೇಕು.

★

ಇದು ವೇದ–ಮಹಾಭಾರತ ಮುಂತಾದ ಇತಿಹಾಸ–ಪುರಾಣಗಳ ಸಾರ.

ಮುಖಪುಟ ಲೇಖನ

# ಕೃಷ್ಣಂ ವಂದೇ ಮಂಥಪಾಶಧರಂ ದಿವ್ಯಾರ್ಭಕಾಕೃತಿಮ್

–ಅನಂತಕೃಷ್ಣಾಚಾರ್ಯ

ಕೆಲವು ದಿನಗಳ ಹಿಂದೆ ಉಡುಪಿಯು ವಿವಾದದಿಂದಾಗಿ ನಿತ್ಯವೂ ಎಲ್ಲರ ಚರ್ಚೆಗೆ ವಿಷಯವಾಗಿತ್ತು. 'ವಿದೇಶಪ್ರವಾಸ ಮಾಡಿದವರು ಶ್ರೀಕೃಷ್ಣನನ್ನು ಪೂಜಿಸಬಾರದು' ಎಂಬುದೇ ಈ ವಿವಾದದ ಮುಖ್ಯ ವಿಷಯ. ಹಲವು ಮಂದಿ ಹಲವು ಬಗೆಯಿಂದ ತಮ್ಮ ನಿಲುವನ್ನು ಮಂಡಿಸಿದರು, ಖಂಡಿಸಿದರು. ಒಟ್ಟಾರೆ ಪ್ರತಿಯೊಂದು ದಿನಪತ್ರಿಕೆಗೂ ತಮ್ಮ ಪ್ರಚಾರಕ್ಕಾಗಿ ಇದೊಂದು ನಿತ್ಯ ಆಹಾರವಾಯಿತು.

ಬಹಳ ಆಶ್ಚರ್ಯವೆಂದರೆ ಅನೇಕ ಮಂದಿಗೆ ಈ ವಿವಾದ ಏಕೆ ಹುಟ್ಟಿಕೊಂಡಿತೆಂದೇ ಅರ್ಥವಾಗಿರಲಿಲ್ಲ, ಇಂದಿಗೂ ಅರ್ಥವಾಗಿಲ್ಲ. ಇಂಥವರ ಬಳಿ 'ವಿದೇಶಕ್ಕೆ ಹೋದವರು ಶ್ರೀಕೃಷ್ಣನನ್ನು ಏಕೆ ಪೂಜಿಸಬಾರದು?' ಎಂದು ಪ್ರಶ್ನಿಸಿದರೆ ಅವರ ಉತ್ತರ 'ಶ್ರೀಕೃಷ್ಣನ ವಿಗ್ರಹವು ಮೈಲಿಗೆಯಾಗುತ್ತದೆ. ಶ್ರೀಕೃಷ್ಣಮಠದ ಪಾವಿತ್ರ್ಯಕ್ಕೆ ಧಕ್ಕೆ ಬರುತ್ತದೆ '. ಹೀಗೆ ಹಾಸ್ಯಾಸ್ಪದವಾಗಿರುತ್ತಿತ್ತು.

ತಿಳಿಯದವರ ಕಥೆ ಒತ್ತಟ್ಟಿಗಿರಲಿ, ತಿಳಿದವರೇ ಹಲವರು ಹೀಗೆ ನುಡಿಯುತ್ತಿದ್ದುದು ಬಹಳ ಆಶ್ಚರ್ಯವನ್ನುಂಟುಮಾಡುತ್ತಿತ್ತು. 'ಅಯ್ಯೋ, ಈ ಮಂದಿಗೆ ಮಧ್ವರ, ಮಧ್ವಪೂಜಿತ ಕೃಷ್ಣನ ಮಹಿಮೆಯ ಅರಿವೇ ಇಲ್ಲವಲ್ಲ' ಎಂದು ಮನಸ್ಸು ಖೇದಗೊಳ್ಳುತ್ತಿತ್ತು.

## ಎಲ್ಲ ಪ್ರತಿಮೆಯಂತಲ್ಲ ಶ್ರೀಕೃಷ್ಣಪ್ರತಿಮೆ

ಬೇರಾವುದೋ ದೇವಾಲಯದಲ್ಲಿ ಇಂತಹ ವಿವಾದ ಉಂಟಾಗಿ 'ಪ್ರತಿಮೆಯು ಮೈಲಿಗೆಯಾಗುತ್ತದೆ. ದೇವಾಲಯದ ಪಾವಿತ್ರ್ಯಕ್ಕೆ ಧಕ್ಕೆ ಬರುತ್ತದೆ ' ಎಂದು ಹೇಳುತ್ತಿದ್ದರೆ ಒಪ್ಪಿಕೊಳ್ಳಬಹುದಿತ್ತು. ಆದರೆ ಶ್ರೀಕೃಷ್ಣ ಪ್ರತಿಮೆಗೆ, ಶ್ರೀಕೃಷ್ಣಮಠಕ್ಕೆ ಈ ವಿಷಯ ಅನ್ವಯಿಸುವುದೇ ಇಲ್ಲ. ಶ್ರೀಕೃಷ್ಣನ ಪ್ರತಿಮೆಯೇ ಅಂಥದ್ದು.

ಆತನನ್ನು ನಂಬಿ ಕೆಟ್ಟವರಿಲ್ಲ.



ಭರತ ಖಂಡದಲ್ಲಿ ಶ್ರೀಮುಷ್ಣ, ವೇಂಕಟಾದ್ರಿ, ಶಾಲಗ್ರಾಮ, ತೋತ್ರಾದ್ರಿ, ಪುಷ್ಕರ, ಶ್ರೀರಂಗ, ಬದರಿ ಮುಂತಾದ ಕ್ಷೇತ್ರಗಳಲ್ಲಿ ಭಗವಂತನು ಸ್ವಯಂವ್ಯಕ್ತನಾಗಿದ್ದಾನೆಂದು ಪುರಾಣಗಳ ಮಾತು. ಉಡುಪಿಯ ಶ್ರೀಕೃಷ್ಣನೂ ಹೀಗೆ ಸ್ವಯಂವ್ಯಕ್ತ ಮೂರ್ತಿ.

**ಕೃಷ್ಣಾಜ್ಞಯಾ ನಿರ್ಮಿತಂ ತತ್‌ಸ್ವರೂಪಂ ವಿಶ್ವಕರ್ಮಣಾ ।**
**ತದ್ರೂಪೇ ಭಗವಾನ್ ಕೃಷ್ಣಃ ಸ್ವಯಂವ್ಯಕ್ತೋ ಬಭೂವ ಹ ॥**

ವಿಶ್ವಕರ್ಮ ನಿರ್ಮಿತವಾದ ಆ ಪ್ರತಿಮೆಯಲ್ಲಿ ಶ್ರೀಕೃಷ್ಣನು ತಾನೇ ಪ್ರಕಟಗೊಂಡನೆಂದು ಪುರಾಣಗಳು ಸಾರುತ್ತಿವೆ. ಜ್ಞಾನಿಗಳು ಹೊಗಳುತ್ತಿದ್ದಾರೆ. ಇಂತಹ ಪ್ರತಿಮೆಯಲ್ಲಿ ಶ್ರೀಕೃಷ್ಣನೂ ನಿತ್ಯವೂ ನೆಲೆಸಿದ್ದಾನೆ.

ಶ್ರೀವಾದಿರಾಜರು– **'ಪ್ರತ್ಯಹಂ ರಚಿತಾರ್ಚನಂ ರಮಾಯಾ ಸ್ವಯಾऽಗತಯಾ ಸ್ವಯಮ್ '** ಶ್ರೀ ಲಕ್ಷ್ಮಿಯು ಪ್ರತಿದಿನವೂ ತಾನಾಗಿಯೇ ಬಂದು ಶ್ರೀಕೃಷ್ಣನನ್ನು ಪೂಜಿಸುತ್ತಾಳೆ ಎಂದು ಬಣ್ಣಿಸುವಂತೆ ಪ್ರತಿನಿತ್ಯವೂ ಶ್ರೀಕರಾರ್ಚಿತವಾದ, ಅತಿಶಯವಾದ ಸನ್ನಿಧಾನದಿಂದ ಕೂಡಿದ ಪ್ರತಿಮೆಯಿದು.

ತ್ರೈಲೋಕ್ಯಾಚಾರ್ಯರಾದ ಶ್ರೀಮಧ್ವರ ಕರಸ್ಪರ್ಶದಿಂದ, ನಿತ್ಯ ಆರಾಧನೆಯಿಂದ ಶ್ರೀಕೃಷ್ಣನ ಅತಿಶಯ ಸನ್ನಿಧಾನಕ್ಕೆ ಎಂದಿಗೂ ಕುಂದಿಲ್ಲ.

ಭರತಖಂಡದಲ್ಲಿ ಚತುರ್ಮುಖ ಬ್ರಹ್ಮದೇವರು ನಿತ್ಯವೂ ನೈವೇದ್ಯವನ್ನರ್ಪಿಸಿ ಪೂಜಿಸುವ ಸ್ಥಳವೆಂದು ತಿರುಪತಿ ಪ್ರಸಿದ್ಧವಾದಂತೆ ನಿತ್ಯವೂ ವಾಯುದೇವರು ಮಧ್ವರೂಪದಿಂದ ಇಳಿದು ಬಂದು ನೈವೇದ್ಯವನ್ನರ್ಪಿಸಿ ಪೂಜಿಸುವ ಸ್ಥಳವೆಂಬ ಕೀರ್ತಿ ಉಡುಪಿಗೆ. ಆದ್ದರಿಂದಲೆ ಇಂದಿಗ ಶ್ರೀಕೃಷ್ಣನ ಮಹಾನೈವೇದ್ಯದ ಸಂದರ್ಭದಲ್ಲಿ ಪರ್ಯಾಯ ಶ್ರೀಪಾದರು ಎದ್ದು ಗರ್ಭಗುಡಿಯಿಂದ ಹೊರ ಬಂದು ಜಪದಲ್ಲಿ ನಿರತರಾಗುತ್ತಾರೆ. ಆಗ ಶ್ರೀಮಧ್ವರೇ ಸಾಕ್ಷಾತ್ತಾಗಿ ನೈವೇದ್ಯವನ್ನರ್ಪಿಸಿ ಪೂಜಿಸುತ್ತಾರೆಂಬುದು ಹಿಂದಿನಿಂದ ಬಂದ ನಂಬಿಕೆ.

ಇಂತಹ ಶ್ರೀಕೃಷ್ಣ ಪ್ರತಿಮೆ ಮೈಲಿಗೆಯಾಗುವುದಾದರೂ ಹೇಗೆ?

## ಕಾಣುವುದು ಕಲ್ಲಿನ ಮೂರ್ತಿ–ನಿಜವಾಗಿ ಚಿನ್ಮಯಮೂರ್ತಿ

ಶ್ರೀವಾದಿರಾಜ ಗುರುಗಳ ವರ್ಣನೆ ಹೀಗಿದೆ.

ಇದು ಬರಿಯ ಮಾತಲ್ಲ, ಅನುಭಾವಿಗಳ ಅನುಭವದ ಮಾತು.

**ಕೃಷ್ಣವಂದೇ ಮಂಥಪಾಶಧರಂ ದಿವ್ಯಾರ್ಭಕಾಕೃತಿಮ್ ।**

**ಶಿಖಾಬಂಧತ್ರಯೋಪೇತಂ ಭೈಷ್ಮೀ ಮಧ್ವಕರಾರ್ಚಿತಮ್ ॥**

ಕಡಗೋಲು ಹಗ್ಗಗಳನ್ನು ಧರಿಸಿದ, ಮೂರುಜಡೆಯಿಂದ ಕೂಡಿದ, ರುಗ್ಮಿಣಿ , ಮಧ್ವರ ಕರಕಮಲದಿಂದ ಪೂಜಿತ ಅಪ್ರಾಕೃತವಾದ ಬಾಲರೂಪಿಯಾದ ಶ್ರೀಕೃಷ್ಣನನ್ನು ನಮಸ್ಕರಿಸುತ್ತೇನೆ.

ಶ್ರೀವಾದಿರಾಜರು ಶ್ರೀಕೃಷ್ಣನನ್ನು ಕಲ್ಲಾಗಿ ಕಾಣಲಿಲ್ಲ, ದಿವ್ಯಮೂರ್ತಿಯಾಗಿ ಕಂಡರು. ಹಾಗೆ ಬಣ್ಣಿಸಿದರು. 'ಕಂಡೆ ಕಂಡೆನು ಕೃಷ್ಣ ನಿನ್ನಯ ದಿವ್ಯ ಮಂಗಳ ಮೂರ್ತಿಯ' ಎಂದು

ಪುರಂದರದಾಸರು 'ಧಿಮಿಕು ಧಿಮಿಕೆಂದು ಕುಣಿವ ಕೃಷ್ಣನ ಕಂಡೆ' ಎಂದು ನಲಿಯುವ ಕೃಷ್ಣನನ್ನು ಕಂಡರು.

ಕನಕದಾಸರು ತಾವು ಕಂಡ ದಿವ್ಯಮೂರ್ತಿಯನ್ನು 'ಬಾರೋ ಕೃಷ್ಣಯ್ಯ' ಎಂದು ಕರೆದರು.

ಹೀಗೆ ಜ್ಞಾನಿಗಳ ಗಡಣ ಶ್ರೀಕೃಷ್ಣನನ್ನು ಚಿನ್ಮಯಮೂರ್ತಿಯನ್ನಾಗಿ ಕಂಡಿತು. ಪರಮಪವಿತ್ರವಾದ ಶ್ರೀಕೃಷ್ಣಮೂರ್ತಿಯನ್ನು ಕಂಡು ಪರಮಪಾವನವಾಯಿತು.

ಆದರೆ ದಡ್ಡ ಮಂದಿಗೆ ಶ್ರೀಕೃಷ್ಣಮೂರ್ತಿ ಕಲ್ಲಾಗಿ ಕಂಡಿತು. ರುಗ್ಮಿಣಿ–ಶ್ರೀಮಧ್ವರು ಮುಟ್ಟಿ ಮಡಿ ಮಾಡುವ ಪ್ರತಿಮೆಯು ಮೈಲಿಗೆಯಾಗುತ್ತದೆಂಬ ಭ್ರಮೆ ಹೊಕ್ಕಿತು. ಮಡಿಗಿಂತ ಮೈಲಿಗೆಯೇ ಹೆಚ್ಚಾಯಿತು. ಹೀಗಾಗಿ ವಿವಾದ ಹುಟ್ಟಿಕೊಂಡಿತು.

ಶ್ರೀಕೃಷ್ಣನೇ ಸ್ವಯಂ ವ್ಯಕ್ತನಾದ–ಶ್ರೀರುಗ್ಮಿಣಿ ನಿತ್ಯವೂ ಪೂಜಿಸುವ– ಶ್ರೀಮಧ್ವರ ಮೇಲಿನ ಅತಿಶಯವಾದ ಪ್ರೀತಿಯಿಂದ ಅತಿಶಯ ಸನ್ನಿಧಾನದಿಂದ ಕೂಡಿರುವ ಶ್ರೀಕೃಷ್ಣನ ಅಪ್ರಾಕೃತ ಮೂರ್ತಿಯು ಜಡದೃಷ್ಟಿಗೆ 'ಶಿಲಾವದ್ದೃಶ್ಯತೇ ಹರಿಃ' ಎಂಬಂತೆ ಕಲ್ಲಿನಂತೆ ಕಂಡರೂ ಎಂಥವರು ಮುಟ್ಟಿದರೂ, ಪೂಜಿಸಿದರೂ ಮೈಲಿಗೆಯಾಗುವುದಿಲ್ಲ. ಇದು ಸತ್ಯ ಸಂಗತಿ.

ಹಾಗಿದ್ದರೆ ಶ್ರೀಕೃಷ್ಣಮೂರ್ತಿಯನ್ನು ಎಲ್ಲರೂ ಪೂಜಿಸಬಹುದೆ?

ಸಾಕ್ಷಾತ್ತಾಗಿ ಪೂಜಿಸುವಂತಿಲ್ಲ. ಪರೋಕ್ಷವಾಗಿ ಪ್ರತಿಯೊಬ್ಬರೂ ತಮ್ಮ ಮನೆಯಲ್ಲಿ, ಮನದಲ್ಲಿ ಉಡುಪಿ ಶ್ರೀಕೃಷ್ಣನನ್ನು ಪ್ರತಿದಿನವೂ ಪೂಜಿಸಲೇಬೇಕು.

**ಧಾರಯಾತ್ಮನಿ ರೂಪ್ಯಪೀಠಕೃತಾಲಯಂ ಹರಿಮಾಲಯಮ್**

**ಆದ್ದರಿಂದ ಶ್ರೀ ಕೃಷ್ಣನನ್ನು ಸರ್ವೋತ್ತಮನೆಂದು ತಿಳಿದು ಆರಾಧಿಸಬೇಕು**



ಶ್ರೀಕೃಷ್ಣಮೂರ್ತಿಯನ್ನು ಎಲ್ಲರೂ ಏಕೆ ಸಾಕ್ಷಾತ್ತಾಗಿ ಪೂಜಿಸುವಂತಿಲ್ಲ?

ಅದಕ್ಕೆ ಅಧಿಕಾರ–ಅರ್ಹತೆ ಇರಬೇಕು. ಉಡುಪಿಯ ಶ್ರೀಕೃಷ್ಣನನ್ನು ಪ್ರತಿಷ್ಠಾಪಿಸಿದ ಆಚಾರ್ಯಮಧ್ವರು ಸಾಕ್ಷಾತ್ತಾಗಿ ಪೂಜಿಸುವ ಅಧಿಕಾರವನ್ನು ಕೇವಲ ಅಷ್ಟಯತಿಗಳಿಗೆ ಮಾತ್ರ ನೀಡಿದ್ದಾರೆ. ಆದ್ದರಿಂದ ಆ ಪರಂಪರೆಯಲ್ಲಿ ಬಂದ ಯತಿಗಳಿಗೆ ಮಾತ್ರ ಸಾಕ್ಷಾತ್ತಾಗಿ ಪೂಜಿಸುವ ಅಧಿಕಾರವಿದೆ. ಉಳಿದ ಯತಿಗಳಾಗಲಿ, ಗೃಹಸ್ಥರಾಗಲಿ ಪೂಜಿಸಲು ಪ್ರಯತ್ನಿಸಿದರೆ ಅದು ಆಚಾರ್ಯಮಧ್ವರ ಆದೇಶವನ್ನು ಮೀರಿದಂತಾಗುತ್ತದೆ.

ಅಷ್ಟಮಠದ ಯತಿಗಳು ಅರ್ಹತೆ ಇದ್ದರೆ ಮಾತ್ರ ಶ್ರೀಕೃಷ್ಣನನ್ನು ಪೂಜಿಸುವ ಅಧಿಕಾರವನ್ನು ಹೊಂದುತ್ತಾರೆ. ಉದಾಹರಣೆಗೆ: ಅಷ್ಟಮಠಾಧೀಶರು ಒಂದೂ ಚಾತುರ್ಮಾಸ್ಯವನ್ನು ಪೂರೈಸದೆ ಶ್ರೀಕೃಷ್ಣನನ್ನು ಪೂಜಿಸುವಂತಿಲ್ಲ. ಅಷ್ಟಮಠಾಧೀಶರಾಗಿ ನಿಯುಕ್ತರಾದುದರಿಂದಲೆ ಅಧಿಕಾರ ಸಿಕ್ಕಿದರೂ ಒಂದೂ ಚಾತುರ್ಮಾಸ್ಯವನ್ನು ಪೂರೈಸದೇ ಇದ್ದುದರಿಂದ ಅರ್ಹತೆ ದೊರಕುವುದಿಲ್ಲ.

ಹೀಗೆ ಶ್ರೀಕೃಷ್ಣನನ್ನು ಸಾಕ್ಷಾತ್ತಾಗಿ ಪೂಜಿಸಲು ಅಧಿಕಾರ–ಅರ್ಹತೆ ಎರಡೂ ಪ್ರಧಾನವಾಗಿ ಬೇಕು.

## ಹಿಂದೆ ಅಧಿಕಾರದ ವಿಷಯದಲ್ಲಿ ವಿವಾದ

ಹಿಂದೆ ವಿದ್ಯಾಮಾನ್ಯತೀರ್ಥರು ಶ್ರೀಕೃಷ್ಣನನ್ನು ಪೂಜಿಸಲು ಸಿದ್ಧರಾದಾಗ ವಿವಾದ ಉಂಟಾಗಿತ್ತು. ಅದು ಕೇವಲ ಅಧಿಕಾರಕ್ಕೆ ಸಂಬಂಧಪಟ್ಟಂತೆಯೇ ಹೊರತು ಅರ್ಹತೆಯ ವಿಷಯದಲ್ಲಲ್ಲ. ಭಂಡಾರಕೇರಿಮಠದ ಯತಿಗಳಾಗಿದ್ದ ಶ್ರೀವಿದ್ಯಾಮಾನ್ಯರಿಗೆ ಶ್ರೀಕೃಷ್ಣನನ್ನು ಪೂಜಿಸುವ ಅಧಿಕಾರವಿಲ್ಲವೆಂಬುದೇ ಉಳಿದ ಮಠಾಧೀಶರ ಆಕ್ಷೇಪವಾಗುತ್ತೆ ಹೊರತು 'ಅನರ್ಹರು' ಎಂದಲ್ಲ. ಶ್ರೀಕೃಷ್ಣನನ್ನು ಪೂಜಿಸಲು ಬೇಕಾದ ಜ್ಞಾನ–ಭಕ್ತಿ–ವೈರಾಗ್ಯ–ಬ್ರಹ್ಮಚರ್ಯ–ಸದಾಚಾರ ಮುಂತಾದ ಎಲ್ಲ ಅರ್ಹತೆಗಳೂ ಶ್ರೀವಿದ್ಯಾಮಾನ್ಯರಲ್ಲಿತ್ತು. ಆದರೆ ಅಷ್ಟಮಠದ ಯತಿಗಳಲ್ಲ ಎಂಬುವ ವಿಷಯದಲ್ಲಿ ಮಾತ್ರ ವಿವಾದವಿತ್ತು. ಆದರೆ ಪಲಿಮಾರುಮಠದ ಶ್ರೀರಘುವಲ್ಲಭತೀರ್ಥರು ತಾವು ಸಂನ್ಯಾಸತ್ಯಾಗ ಮಾಡಿ ಶ್ರೀವಿದ್ಯಾಮಾನ್ಯರಿಗೆ ಪಲಿಮಾರುಮಠದ ಅಧಿಕಾರವನ್ನು ವಹಿಸಿ

(35ನೇ ಪುಟದಲ್ಲಿ...)

**ಕೃಷ್ಣನ ಕಥೆಯನ್ನು ಕೇಳುತ್ತಿರಬೇಕು**

ಭಾಗ–10

ಸ್ಕಾಂದ ಪುರಾಣಾಂತರ್ಗತ

# ರಜತಪೀಠ ಮಹಾತ್ಮ್ಯೆ

*(ಹಿಂದಿನ ಸಂಚಿಕೆಯಿಂದ ಮುಂದುವರಿದುದು..........)*

**ಸೂತ ಉವಾಚ**

**ವಾಮಹಸ್ತೇ ದಾಮಧರಂ ದಕ್ಷೇ ಮಂಥಾನಮಂಡಿತಂ ।**
**ಶಿಖಾಬಂಧತ್ರಯೋಪೇತಂ ಲಂಬಾಲಕವಿಭೂಷಿತಂ ॥೩೬॥**

**ಚಾರ್ವಂಗ ಸುಂದರಂ ಚಾರು ಕರ್ಣೋದ್ಭಾಸಿತಕುಂಡಲಂ ।**
**ತ್ರಿರೇಖಕಂಬುಸಂಕಾಶಗ್ರೀವಂ ಕೌಸ್ತುಭ ಶೋಭಿತಂ ॥೩೭॥**

**ಕರಭೋರುಲಸಜ್ಜಾನುಜಂಘಪಾದದ್ವಯಾಂಬುಜಂ ।**
**ವಿಶಾಲೋರಸ್ಥಳಸ್ಥೋರುಭೂಷಾ ತ್ರಿವಳಿಸುಂದರಂ ॥೩೮॥**

**ಪುಷ್ಟೋದರಂನಿಮ್ನನಾಭಿಂ ಪೀತವಸ್ತ್ರೋಪಶೋಭಿತಂ ।**
**ನೂಪುರಾಂಗದಸತ್ಕಾಂಚೀ ಕಂಕಣೈಶ್ಚವಿಭೂಷಿತಂ ॥೩೯॥**

**ಮುದ್ರಿಕಾ ಹಾರ ಕೇಯೂರ ಶ್ರೀವತ್ಸಾಂಕೈರಲಂಕೃತಂ ।**
**ಬಾಲಗೋಪಾಲವಪುಷಂ ಜಗನ್ನಾಥಮಧೋಕ್ಷಜಂ ॥೪೦॥**

ಎಡಗೈಯಲ್ಲಿ ಹಗ್ಗವನ್ನು ಪಿಡಿದು, ಬಲಗೈಯಲ್ಲಿ ಕಡಗೋಲಿನಿಂದ ಶೋಭಿಸುತ್ತಿರುವ, ಮೂರು ಜಡೆಗಳಿಂದ ಕೂಡಿರುವ, ಉದ್ದವಾದ ಮುಂಗುರುಳುಗಳಿಂದ ಶೋಭಿಸುತ್ತಿರುವ, ಸುಂದರವಾದ ಅವಯವಗಳಿಂದ ಸುಂದರನಾಗಿರುವ, ಕಿವಿಯಲ್ಲಿ ಶೋಭಿಸುತ್ತಿರುವ ಕುಂಡಲಗಳುಳ್ಳ, ಮೂರು ರೇಖೆಯಿಂದ ಕೂಡಿ ಶಂಖದಂತೆ ಶೋಭಿಸುತ್ತಿರುವ ಕುತ್ತಿಗೆಯುಳ್ಳ, ಕೌಸ್ತುಭಮಣಿಯಿಂದ ಶೋಭಿಸುತ್ತಿರುವ, ಆನೆಯ ಸೊಂಡಿಲಿನಂತೆ ತೊಡೆಗಳುಳ್ಳ, ಸುಂದರವಾದ ಮೊಣಕಾಲು, ಪಾದಕಮಲಗಳೆರಡು,

**ಅವನಿಗೆ ಅರ್ಪಿಸಿದ ಪವಿತ್ರಾನ್ನವನ್ನು ಸ್ವೀಕರಿಸಬೇಕು.**



ವಿಶಾಲವಾದ ಎದೆಯಲ್ಲಿರುವ ಆಭರಣಗಳು, ತ್ರಿವಳಿಗಳಿಂದ ಶೋಭಿಸುತ್ತಿರುವ ಪುಷ್ಟವಾದ ಉದರ, ಆಳವಾದ ನಾಭಿ, ಪೀತಾಂಬರ, ಕಾಲ್ಗೆಜ್ಜೆ, ಸೊಂಟಪಟ್ಟಿ, ಬಳೆಗಳಿಂದ, ಉಂಗುರ, ಹಾರ, ಕಡಗಗಳಿಂದ, ಶ್ರೀವತ್ಸಚಿಹ್ನೆಯಿಂದ ಅಲಂಕೃತನಾಗಿರುವ ಬಾಲಗೋಪಾಲವೇಷಧಾರಿಯಾದ, ಜಗದೊಡೆಯನಾದ, ಬಾಹ್ಯ ಇಂದ್ರಿಯಗಳಿಗೆ ಗೋಚರಿಸದ ಶ್ರೀಕೃಷ್ಣನನ್ನು

**ಜನಾನ್ವಿಡಂಬಯಂತೀ ಸಾ ನಿತ್ಯಂ ತತ್ಪ್ರತಿಮಾಗತಂ ।**
**ಪೂಜಯಾಮಾಸ ವಿಭವೈಃ ಸಾಕ್ಷಾತ್ ತಂ ಪೂಜಯತ್ಯಪಿ ॥೪೧॥**

ರುಗ್ಮಿಣೀದೇವಿಯು ಸಾಕ್ಷಾತ್ ಶ್ರೀಕೃಷ್ಣನನ್ನು ನಿತ್ಯವೂ ಪೂಜಿಸುವಳಾದರೂ, ಜನರನ್ನು ಅನುಕರಿಸುವವಳಾಗಿ, ಆ ಪ್ರತಿಮಾಂತರ್ಗತನಾದ ಶ್ರೀಹರಿಯನ್ನು ವೈಭವದಿಂದ ಪೂಜಿಸಿದಳು.

**ಕೃಷ್ಣಾವತಾರೇಽವಸಿತೇ ಫಲ್ಗುನೋ ದ್ವಾರಕಾ ಸ್ಥಿತಾಂ ।**
**ಸ್ಥಾಪಯಾಮಾಸ ತಾಮರ್ಚಾಮುತ್ತಮಾಂ ರುಗ್ಮಿಣೀವನೇ ॥೪೨॥**

ಶ್ರೀಕೃಷ್ಣಾವತಾರವು ಸಮಾಪ್ತಿಯಾಗುತ್ತಿರಲು ಅರ್ಜುನನು ದ್ವಾರಕೆಯಲ್ಲಿದ್ದ ಉತ್ತಮವಾದ ಆ ಪ್ರತಿಮೆಯನ್ನು ರುಗ್ಮಿಣೀವನದಲ್ಲಿ ಸ್ಥಾಪಿಸಿದನು.

**ಗೋಪೀಚಂದನಲಗ್ನತ್ವಾದ್ ಗೋಪೀಚಂದನಬುದ್ಧಯಃ ।**
**ಪ್ರತಿಮಾಂ ತಾಂ ಸಮಾಜಹ್ರುರ್ದೈವಾತ್ ಸಾಯಂತ್ರಿಕಾಃ ಕಲೌ ॥೪೩॥**

ಕಲಿಯುಗದಲ್ಲಿ ನಾವಿಕರು, ಆ ವಿಗ್ರಹವು ಗೋಪೀಚಂದನದಿಂದ ಲಿಪ್ತವಾದ್ದರಿಂದ ಅದನ್ನು ಗೋಪೀಚಂದನವೆಂಬ ಬುದ್ಧಿಯಿಂದ ದೈವೇಚ್ಛೆಯಂತೆ ತಂದರು.

**ರೌಪ್ಯಪೀಠಾಂತಿಕಗ್ರಾಮೇ ವಾರ್ಧೌಭಿನ್ನೋಭವತ್ ಪ್ಲವಃ ।**
**ವಿಷ್ಣ್ವಾಜ್ಞಯಾ ಮರ್ತ್ಯಲೋಕೇ ಜನಿಷ್ಯನ್‌ಜ್ಞಾನಸಿದ್ಧಯೇ ॥೪೪॥**

ಆ ನಾವೆಯು ರಜತಪೀಠದ ಸಮೀಪದ ಹಳ್ಳಿಯ ಬಳಿ ಇರುವ ಹಡಗಿನಲ್ಲಿ

**ಶ್ರೀ ಕೃಷ್ಣನ ಮೂರ್ತಿಯನ್ನು ಸಂದರ್ಶಿಸಬೇಕು.**

ಭಿನ್ನವಾಯಿತು.  ಅನಂತರದಲ್ಲಿ ಶ್ರೀಹರಿಯ ಆಜ್ಞೆಯಂತೆ ಮನುಷ್ಯಲೋಕದಲ್ಲಿ ತತ್ವಜ್ಞಾನ ಪ್ರಚಾರಕ್ಕಾಗಿ ಅವತರಿಸುವ

**ಮಾತರಿಶ್ವಾಂಬುಧೌ ಮಗ್ನಾಂ ಪ್ರತಿಮಾಂ ತಾಂ ಮಹಾಮುನಿಃ ।**
**ಮಹಾನುಭಾವೋ ವಿಜ್ಞಾಯ ಸಮಾನೀಯ ದಯಾನಿಧಿಃ ॥೪೫॥**

ಮಹಾಮುನಿಗಳಾದ, ಮಹಾನುಭಾವರಾದ, ಕರುಣಾಸಮುದ್ರರಾದ, ವಾಯುದೇವರು (ಶ್ರೀಮಧ್ವರು) ಸಮುದ್ರದಲ್ಲಿ ಮುಳುಗಿದ ಆ ಪ್ರತಿಮೆಯನ್ನು ತಿಳಿದು ಅದನ್ನು ತಂದು

**ನಾಗಾಸನಸ್ಯ ನಿಕಟೇ ವಿಧಿನಾ ಸ್ಥಾಪಯಿಷ್ಯತಿ ।**
**ಸ ಯೋಗೀ ಮಾತರಿಶ್ವಾಂಶಃ ಸ್ವಯಮಭ್ಯರ್ಚ್ಯ ತಂ ಹರಿಂ  ॥೪೬॥**

ಅನಂತಾಸನ ದೇವಾಲಯದ ಸಮೀಪದಲ್ಲಿ ಶಾಸ್ತ್ರೋಕ್ತ ರೀತಿಯ ಪ್ರತಿಷ್ಠಾಪಿಸುತ್ತಾರೆ. ವಾಯುದೇವರ ಅಂಶರಾದ ಆ ಯೋಗಿಗಳು ತಾವೇ ಆ ಪ್ರತಿಮೆಯನ್ನು ಪೂಜಿಸಿ

**ಸ್ವಯಂ ಬದರಿಕಾಂ ಯಾಸ್ಯನ್ ಆದಿಷ್ಯತಿ ತತೋ ಮುನಿಃ ।**
**ತಚ್ಛಿಷ್ಯಾಶ್ಚ ಮಹಾತ್ಮನೋ ಯತಯಃ ಕೃಷ್ಣಮಾದರಾತ್ ॥೪೭॥**

ತಾವು ಉತ್ತರಬದರಿಗೆ ತೆರಳುವಾಗ ತಮ್ಮ ಶಿಷ್ಯರಿಗೆ ಪೂಜಿಸಲು ಆದೇಶಿಸುತ್ತಾರೆ. ಮಹಾತ್ಮರಾದ ಆ ಯತಿಶಿಷ್ಯರು ಕೃಷ್ಣನನ್ನು ಆದರದಿಂದ

**ಪೂಜಯಿಷ್ಯಂತಿ ವಿಧಿವತ್ ತೇಷಾಂ ವಂಶಧರಾಸ್ತಥಾ ।**
**ಪೂಜಯಿಷ್ಯಂತಿ ತಂ ದೇವಂ ಭಕ್ತೇಷ್ಟದಮಖಂಡಿತಮ್ ॥೪೮ ॥**

ವಿಧಿಪೂರ್ವಕವಾಗಿ ಪೂಜಿಸುತ್ತಾರೆ. ಹಾಗೆಯೇ ಅವರ ಪರಂಪರೆಯಲ್ಲಿ ಬರುವ ಯತಿಗಳು ಭಕ್ತರ ಅಭೀಷ್ಟವನ್ನು ಪೂರೈಸುವ, ದೋಷದೂರನಾದ ಶ್ರೀಕೃಷ್ಣನನ್ನು ಪೂಜಿಸುತ್ತಾರೆ.

**ತದ್ದರ್ಶನಾಚ್ಚ ಭಜನಾತ್ ಸ್ನಾನಾತ್ತೀರ್ಥೇ ಪುರಸ್ಥಿತೇ  ।**
**ಕಲೌ ಜನಾ ಅನಾಯಾಸಾತ್ ಪೂತಾ ಯಾಸ್ಯಂತಿ ಸದ್ಗತಿಮ್॥೪೯॥**

**ಪ್ರತಿದಿನ ಆತನನ್ನು ಪೂಜಿಸಬೇಕು**



ಕಲಿಯುಗದಲ್ಲಿ ಆ ಶ್ರೀಕೃಷ್ಣನ ದರ್ಶನದಿಂದ, ಆರಾಧನೆಯಿಂದ, ಮುಂಭಾಗದಲ್ಲಿರುವ (ಮಧ್ವ) ತೀರ್ಥಸ್ನಾನದಿಂದ ಅನಾಯಾಸವಾಗಿ ಪವಿತ್ರರಾಗಿ ಸದ್ಗತಿಯನ್ನು ಹೊಂದುತ್ತಾರೆ.

**ಐಹಿಕಂ ಚಾಮುಷ್ಮಿಕಂ ಚ ಯದ್ಯದಾತ್ಮಮನೋಗತಮ್ ।**
**ತತ್ಸರ್ವಂ ಸೇವನಾತ್ತಸ್ಯ  ಕಲೌ ಯಾಸ್ಯಂತಿ ತೇ ನರಾಃ ॥೫೦॥**

ಕಲಿಯುಗದಲ್ಲಿ ಆ ಶ್ರೀಕೃಷ್ಣನ ಸೇವೆಯಿಂದ ಮನುಷ್ಯರು ಈ ಲೋಕದ, ಪರಲೋಕದ, ಮನಸ್ಸಿನಲ್ಲಿ ಯಾವ ಬಯಕೆಗಳಿದೆಯೋ ಆ ಎಲ್ಲ ಬಯಕೆಗಳನ್ನು ಹೊಂದುತ್ತಾರೆ.

**॥ ಸ್ಕಾಂದಪುರಾಣದಲ್ಲಿನ ಸಿಹ್ಯಾದ್ರಿಕಾಂಡದೊಳು, ಉಡುಪೀ ಮಹಾತ್ಮೈದಲ್ಲಿ**
**ನಾಲ್ಕನೇ ಅಧ್ಯಾಯದ ಭಾವನಿರೂಪಣವು ಸಮಾಪ್ತವಾಯಿತು ॥**

ಈ ಅಧ್ಯಾಯದ ಅನೇಕ ಶ್ಲೋಕಗಳನ್ನು ಪಲಿಮಾರುಮಠದ ಯತಿಗಳಾಗಿದ್ದ ಶ್ರೀರಘುವರ್ಯತೀರ್ಥರು ಪ್ರಮೇಯನವಮಾಲಿಕಾ ಗ್ರಂಥ ವ್ಯಾಖ್ಯಾನವಾದ ಸೌರಭ ಪ್ರಕಾಶಿಕೆಯಲ್ಲಿ ಉಲ್ಲೇಖಿಸಿದ್ದು ಆ ಶ್ಲೋಕಗಳು ಅನೇಕ ಕಡೆಗಳಲ್ಲಿ ಇಲ್ಲಿರುವ ಶ್ಲೋಕಗಳಿಗಿಂತ ಸಂಪೂರ್ಣ ಭಿನ್ನವಾಗಿವೆ. ೪೪ನೇ  ಶ್ಲೋಕದ ಮುಂದಿನ ಭಾಗ ಹೀಗಿದೆ.

**ರೌಪ್ಯಪೀಠಾಂತಿಕಗ್ರಾಮೇ ವಾರ್ಧೌ ಭಿನ್ನೋಽಭವತ್ ಪ್ಲವಃ ।**
**ತದರ್ಥಸೂಚಕೇನಾಸೌ ಗ್ರಾಮೋ ನಾಮ್ನಾ ಯುತೋಽಭವತ್॥**

ರೌಪ್ಯಪೀಠದ ಸಮೀಪದಲ್ಲಿರುವ ಹಳ್ಳಿಯ ಬಳಿಯ ಸಮುದ್ರದಲ್ಲಿ ನಾವೆಯು (ಬಿರುಗಾಳಿಗೆ ಸಿಕ್ಕಿ) ಒಡೆಯಿತು. ಅದರ ಸೂಚನೆಗಾಗಿಯೇ ಆ ಹಳ್ಳಿಯು ಅದೇ ಹೆಸರಿನಿಂದಲೇ (ಒಡಬಾಂಡೇಶ್ವರ) ಕೂಡಿದ್ದಾಯಿತು.

**ಶ್ರೇಯೋ ವಿಘ್ನವಿಘಾತಾರ್ಥಂ ಸಜ್ಜನಾನಾಂ ದಯಾಂಬುಧಿಃ ।**
**ಚಿಂತಯನ್ ಸರ್ವವಿನ್ಮಧ್ವೋ ಜಗಾಮ ಚ ತದಂತಿಕಮ್ ॥**

ದಯಾಸಮುದ್ರರಾದ, ಸರ್ವಜ್ಞರಾದ ಮಧ್ವರು ಸಜ್ಜನರ ಶ್ರೇಯಸ್ಸಿಗೆ ಉಂಟಾಗುವ ವಿಘ್ನವನ್ನು ನಾಶಮಾಡುವ ಉಪಾಯವನ್ನು ಚಿಂತಿಸಿದವರಾಗಿ ಸಮುದ್ರತೀರವನ್ನು ಸೇರಿದರು.

(22ನೇ ಪುಟದಲ್ಲಿ....)

**ಕೃಷ್ಣನ ಪಾದದ ತುಳಸಿಯನ್ನು ಆಘ್ರಾಣಿಸಬೇಕು.**

# ತೈತ್ತಿರೀಯೋಪನಿಷತ್

ಬರಹ: ಪಿ. ವೆಂಕಟರಮಣ ಆಚಾರ್ಯ, ಉಡುಪಿ ಪ್ರವಚನ:ಬನ್ನಂಜೆ ಗೋವಿಂದಾಚಾರ್ಯ

**ತನ್ಮಾಮವತು । ತದ್ ವಕ್ತಾರಮವತು ।**

**ತನ್ಮಾಮವತು**-ಅದು ನನ್ನನ್ನು ರಕ್ಷಿಸಲಿ.

ಇಷ್ಟರವರೆಗಿನ ವಾಕ್ಯಗಳನ್ನು ನೋಡುವಾಗ ಭೃಗು ಪ್ರಾಣನೊಡನೆ ಮಾತನಾಡುತ್ತಾ ಹೇಳಿರಬೇಕು ಎಂದು ಕಾಣಿಸುತ್ತದೆ. ಮುಂದಿನ ನಾಲ್ಕು ವಾಕ್ಯಗಳನ್ನು ಕಂಡಾಗ ತೀರ ಭಿನ್ನರೀತಿಯಲ್ಲಿ ಇರುವ ಹಾಗೆ ಕಾಣಿಸುತ್ತದೆ.

ಹಿಂದಿನ ಮಂತ್ರದವರೆಗೆ ಭೃಗುವು ಪ್ರಾಣನೊಡನೆ ಮಾತನಾಡುತ್ತಾ ಇದ್ದುದರಿಂದ ಈ ಮಂತ್ರದಲ್ಲಿಯೂ 'ನೀನು ರಕ್ಷಿಸು' ಎಂದು ಹೇಳಬೇಕಿತ್ತು. ಅಥವಾ 'ಅವನು ನನ್ನನ್ನು ರಕ್ಷಿಸಲಿ' ಎಂದು ಹೇಳಬೇಕಿತ್ತು. ಆದರೆ ಇಲ್ಲಿ ಹಾಗೆ ಹೇಳಲಿಲ್ಲ. 'ಅದು ನನ್ನನ್ನು ರಕ್ಷಿಸಲಿ' ಎಂದು ನಪುಂಸಕ ಲಿಂಗದಲ್ಲಿ ಹೇಳಿದ್ದಾರೆ. ಇದಕ್ಕೂ ಒಂದು ಕಾರಣ ಇದೆ. ಇದು ಕೇವಲ ಪ್ರಾಣನಿಗೆ ಮಾತ್ರ ಸಂಬಂಧಪಟ್ಟದ್ದಲ್ಲ. ನಾರಾಯಣ-ಬ್ರಹ್ಮ-ಪ್ರಾಣ ಎಲ್ಲರೂ ನನ್ನನ್ನು ರಕ್ಷಿಸಲಿ ಎಂಬ ಧ್ವನಿ ಈ ವಾಕ್ಯದಲ್ಲಿ ಅಡಗಿದೆ. ಭೃಗುವು ಹೀಗೆ ಪರೋಕ್ಷವಾಗಿ ಹೇಳಲು ಕಾರಣವೇನು?

ಋಷಿಗಳು ಧ್ಯಾನ ಮಾಡುತ್ತಾ ಸಮಾಧಿ ಸ್ಥಿತಿಯಲ್ಲಿದ್ದಾಗ ಅವರಿಗೆ ಕೆಲವು ಕ್ಷಣಕಾಲ ಮಾತ್ರ ಭಗವಂತನ ಸಾಕ್ಷಾತ್ಕಾರ ಆಗುತ್ತದೆ. ಸಾಕ್ಷಾತ್ಕಾರ ಆದ ತಕ್ಷಣ ತಾವು ಕಂಡದ್ದನ್ನು ಹೇಳುತ್ತಾರೆ. ಮುಂದಿನ ಕ್ಷಣದಲ್ಲಿ ಅದು ಅದೃಶ್ಯವಾಗಿ ಹೋದ ಕಾರಣ ಪರೋಕ್ಷವಾಗಿ ಸ್ತುತಿಸುತ್ತಾರೆ. ಹೀಗೆ ಪರೋಕ್ಷ ಹಾಗೂ ಪ್ರತ್ಯಕ್ಷ ವಾಕ್ಯಗಳು ವೈದಿಕ ಸಾಹಿತ್ಯದಲ್ಲಿ ಬಹಳಷ್ಟು ಕಾಣಸಿಗುತ್ತವೆ.

ಋಗ್ವೇದದ ಮೊದಲ ಒಂಭತ್ತು ಋಕ್‌ಗಳಿಂದ ಕೂಡಿದ ಅಗ್ನಿ ಸೂಕ್ತವನ್ನು (ಅಗ್ನಿಮೀಳೆ...........) ಪಠಿಸಬೇಕಾದರೆ ಸಾಧಾರಣವಾಗಿ ಎರಡರಿಂದ ಮೂರು ನಿಮಿಷಗಳವರೆಗೆ ಬೇಕಾಗಬಹುದು. ಈ ಸೂಕ್ತವನ್ನು ಪಠಿಸುವಾಗ ಅಲ್ಲಲ್ಲಿ ಅಪರೋಕ್ಷ

ಹಾಗೆಂದು ಉಳಿದ ದೇವತೆಗಳಲ್ಲಿ ತಿರಸ್ಕಾರ ಬೇಡ.



ವಾಕ್ಯಗಳಿವೆ. ಅದರ ಮುಂದಿನ ಸಾಲಿನಲ್ಲಿ ಪರೋಕ್ಷವಾಕ್ಯಗಳು ಕಂಡುಬರುತ್ತವೆ. ಇದಕ್ಕೆ ಕಾರಣ ಋಷಿಗಳು ಅಗ್ನಿಯನ್ನು ಸ್ತುತಿಸುವಾಗ ಅಥವಾ ಧ್ಯಾನಿಸುವಾಗ ಅವರಿಗೆ ಕೆಲವು ಕ್ಷಣಗಳಲ್ಲಿ ಭಗವಂತನ ಸಾಕ್ಷಾತ್ಕಾರ ಆಗಿ ತಾವು ಪ್ರತ್ಯಕ್ಷ ಕಂಡ ದೃಶ್ಯವನ್ನು ವರ್ಣಿಸುತ್ತಾರೆ. ಮುಂದಿನ ಕ್ಷಣದಲ್ಲಿ ಅವರ ಕಣ್ಣೆದುರಿನಿಂದ ಅಗ್ನಿಯು ಮರೆಯಾದ ಕಾರಣ ಪುನಃ ತಮ್ಮ ವಾಕ್ಯಗಳನ್ನು ಹೇಳುತ್ತಾರೆ. ಅವರಿಗೆ ಪೂರ್ತಿ ಅಗ್ನಿಸೂಕ್ತ ಹೇಳುವವರೆಗೂ ಸಾಕ್ಷಾತ್ಕಾರ ಆಗುತ್ತಾ ಇರುವುದಿಲ್ಲ. ಸರಿಯಾಗಿ ಕಾಣಬೇಕೆಂದಾಗ ಮರೆಯಾಗಿ ಬಿಡುತ್ತದೆ. ಹೀಗೆ ವೇದಗಳಲ್ಲಿ ಎಲ್ಲ ಕಡೆಯೂ ಪ್ರತ್ಯಕ್ಷ ಹಾಗೂ ಪರೋಕ್ಷವಾಕ್ಯಗಳನ್ನು ನಾವು ಕಾಣಬಹುದು.

ಇಲ್ಲಿಯೂ ಭೃಗುವಿಗೆ ಪ್ರಾಣದೇವ ಮೊದಲು ಕಂಡ. ನಂತರ ಮರೆಯಾದ. ಆದ್ದರಿಂದಲೇ ಅದು ನನ್ನನ್ನು ರಕ್ಷಿಸಲಿ ಎಂದು ಪರೋಕ್ಷವಾಗಿ ಪ್ರಾರ್ಥಿಸಿದ. ಪ್ರಾಣಶಕ್ತಿಯೇ ಹಾಗೆ. ನಮಗೆ ಪ್ರಾಣ ಎಷ್ಟು ಪ್ರತ್ಯಕ್ಷನೋ ಅಷ್ಟೆ ಅಪ್ರತ್ಯಕ್ಷನು ಹೌದು. ಗಾಳಿ ಯಾವಾಗಲು ಇದ್ದೇ ಇದೆ. ಆದರೆ ಅದು ಜೋರಾಗಿ ಬೀಸಿದಾಗ ಮಾತ್ರ ನಮಗೆ ಅದರ ಸ್ಪಷ್ಟ ಅರಿವು ಉಂಟಾಗುತ್ತದೆ.

**ತದ್ ವಕ್ತಾರಮವತು** – ಎಂಬುದು ಭೃಗುವಿನ ನಂತರದ ಪ್ರಾರ್ಥನೆ. 'ಯಾರು ಈ ಮಂತ್ರವನ್ನು ಹೇಳುತ್ತಾರೋ ಅವರನ್ನು ರಕ್ಷಿಸಲಿ' ಎಂಬುದು ಮೇಲ್ನೋಟಕ್ಕೆ ಕಾಣುವ ಅರ್ಥ.

ಭೃಗು ಶಿಷ್ಯರಿಗೆ ಪಾಠ ಹೇಳಿದ ನಂತರ ಶಿಷ್ಯರು ಇನ್ನೊಬ್ಬರಿಗೆ ಪಾಠ ಹೇಳುವಾಗ ಅದು ನನ್ನನ್ನು ರಕ್ಷಿಸಲಿ ನನಗೆ ಪಾಠ ಹೇಳಿದ ಗುರುಗಳನ್ನು ರಕ್ಷಿಸಲಿ ಎಂದು ಹೇಳುವುದು ಸರಿ. ಆದರೆ ಇಲ್ಲಿ ಭೃಗು ಯಾಕೆ ಹೀಗೆ ಹೇಳಿದ? ಭೃಗು ತನ್ನನ್ನು ರಕ್ಷಿಸಲಿ ಎಂದು ಹೇಳಿಕೊಂಡ ಅಲ್ಲದೆ ತನ್ನಂತೆ ಯಾರೆಲ್ಲ ಪಾಠ ಹೇಳುತ್ತಾರೋ ಅವರನ್ನು ಸಹ ರಕ್ಷಿಸಲಿ ಎಂದು ಇದರ ಅರ್ಥ.

ಬ್ರಹ್ಮನಿಗೆ ಆಗುವಾಗ ನನ್ನನ್ನು ರಕ್ಷಿಸಲಿ ಅಲ್ಲದೆ ಮುಂದೆ ಯಾರೆಲ್ಲ ಇದನ್ನು ಉಪದೇಶ ಮಾಡುತ್ತಾರೋ ಅವರೆಲ್ಲರನ್ನು ರಕ್ಷಿಸಲಿ ಎಂದು ಅರ್ಥವಾಗುತ್ತದೆ.

ಮಾಮ್ ಎಂದರೆ ಜ್ಞಾನ. ಅದು ನನ್ನಲ್ಲಿಯ ಜ್ಞಾನವನ್ನು ರಕ್ಷಿಸಲಿ. ಅಲ್ಲದೆ ಜ್ಞಾನವನ್ನು ಪಡೆದ ಶಿಷ್ಯನು ಸಹ ಈ ಜ್ಞಾನದ ದುರುಪಯೋಗ ಮಾಡದಂತೆ ರಕ್ಷಿಸಲಿ. ಆದ್ದರಿಂದ ನನ್ನ ಜ್ಞಾನದ ದುರುಪಯೋಗ ಆಗದಂತೆ ರಕ್ಷಿಸು. **(ಸಶೇಷ)**

ಎಲ್ಲಾ ದೇವತೆಗಳ ಬಗ್ಗೆ ಚೆನ್ನಾಗಿ ಅರಿತು ಗೌರವಿಸಬೇಕು.

ಧಾರ್ಮಿಕ ಚರ್ಚೆ

# ಸಾಯಂ ಸಂಧ್ಯೆಯಲ್ಲಿ ಕುಳಿತು ಅರ್ಘ್ಯಪ್ರದಾನ

-ಅನಂತಕೃಷ್ಣಾಚಾರ್ಯ

~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~

ಸಾಯಂ ಸಂಧ್ಯಾವಂದನೆಯಲ್ಲಿ ಸೂರ್ಯಾರ್ಘ್ಯ ಪ್ರದಾನ ಹೇಗೆ? ಎಂಬ ವಿಷಯದಲ್ಲಿ ಋಕ್ ಶಾಖಿಗಳು ನಿಂತೇ ಅರ್ಘ್ಯಪ್ರದಾನ ಮಾಡಬೇಕೆಂದು ಕಳೆದ ಸಂಚಿಕೆಯಲ್ಲಿ ವಿ॥ ಬೆ.ನಾ. ವಿಜಯೀಂದ್ರಾಚಾರ್ಯರು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಆದರೆ ಈ ವಿಷಯದಲ್ಲಿ ಇನ್ನಷ್ಟು ಚಿಂತಿಸುವ ಅಗತ್ಯವಿದೆಯೆಂದು ಕಾಣುತ್ತದೆ.

ಮಾಧ್ವರ ನಿತ್ಯಕರ್ಮಾನುಷ್ಠಾನಕ್ಕೆ ಮುಖ್ಯ ಆಧಾರ ಗ್ರಂಥ ಆಚಾರ್ಯ ಶ್ರೀಮಧ್ವರ 'ಸದಾಚಾರ ಸ್ಮೃತಿ'. ಆಚಾರ್ಯರು ಸಕಲ ಶ್ರುತಿ-ಸ್ಮೃತಿಗಳನ್ನು ಅವಲೋಕಿಸಿ, ವಿಶೇಷವಾಗಿ ವ್ಯಾಸಸ್ಮೃತಿಯನ್ನು ಆಧಾರವಾಗಿ ಇರಿಸಿಕೊಂಡು ರಚಿಸಿದ ಗ್ರಂಥ ಸದಾಚಾರಸ್ಮೃತಿ. ಉಳಿದ ಸ್ಮೃತಿಗಳು ನಿರ್ಣೇಯಶಾಸ್ತ್ರಗಳಾದರೆ ಸದಾಚಾರಸ್ಮೃತಿ ನಿರ್ಣಾಯಕ ಶಾಸ್ತ್ರ. ಆದ್ದರಿಂದ ಸದಾಚಾರಸ್ಮೃತಿಯಲ್ಲಿ ತಿಳಿಸಿದಂತೆಯೇ ಕರ್ಮಾಚರಣೆಯನ್ನು ನಡೆಸುವುದು ಯುಕ್ತವಾದುದು. ಈ ಎಲ್ಲ ವಿಷಯಗಳನ್ನು 'ಸ್ಮೃತ್ಯರ್ಥಸಾಗರ'ದಲ್ಲಿ ಛಲಾರಿ ಆಚಾರ್ಯರು ಸ್ಪಷ್ಟವಾಗಿ ತಿಳಿಸಿದ್ದಾರೆ.

**ನ ಚ ಸ್ಮೃತೀನಾಂ ಪ್ರಾಬಲ್ಯಂ ನಿರ್ಣೇಯತ್ವೇನ ದೌರ್ಬಲ್ಯಾತ್ । ಸದಾಚಾರ ಸ್ಮೃತ್ಯುದಾಹೃತ ವ್ಯಾಸಸ್ಮೃತೇಃ ನಿರ್ಣಾಯಕತ್ವೇನ ಪ್ರಾಬಲ್ಯಾತ್ । ತದನುಸಾರೇಣೈವ ಕರ್ಮಾನುಷ್ಠಾನಸ್ಯ ಆವಶ್ಯಕತ್ವಾತ್ ॥**

ಆದ್ದರಿಂದ ಸೂರ್ಯಾರ್ಘ್ಯದ ವಿಷಯದಲ್ಲಿ ಆಚಾರ್ಯರು 'ಸದಾಚಾರ ಸ್ಮೃತಿ'ಯಲ್ಲಿ ಏನು ಆದೇಶಿಸಿದ್ದಾರೆಂದು ಮೊದಲು ಸ್ಪಷ್ಟವಾಗಿ ತಿಳಿದು ಅದರಂತೆ ಕರ್ಮಾನುಷ್ಠಾನವನ್ನು ನಡೆಸುವುದು ಅತ್ಯಗತ್ಯ.



### ಆಚಾರ್ಯರ ಅಭಿಪ್ರಾಯವೇನು?

ಆಚಾರ್ಯರು ಪ್ರಾತಃಕರ್ಮಾನುಷ್ಠಾನವನ್ನು ವಿವರಿಸುತ್ತಾ ಸ್ನಾನ, ಅರ್ಘ್ಯ, ತರ್ಪಣವನ್ನು ತಿಳಿಸಿ ಸೂರ್ಯಮಂಡಲ ಮಧ್ಯವರ್ತಿಯಾದ ವಿಷ್ಣುವನ್ನು ಧ್ಯಾನಿಸುತ್ತಾ ಗಾಯತ್ರೀಮಂತ್ರವನ್ನು ಜಪಿಸಬೇಕು. ಗರಿಷ್ಠಸಾವಿರ, ನೂರುಮಧ್ಯಮ, ಹತ್ತುಕನಿಷ್ಠ ಸಂಖ್ಯೆಗಳು. ಸೂರ್ಯದರ್ಶನವಾಗುವವರೆಗೆ ನಿಂತು ಜಪ. ಬಳಿಕ ಕುಳಿತುಕೊಳ್ಳಲೂಬಹುದು ಎಂದು ತಿಳಿಸಿದ ಬಳಿಕ

**ಪೂರ್ವಾಂ ಸಂಧ್ಯಾಂ ಸನಕ್ಷತ್ರಾಂ ಉತ್ತರಾಂ ಸದಿವಾಕರಾಮ್ ।**
**ಉತ್ತರಾಮುಪವಿಶ್ಯೈವ ವಾಗ್ಯತಃ ಸರ್ವದಾ ಜಪೇತ್ ॥**

ಎಂದು ಆದೇಶಿಸುತ್ತಾರೆ. ಈ ಶ್ಲೋಕವನ್ನು ಅರ್ಥೈಸುವಲ್ಲಿ ಕೆಲವರು ಗೊಂದಲಗೊಂಡಂತೆ ಕಾಣುತ್ತದೆ.

ಆಚಾರ್ಯರು ಜಪದ ಪ್ರಕರಣದಲ್ಲಿ ಈ ಶ್ಲೋಕವನ್ನು ತಿಳಿಸಿದ್ದರಿಂದ ಇದು ಕೇವಲ ಗಾಯತ್ರೀ ಜಪಕ್ಕೆ ಸಂಬಂಧಿಸಿದ ಶ್ಲೋಕ. ಆದ್ದರಿಂದ 'ಉತ್ತರಾಮುಪವಿಶ್ಯೈವ' ಎಂದರೆ ಸಾಯಂ ಸಂಧ್ಯಾಂಗ ಗಾಯತ್ರೀ ಜಪವನ್ನು ಕುಳಿತೇ ಜಪಿಸಬೇಕು ಎಂದರ್ಥವೇ ಹೊರತು ಇದು ಸಾಯಂ ಸಂಧ್ಯಾಂಗ ಸೂರ್ಯಾರ್ಘ್ಯಕ್ಕೆ ಸಂಬಂಧಿಸಿದ್ದಲ್ಲ. ಏಕೆಂದರೆ ಅರ್ಘ್ಯಪ್ರಕರಣವನ್ನು ಮೊದಲೇ ತಿಳಿಸಿಯಾಗಿದೆ. ಆದ್ದರಿಂದ ಸಾಯಂ ಸೂರ್ಯಾರ್ಘ್ಯವನ್ನು ವಿಶೇಷವಾಗಿ ಋಕ್ ಶಾಖಿಗಳು **'ತಿಷ್ಠನ್.....ಬಹ್ವೃಚಃ** ಎಂಬ ಪ್ರಮಾಣದಂತೆ ನಿಂತೇ ಕೊಡಬೇಕು ಎಂದು ಕೆಲವರ ಅಭಿಪ್ರಾಯ.

ಆದರೆ ಮೇಲಿನ ಶ್ಲೋಕವನ್ನು ಕಂಡಾಗ ಆಚಾರ್ಯರಿಗೆ ಈ ಶ್ಲೋಕದ ಮೂಲಕ ಸಂಧ್ಯಾಕಾಲವನ್ನು ನಿರ್ಣಯಿಸುವುದು ಮುಖ್ಯವಾಗಿತ್ತು ಎಂದು ಕಾಣುತ್ತದೆ. ಆದ್ದರಿಂದಲೇ ಛಲಾರಿ ಆಚಾರ್ಯರು 'ಸ್ಮೃತ್ಯರ್ಥ ಸಾಗರ' ದಲ್ಲಿ

**ಅಥ ಸಂಧ್ಯಾವಂದನಕಾಲ ಉಕ್ತಃ ॥ ಪೂರ್ವಾಂ ಸಂಧ್ಯಾಂ ಸನಕ್ಷತ್ರಾಂ ......... ಉತ್ತರಾಮುಪವಿಶ್ಯೈವೇತ್ಯುಕ್ತಮಾಚಾರ್ಯೈಃ । ಪೂರ್ವಾಂ ಸಂಧ್ಯಾಂ ಪ್ರಾತಃ ಸಂಧ್ಯಾಂ ಉತ್ತರಾಂ ಮಾಧ್ಯಾಹ್ನಿಕೀಂ । ಪುನರುತ್ತರಗ್ರಹಣಸಾಮರ್ಥ್ಯಬಲಾತ್ । ಉತ್ತರಾಂ ಸಾಯಂಕಾಲ ಸಂಧ್ಯಾಂ ಸದಿವಾಕರಂ ಕುರ್ಯಾದಿತ್ಯರ್ಥಃ । ತಾಂ ಸಾಯಂಕಾಲ ಸಂಧ್ಯಾಂ**

(36ನೇ ಪುಟದಲ್ಲಿ..........)
~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~

**ಯುವ ಚಿಂತನ** (ಭಾಗ –31)

# ಅಪೂರ್ವ ಪ್ರಶ್ನೋತ್ತರ ಮಾಲಿಕಾ

(ಮಹಾಭಾರತದ ಅನುಶಾಸನ ಪರ್ವದ ಉಮಾಮಹೇಶ್ವರ ಸಂವಾದದ ಸಾರ)

## ಉಪವಾಸವ್ರತ ಏಕೆ?

**ಪ್ರಶ್ನೆ:–** ಎಲ್ಲ ವ್ರತಗಳು ಏಕಾದಶಿ ವ್ರತದ ಹಿಂದೆ ಎಂದು ದಾಸರ ನುಡಿ. ಏಕಾದಶಿ ವ್ರತಕ್ಕೆ ಸಮನಾದ ವ್ರತವಿಲ್ಲವೆಂದು ದಾಸರ ಅಭಿಪ್ರಾಯ. ಪುರಾಣಗಳು ಹೀಗೆ ಸಾರುತ್ತಿವೆ. ವಸ್ತುತಃ ಏಕಾದಶಿ ವ್ರತದ ಪ್ರಧಾನವಾದ ಅಂಗವೇ ಉಪವಾಸ. ಭಗವಂತನಿಗೆ ಉಪವಾಸ ಮಾಡುವ ವ್ರತವು ಪ್ರಿಯವಾಗುತ್ತದೆಯೆ? ಉಪವಾಸಕ್ಕೆ ಏಕಿಷ್ಟು ಮಹತ್ತ್ವ? ಉಪವಾಸ ಮಾಡುವುದಾದರೂ ಹೇಗೆ?

**ಉತ್ತರ:–** ಏಕಾದಶಿ ವ್ರತ ಮಾತ್ರವಲ್ಲ. ಯಾವುದೇ ಉಪವಾಸ ಮಾಡುವುದರಿಂದ ಅನೇಕ ಪ್ರಯೋಜನಗಳುಂಟು.

**ಶರೀರಮಲಶಾಂತ್ಯರ್ಥಮಿಂದ್ರಿಯೋಚ್ಛೋಷಣಾಯ ಚ ।**
**ಏಕ ಭುಕ್ತೋಪವಾಸೈಸ್ತು ಧಾರಯಂತೇ ವ್ರತಂ ನರಾಃ ॥**
**ಲಭಂತೇ ವಿಪುಲಂ ಧರ್ಮಂ ತಥಾऽಹಾರ ಪರಿಕ್ಷಯಾತ್ ॥**

ಶರೀರದ ದೋಷ ನಾಶಕ್ಕಾಗಿ, ಇಂದ್ರಿಯಗಳನ್ನು ಸುಲಭವಾಗಿ ನಿಯಂತ್ರಣಕ್ಕೆ ತರಲು ಮನುಷ್ಯರು ದಿನಕ್ಕೊಮ್ಮೆ ಆಹಾರಸೇವಿಸಿ ಅಥವಾ ಎರಡು ಹೊತ್ತು ಆಹಾರ ಸೇವಿಸದೆ ಉಪವಾಸವ್ರತವನ್ನು ಆಚರಿಸುತ್ತಾರೆ. ಹೀಗೆ ಆಹಾರವನ್ನು ಕಡಿಮೆ ಮಾಡಿದ್ದರಿಂದ ಮಹಾಪುಣ್ಯವನ್ನು ಗಳಿಸುತ್ತಾರೆ.

ಉಪವಾಸ ಎರಡು ವಿಧ. ಸ್ವಲ್ಪ ಮಾತ್ರ ಆಹಾರ ಸೇವಿಸಿ ಮಾಡುವ ಉಪವಾಸ ಒಂದು ಬಗೆಯದ್ದಾದರೆ, ಸ್ವಲ್ಪವೂ ಆಹಾರ ಸೇವಿಸದೆ ಮಾಡುವ ಉಪವಾಸ ಇನ್ನೊಂದು ಬಗೆಯದ್ದಾಗಿದೆ. ಮೊದಲ ಬಗೆಯ ಉಪವಾಸವನ್ನು 'ಒಪ್ಪತ್ತು' ಎಂದು ಕರೆಯುವುದುಂಟು. ದಶಮಿ, ದ್ವಾದಶಿ ಮುಂತಾದ ಪರ್ವದಿನಗಳಲ್ಲಿ ಈ ರೀತಿಯ ಉಪವಾಸವನ್ನು ಆಚರಿಸಬೇಕೆಂದು ಶಾಸ್ತ್ರಗಳ ನಿಯಮ. ಒಂದು ಹೊತ್ತು ಮಾತ್ರ



ಊಟಮಾಡಿ ಉಳಿದಂತೆ ಯಾವ ಆಹಾರವನ್ನು ಸ್ವೀಕರಿಸಬಾರದು. ಆದರೆ ಅಶಕ್ತರಾಗಿದ್ದ ಪಕ್ಷದಲ್ಲಿ ಲಘುವಾದ ಆಹಾರ ಅಥವಾ ಫಲಾಹಾರವನ್ನು ಮಾತ್ರ ಸ್ವೀಕರಿಸಬಹುದೆಂದು ಶಾಸ್ತ್ರಗಳೇ ರಿಯಾಯಿತಿಯನ್ನು ನೀಡಿವೆ. ಹಾಗೆಂದು ಈ ಲಘು ಆಹಾರ ಅಥವಾ ಫಲಾಹಾರ ಊಟಕ್ಕಿಂತಲೂ ಹೆಚ್ಚಾದರೆ ಪ್ರಯೋಜನವಿಲ್ಲ. ಕೇವಲ ಅಶಕ್ತಿ ನಿವಾರಣೆಗೆ ಎಷ್ಟು ಆಹಾರ ಬೇಕೋ ಅಷ್ಟನ್ನು ಮಾತ್ರ ಸ್ವೀಕರಿಸಬೇಕೆಂಬುದು ಶಾಸ್ತ್ರಗಳ ತಾತ್ಪರ್ಯ.

ಇಂದು ದಶಮಿ, ದ್ವಾದಶಿ ಮುಂತಾದ ದಿನಗಳಲ್ಲಿ ಆಚರಿಸುವ ಒಪ್ಪತ್ತನ್ನು ಕಂಡಾಗ ಬಹಳ ಆಶ್ಚರ್ಯವಾಗುತ್ತದೆ. ಇಡ್ಲಿ, ಪೂರಿ, ಚಪಾತಿ, ದೋಸೆ, ಬಗೆ ಬಗೆಯ ಭಕ್ಷ್ಯ, ಪರಮಾನ್ನಗಳು ಹೀಗೆ ಊಟಕ್ಕಿಂತಲೂ ಹೆಚ್ಚಾಗಿ ಆಹಾರವನ್ನು ಸ್ವೀಕರಿಸುವುದನ್ನು ಕಂಡಾಗ ಇದು 'ಒಪ್ಪತ್ತು' ಉಪವಾಸವಲ್ಲ ಎಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದ ದಶಮಿ, ದ್ವಾದಶಿ ಮುಂತಾದ ಹರಿದಿನಗಳಲ್ಲಿ ಒಂದು ಹೊತ್ತು ಭೋಜನವನ್ನು ಮಾಡಿ ಮತ್ತೊಮ್ಮೆ ಕೇವಲ ಅಶಕ್ತರಾಗಿದ್ದರೆ ಮಾತ್ರ ಪ್ರಾಮಾಣಿಕವಾಗಿ ಲಘು ಆಹಾರವನ್ನು ಸ್ವೀಕರಿಸುವುದರಿಂದ ಶ್ರೀಹರಿಯು ಪ್ರಸನ್ನನಾಗುತ್ತಾನೆ. ದಶಮಿ–ದ್ವಾದಶಿಯಂದು ಉಪವಾಸವನ್ನಾಚರಿಸಿದ ಫಲವು ಲಭ್ಯವಾಗುತ್ತದೆ.

ಏಕಾದಶಿಯಂದು ಎರಡನೆಯ ಬಗೆಯ ನಿರ್ಜಲ ಉಪವಾಸ. ಅಂದು ಒಂದು ಹೊತ್ತೂ ಆಹಾರವನ್ನು ಸ್ವೀಕರಿಸಲು ಶಾಸ್ತ್ರಗಳ ಒಪ್ಪಿಗೆ ಇಲ್ಲ. ರೋಗಿಗಳು, ಗರ್ಭಿಣಿಯರು, ಶಿಶುಗಳೇ ಮುಂತಾದ ಅಶಕ್ತರಿಗೆ ಮಾತ್ರ ರಿಯಾಯಿತಿ. ಇವರಿಗೂ ಯಾವ ಕಾರಣಕ್ಕೂ ಭೋಜನ ಮಾಡಲು ಸಮ್ಮತಿ ಇಲ್ಲ. ಕೇವಲ ಹಾಲು–ಹಣ್ಣುಗಳನ್ನು ಸ್ವಲ್ಪ ಮಾತ್ರ ನೀಡಿ ನಿಶ್ಶಕ್ತಿ ಬರದಂತೆ ಎಚ್ಚರ ವಹಿಸಬೇಕು. ಉಳಿದಂತೆ ಎಲ್ಲರಿಗೂ ನಿರ್ಜಲ ಉಪವಾಸ ಕಡ್ಡಾಯ. ಅದರಿಂದಲೇ ಭಗವತ್ಪ್ರೀತಿಯುಂಟಾಗಿ ಪೂರ್ಣಾನುಗ್ರಹವಾಗುತ್ತದೆಂದು ಪುರಾಣಗಳು ಸಾರುತ್ತಿವೆ.

## ಉಪವಾಸದಿಂದ ದೇವರು ತೃಪ್ತನಾಗುವುದಾದರೂ ಹೇಗೆ?

ಪ್ರಶ್ನೆ:– ಆಹಾರ ಸ್ವೀಕರಿಸದೆ ದೇಹವನ್ನು ಶೋಷಣೆ ಮಾಡಿಕೊಳ್ಳುವುದರಿಂದ ದೇವರು ತೃಪ್ತನಾಗುವುದಾದರೂ ಹೇಗೆ?

ಉತ್ತರ:– **ಬಹೂನಾಮುಪರೋಧಂ ತು ನ ಕುರ್ಯಾದಾತ್ಮಕಾರಣಾತ್ ।**
**ಜೀವೋಪಘಾತಂ ಚ ತಥಾ ಸ ಜೀವನ್ ಧನ್ಯ ಇಷ್ಯತೇ ॥**

(46ನೇ ಪುಟದಲ್ಲಿ....)

# ಜಗದ್ಗುರುಗಳ ಜಗತ್ತಿಗೆ ಮಾದರಿಯಾಗಿ ದಿನಚರಿ

-ಅನಂತಕೃಷ್ಣಾಚಾರ್ಯ,ಉಡುಪಿ

ಆಚಾರ್ಯ ಶ್ರೀಮಧ್ವರು ಸರೋವರದಲ್ಲಿ ಮಿಂದು ಆಹ್ನೀಕಕ್ಕಾಗಿ ಕುಳಿತರು. ಆಗ ಸಮೀಪದಲ್ಲೇ ಕುಳಿತಿದ್ದ ಮನಸ್ಸನ್ನು ನಿಗ್ರಹಿಸಿದ ಯತಿಯೊಬ್ಬರು ದೀಪದ ಬೆಳಕಿನಲ್ಲಿ ಆಚಾರ್ಯರು ನಿತ್ಯವೂ ಪೂಜಿಸುವ ಸಾಳಗ್ರಾಮ ಮುಂತಾದ ಭಗವಂತನ ಪ್ರತೀಕಗಳಲ್ಲಿ ಸನ್ನಿಹಿತನಾದ ಶ್ರೀಹರಿಗೆ ಅರ್ಘ್ಯಾದಿಗಳನ್ನು ಸಮರ್ಪಿಸಿ ಹಿಂದಿನ ದಿನದ, ಭಗವಂತನಿಗೆ ಅರ್ಪಿಸಿದ್ದರಿಂದ, ಆಚಾರ್ಯರು ಮುಟ್ಟಿದ್ದರಿಂದ ಬಾಡದೆ ಹಸನಾಗಿರುವ ನಿರ್ಮಾಲ್ಯ ಪುಷ್ಪದ ರಾಶಿಯನ್ನು ಒಪ್ಪವಾಗಿ ತೆಗೆದಿಟ್ಟರು.

ಆ ನಿರ್ಮಾಲ್ಯದ ಹೂವಿನಲ್ಲಿ ಸುರಿವ ವಸ್ತುವೊಂದನ್ನು ಕಣ್ಣಾರೆ ಕಂಡರೂ ಗುರುತಿಸಲಾಗದೆ ಕೆಲವು ಶಿಷ್ಯರು 'ಇದು ತುಪ್ಪವೆಂದು' ಭ್ರಮಿಸಿದರು. ಆದರೆ ಆಚಾರ್ಯರ ಮಹಿಮೆಯನ್ನು ಬಲ್ಲ ಹಿರಿಯರು 'ಅದು ಅಮೃತ'ವೆಂದು ನುಡಿದಾಗ ಆ



ಶಿಷ್ಯರು ಅಮೃತವನ್ನುಣ್ಣುವ ದೇವತೆಗಳಿಂದ ಪ್ರತಿದಿನವೂ ಸೇವಿಸಲ್ಪಡುವ ಆಚಾರ್ಯರ ಸಾಮರ್ಥ್ಯವನ್ನು ಕಂಡು ಭ್ರಮನಿರಸನಗೊಂಡು ಹಿರಿಯರ ಮಾತನ್ನು ನಂಬಿದರು.

ಆಚಾರ್ಯರು ಧ್ಯಾನಶುದ್ಧಿಗಾಗಿ ಶಿಷ್ಯರು ನಿರ್ಮಿಸಿದ್ದ ಕಾಷಾಯವಸ್ತ್ರದ ಪರದೆಯ ಮಧ್ಯದಲ್ಲಿ ಕುಳಿತು ಧ್ಯಾನಾಸಕ್ತರಾದರು. ಇತ್ತ ಸೂರ್ಯ ಉದಯಿಸತೊಡಗಿದ. ಹಕ್ಕಿಗಳ ಕಲರವ ಕೇಳತೊಡಗಿತು. ಸೂರ್ಯನ ಕಿರಣಗಳು ಕಿಟಕಿಯ ಮೂಲಕ ಹಾದು ಶಿಷ್ಯಸಮೂಹಕ್ಕೆ ಹೊತ್ತಾದುದನ್ನು ತಿಳಿಸುತ್ತ ಸಜ್ಜನರ ಗುಂಪಿನ ನಡುವಿನಿಂದ ಬಂದ ಗೆಳೆಯನಂತೆ ನೆರವಾದವು. ಕೂಡಲೆ ಶಿಷ್ಯಸಮೂಹ ಆಚಾರ್ಯರ ಪ್ರವಚನವನ್ನಾಲಿಸಲು ಅಣಿಯಾಗತೊಡಗಿತು.

ಶಿಷ್ಯಸಮೂಹ ತಮ್ಮ ಪ್ರಾತರಾಹ್ನೀಕವನ್ನು ಬಲು ಬೇಗನೆ ಮುಗಿಸಿ ಆಚಾರ್ಯರು ಪ್ರವಚನಕ್ಕೆ ಕೂಡಲು ಅಣಿಗೊಳಿಸಿದ ಎತ್ತರದ, ಅಜಿನಾದಿಗಳನ್ನು ಹಾಸಿರುವ ವ್ಯಾಖ್ಯಾನ ಪೀಠದ ಸುತ್ತ ಪ್ರವಚನವನ್ನಾಲಿಸುವ ಭಾಗ್ಯಕ್ಕಾಗಿ ಒಡನೆಯೆ ಬಂದು, ಆಗಾಗಲೆ ತಮ್ಮ ಆಹ್ನೀಕವನ್ನು ಮುಗಿಸಿ ಸಿದ್ಧರಾದ ಯತಿಶಿಷ್ಯರೊಡನೆ ಕುಳಿತರು.

ಕೆಲವರು ಅಂದು ಓದಬೇಕಾದ ಪಾಠದ ಮೊದಲಭಾಗವನ್ನು ನಿತ್ಯವೂ ನೋಡಿದ ಅಭ್ಯಾಸದಿಂದ, ಚುರುಕುತನದಿಂದ ಬೇಗನೆ ಹುಡುಕಿ ತೆರೆದು ತಯಾರಾಗಿ ಕುಳಿತರು. ಮತ್ತೆ ಕೆಲವರು ತಡವಾಗಿ ತೆರೆದರೂ ಹರಿ-ಗುರುಗಳಿಗೆ ನಮಿಸಿ ಪ್ರಯತ್ನಪೂರ್ವಕವಾಗಿ ಮೊದಲಿನವರಿಗೆ ಸರಿಸಾಟಿಯಾಗಿ ತಯಾರಾದರು. ಇದು ಸರಿಯಷ್ಟೆ. ಎಂದಿಗೂ ಪ್ರಯತ್ನವು ಮನುಷ್ಯನನ್ನು ಸಿದ್ಧಿಯತ್ತ ಕರೆದೊಯ್ಯುತ್ತದೆ ತಾನೆ.

ಹೀಗೆ ನೆರೆದ ಮಂದಿ ತಯಾರಾಗಿ, ಮಾತು ಬಿಗಿಹಿಡಿದು, ತಲೆಬಾಗಿ ಕುಳಿತಿದ್ದಾಗ ಆಚಾರ್ಯರು ಧ್ಯಾನವನ್ನು ಮುಗಿಸಿ ಸಂಜೆಯ ಮೋಡದಂಥ ಕೆಂಬಣ್ಣದ ಪರದೆಯನ್ನು ಸರಿಸಿ ಸೂರ್ಯನಿಂದಲೂ ಪೂಜಿಸಲ್ಪಡುವವರಾಗಿ, ಸೂರ್ಯನನ್ನೂ ಮೀರಿಸುವ ತೇಜೋಪುಂಜರಾಗಿ ಆ ಸಭೆಯಲ್ಲಿ ಆಕಾಶದಲ್ಲಿ ಸೂರ್ಯನು ಬೆಳಗುವಂತೆ ಬೆಳಗಿದರು.

## ಆಚಾರ್ಯರ ವ್ಯಾಖ್ಯಾನ ವೈಖರಿ

ಮೊದಲು ಪ್ರವಚನ ಶುದ್ಧಿಗಾಗಿ ಮೂರುಲೋಕಗಳ ಸಾರವಾದ ಮೂರು ವೇದಗಳ ಅರ್ಥವಾದ, ಮೂರು ವ್ಯಾಹೃತಿಗಳ ಸಾರವಾದ ಓಂಕಾರವನ್ನು ಆಚಾರ್ಯರು ಉಚ್ಚರಿಸಿದರು. ನಂತರ ಶಿಷ್ಯರು ಮಂದ್ರಸ್ವರದಲ್ಲಿ ಸ್ಫುಟವಾಗಿ ಉಪನಿಷದ್ ಭಾಗವನ್ನು

ಓದಿದ ಬಳಿಕ ಆಚಾರ್ಯರು ಪ್ರವಚನಕ್ಕೆ ತೊಡಗಿದರು. ಅದು ಸಾಮಾನ್ಯವಾದ ಪ್ರವಚನವಲ್ಲ, ಜೀವಿಗಳ ಕಿವಿಗೆ ಅಮೃತಪಾನ, ಮೋಕ್ಷಕ್ಕೆ ಸೋಪಾನ, ಅಚ್ಚರಿಯೊಳಗಚ್ಚರಿಯಾದ ಪ್ರವಚನ.

ಆಚಾರ್ಯರು ಎಲ್ಲರಿಗೂ ಉತ್ತರವನ್ನಿತ್ತರು. ಕೆಲವರು ಜಿಜ್ಞಾಸುಗಳಾಗಿ ಬಂದವರು. ಮತ್ತೆ ಕೆಲವರು ಒಳಗೆ ಮತ್ಸರವನ್ನು ತುಂಬಿಕೊಂಡು ಪರೀಕ್ಷಿಸಲು ಬಂದವರು. ಜ್ಞಾನವನ್ನರಸಿ ಬಂದ ಜಿಜ್ಞಾಸುಗಳಿಗೆ ಆಚಾರ್ಯರು ಹೊನ್ನು ಬಯಸಿ ಬಂದವರಿಗೆ ಕರ್ಣನು ಮೆಚ್ಚಿ ಹೊನ್ನನ್ನಿತ್ತಂತೆ ಸೂಕ್ತ ಉತ್ತರವನ್ನಿತ್ತು ತೃಪ್ತಿಗೊಳಿಸಿದರು. ಮಾತ್ಸರ್ಯದಿಂದ ಬಂದ ದ್ವೇಷಿಗಳಿಗೆ ಅರ್ಜುನ ಎದುರಾಳಿಗಳಿಗೆ ರೊಚ್ಚಿನಿಂದ ಬಾಣಗಳನ್ನೆಸೆದಂತೆ ಸಮರ್ಥವಾದ ಪ್ರತ್ಯುತ್ತರವನ್ನಿತ್ತು ಕಂಗೆಡಿಸಿದರು. ಹೀಗೆ ಆಚಾರ್ಯರ ಪ್ರವಚನ ಸೂರ್ಯನು ಪಶ್ಚಿಮದಿಕ್ಕಿನತ್ತ ತಿರುಗುವವರೆಗೂ, ಅಂದರೆ ಮಧ್ಯಾಹ್ನದವರೆಗೂ ಸಾಗಿತ್ತು. ಬಳಿಕ ಪ್ರವಚನವನ್ನು ಮುಗಿಸಿದ ಆಚಾರ್ಯರು ಪೂಜೆಗಾಗಿ ಮೀಯಲು ಸರೋವರದ ಬಳಿಗೆ ಬಂದರು. ಕೂಡಲೆ ಗಂಗಾದಿ ಸಕಲತೀರ್ಥಾಭಿಮಾನಿ ದೇವತೆಗಳು ಶ್ರೇಷ್ಠರಾದ ಆಚಾರ್ಯರ ಒಡನಾಟದ ಆಸೆಯಿಂದ ಸರೋವರದ ನೀರಿನಲ್ಲಿ ಬಂದು ಸನ್ನಿಹಿತರಾದರು.

ಸರೋವರದ ತಿಳಿಯಾದ ನೀರು ಮೀಯಲು ಬಂದ ಆಚಾರ್ಯರ ಪ್ರತಿಬಿಂಬವನ್ನು ಮೊದಲು ಹೊತ್ತಿತು. ಬಳಿಕ ಆಚಾರ್ಯರು ನೀರಿಗಿಳಿದ ಕೂಡಲೆ ಆಚಾರ್ಯರನ್ನೇ ಹೊತ್ತು ಯೋಗಿಯೊಬ್ಬನ ಧ್ಯಾನದ ಕ್ರಮವನ್ನು ತಿಳಿಸಿತು. ಯೋಗಿಯೊಬ್ಬನು ಮೊದಲ ಹಂತದಲ್ಲಿ ಭಗವಂತನ ಪ್ರತಿಕೃತಿಯನ್ನು ಚಿಂತಿಸುತ್ತಿರುತ್ತಾನೆ. ಬಳಿಕ ಪರಿಪಕ್ವವಾಗುತ್ತಾ ಸಾಗಿದಂತೆ, ಕಡೆಗೆ ಪೂರ್ಣ ಪರಿಪಕ್ವನಾದಾಗ ಸಾಕ್ಷಾತ್ ಭಗವಂತನ ಚಿನ್ಮಯ ಮೂರ್ತಿಯನ್ನೇ ಕಾಣುತ್ತಾನಷ್ಟೆ. .

ಮಿಂದ ಆಚಾರ್ಯರು ಅಲ್ಲಿಯೆ ಕೈಯಲ್ಲಿ ಶಂಖ ಹಿಡಿದು ಸಾಳಗ್ರಾಮದ ಶಿಲೆಗಳಿಗೆ ಅಭಿಷೇಕ ಮಾಡಿ ಯಾವ ಪಾದೋದಕವನ್ನು ಭಕ್ತಿಯುಕ್ತವಾಗಿ ಸೇವಿಸಿದರೆ ಹನ್ನೆರಡು ವರುಷ ಉಪವಾಸ ಮಾಡಿದ ಫಲವು ಒಮ್ಮೆಯೆ ದೊರಕುತ್ತದೆಯೋ ಅಂತಹ ವಿಷ್ಣುಪಾದೋದಕವನ್ನು ಸೇವಿಸಿದರು. ಹನ್ನೆರಡು ಊರ್ಧ್ವಪುಂಢ್ರಗಳನ್ನು ಶಂಖ-ಚಕ್ರ ಚಿಹ್ನೆಗಳನ್ನು ತೊಟ್ಟು ಹರಿಗೆ ಪ್ರಿಯರಾಗಿ, ಹರಿಗೆ ಬೆನ್ನುಹಾಕಿದವರಿಗೆ ತಡೆಯಲಾಗದ ಸುಡುವ ಬೆಂಕಿಯಾಗಿ ಶೋಭಿಸಿದರು.

(ಸಶೇಷ)

ದೇಶ ಸೇವೆಯನ್ನು ದೇವರ ಸೇವೆಯೆಂಬ ಭಾವನೆಯಿಂದ ಮಾಡುತ್ತಿರಿ.





# ಶ್ರೀಹರಿಭಕ್ತಿಸಾರ

-ವಿ॥ ಹಯವದನ ಪುರಾಣಿಕ, ತಿರುಪತಿ

**ಮರೆದೆನಭ್ಯುದಯದಲಿ ನಿಮ್ಮನು**
**ಮರೆಯೆನಾಪತ್ತಿನಲಿ ಪೊರೆ ಎಂ**
**ದೊರೆಯುವೆನು ಮನವೇಕಭಾವದೊಳಿಲ್ಲ ನಿಮ್ಮಡಿಯ ।**
**ಮರೆದು ಬಾಹಿರನಾದವನ ನೀ**
**ಮರೆವರೇ? ಹಸು ತನ್ನ ಕಂದನ**
**ಮರೆವುದೇ? ಮಮತೆಯಲಿ ರಕ್ಷಿಸು ನಮ್ಮನನವರತ ॥5॥**

ಸಂಪತ್ತು ಬಂದಾಗಲೆಲ್ಲ ನಾ ನಿನ್ನ ಮರೆತೆ. ಆಪತ್ತಿನಲ್ಲಿ ಮಾತ್ರ ನಾ ನಿನ್ನ ಮರೆಯಲಾರೆ. ಪೊರೆ ಎಂದು ಬೇಡಿಕೊಳ್ಳುತ್ತೇನೆ. ಹೀಗಾಗಿ ನನ್ನ ಮನಸ್ಸು ಯಾವಾಗಲೂ ಒಂದೇ ತೆರನಾಗಿಲ್ಲ. ನಿನ್ನ ಪಾದವನ್ನು ಮರೆತು ನಾನು ಭಕ್ತಿ ಶೂನ್ಯನಾದೆನೆಂದ ಮಾತ್ರಕ್ಕೆ ನೀನು ನನ್ನನ್ನು ಮರೆಯಬಹುದೇ? ಹಸು ತನ್ನ ಕಂದನನ್ನು ಮರೆಯುವುದೇ? ಅದರಿಂದ ಮಮತೆಯಿಂದ ನೀನು ನಮ್ಮನ್ನು ಸದಾ ಕಾಪಾಡು.

## ಮರೆದೆನಭ್ಯುದಯದಲಿ ನಿಮ್ಮನು

ಸುಖ ಬಂದಾಗಲೆಲ್ಲ ನಾ ನಿನ್ನ ಮರೆತೆ. ಏಕೆಂದರೆ ಸುಖ ನನ್ನನ್ನು ಮೈಮರೆಸುತ್ತದೆ. ನಿನ್ನ ನೆನಪೇ ಆಗದಂತೆ ಮಾಡುತ್ತದೆ. ಅದು ಅದರ ಸ್ವಭಾವ. ಸುಖ ಕೊಟ್ಟವನೇ ನೀನೆನ್ನುವ ಪರಿಜ್ಞಾನ ಆಗ ನನಗೆ ಇರುವುದಿಲ್ಲ. ನಿನ್ನ ನೆನಪು ನನಗೆ ಹೇಗೆ ಬಂದೀತು?

ಮತ್ತು ನಾನು ಸುಖವನ್ನು ಬಯಸಿ ಅದಕ್ಕಾಗಿ ಶ್ರಮಿಸಿದಾಗ ಅದು ಸಿಕ್ಕಿದ್ದರಿಂದ ನಾನೇ ಅದನ್ನು ಸಂಪಾದಿಸಿದೆನೆಂಬ ತಪ್ಪು ಗ್ರಹಿಕೆ ನನಗೆ ಬರುತ್ತದೆ. ಹೀಗಾಗಿ ಸುಖದಲ್ಲಿ ನನಗೆ ನಿನ್ನ ನೆನಪೇ ಆಗುವುದಿಲ್ಲ. ನಾನೇನು ಮಾಡಲಿ!

ವೇದ-ಇತಿಹಾಸ-ಪುರಾಣಗಳ ಅಭಿಪ್ರಾಯಕ್ಕೆ ವಿರುದ್ಧವಾದ ದುಷ್ಟವಾದಗಳನ್ನು ಖಂಡಿಸಿರಿ.

## ಮರೆಯೆನಾಪತ್ತಿನಲಿ, ಪೊರೆ ಎಂದೊರೆಯುವೆನು

ಸಂಕಟ ಬಂದಾಗ ಮಾತ್ರ ವೆಂಕಟರಮಣ, ನನಗೆ ನಿನ್ನ ನೆನಪಾಗುತ್ತದೆ. ಏಕೆಂದರೆ ಅದನ್ನು ಕಳೆಯಲು ನನ್ನಿಂದಾಗುವುದಿಲ್ಲ. ಅಸಹಾಯಕನಾಗಿ ನಾ ನಿನ್ನನ್ನೇ 'ಪೊರೆ' ಎಂದು ಬೇಡುತ್ತೇನೆ. ಹೀಗಾಗಿ ಆಪತ್ತಿನಲ್ಲಿ ನಾನು ನಿನ್ನನ್ನು ಮರೆಯುವುದಿಲ್ಲ.

ಆಪತ್ತನ್ನು ನಾನು ಬಯಸಲಿಲ್ಲ. ಅದನ್ನು ಹೊಂದಲು ಶ್ರಮಿಸಲಿಲ್ಲ. ಆದರೂ ನನಗೆ ಅದು ಒದಗಿ ಬಂದಿದೆ. ಅಂದರೆ ಅದು ನಿನ್ನದೇ ಕರಾಮತ್ತೆಂದು ನಿನ್ನನ್ನೇ ನೆನೆಯುತ್ತೇನೆ. ನೀನಿತ್ತ ಆಪತ್ತನ್ನು ನೀನೇ ಕಳೆಯಬೇಕೆಂದು ನಿನ್ನನ್ನೇ ಬೇಡುತ್ತೇನೆ. 'ಆಪತ್ತಿನಂತೆ ಸಂಪತ್ತೂ ನನ್ನ ಅಧೀನವಲ್ಲ' ಎಂದು ನನಗೆ ಜ್ಞಾನೋದಯವಾಗಲೆಂದೇ ನೀನು ಸಂಪತ್ತಿನ ಬೆನ್ನಲ್ಲೇ ಆಪತ್ತನ್ನೂ ಕೊಡುತ್ತಿ. ಕರುಣಾಳು ನೀನೆಂದು ನಾ ನಿನ್ನಲ್ಲಿ ಭಕ್ತಿ ಮಾಡುತ್ತೇನೆ.

## ಮನವೇಕ ಭಾವದೊಳಿಲ್ಲ

ಸಂಪತ್ತು ಬಂದಾಗ ನಾನೇ ಗಳಿಸಿದೆನೆಂಬ ಅಹಂಕಾರದಿಂದ ನಿನ್ನಲ್ಲಿ ಭಕ್ತಿ ಮಾಡುತ್ತಿಲ್ಲ. ಆಪತ್ತು ಬಂದಾಗ ಅದು ನಿನ್ನಿಂದಲೇ ಬಂದಿತೆಂದು ಎಚ್ಚೆತ್ತುಕೊಂಡು ಭಕ್ತಿಮಾಡುತ್ತೇನೆ. ಹೀಗೆ ನನ್ನ ಮನ ನಿನ್ನಲ್ಲಿ ಒಂದೇ ತೆರನಾಗಿರುವುದಿಲ್ಲ. ಸಂಪತ್ತು ಆಪತ್ತುಗಳೆರಡಕ್ಕೂ ನೀನೇ ಕಾರಣ ಎಂದು ಒಂದೇ ರೀತಿ ಭಕ್ತಿ ಮಾಡುವುದಿಲ್ಲ ಎಂದು ದಾಸರು ಕೊರಗುತ್ತಾರೆ. ವಸ್ತುತಃ ಒಂದೇ ರೀತಿ ಭಕ್ತಿ ಮಾಡದಿರುವವರನ್ನು ಎಚ್ಚರಿಸುತ್ತಿದ್ದಾರೆ.

## ಮರೆದು ಬಾಹಿರನಾದವನ ನೀ ಮರೆವರೆ?

ನಾ ನಿನ್ನ ಮರೆತು ಭಕ್ತಿಬಾಹಿರನಾದರೂ ನೀ ನನ್ನ ಮರೆಯಲಾಗದು. ಕರುಣೆ ವಾತ್ಸಲ್ಯಗಳಿಗೆ ಆಗರನಾದ ನಿನಗೆ ಅದು ಶೋಭಿಸದು. ಭಕ್ತರನ್ನು ಮಾತ್ರ ಪೊರೆಯುವೆನೆನ್ನುವಿಯಾದರೆ ನನಗೆ ಭಕ್ತಿಯನ್ನೇ ನೀಡು. ಭಕ್ತನನ್ನಾಗಿ ಮಾಡಿ ನನ್ನನ್ನು ಕಾಪಾಡು ಎನ್ನುತ್ತಾರೆ ದಾಸರು. ನಾವು ಭಗವಂತನಲ್ಲಿ ಭಕ್ತಿಯನ್ನೇ ಬೇಡಬೇಕು. ಭಕ್ತಿ ಒಂದಿದ್ದರೆ ಅವನು ನಮ್ಮನ್ನು ಕಾಪಾಡಿಯೇ ತೀರುತ್ತಾನೆ ಎಂದು ನಮ್ಮನ್ನು ಎಚ್ಚರಿಸುತ್ತಿದ್ದಾರೆ.

ಮನೆಯ ಮುಂದೆ ಶ್ರೀ ತುಳಸಿಯ ವನ ಕಂಗೊಳಿಸುತ್ತಿರಲಿ



## ಹಸು ತನ್ನ ಕಂದನ ಮರೆವುದೆ?

ಕರು ಆಕಳಹಾಲು ಕುಡಿದು ಹೊಟ್ಟೆ ತುಂಬಿಸಿಕೊಂಡ ಬಳಿಕ ಆಟವಾಡುತ್ತ ದೂರ ಓಡುತ್ತದೆ. ಆಗ ತಾಯಿಯ ನೆನಪು ಅದಕ್ಕೆ ಇರುವುದಿಲ್ಲ. ಹಸಿದಾಗ ತಾಯಿಯ ನೆನಪು. ಇದಕ್ಕೆ ತಾಯಿ ಮುನಿಸಿಕೊಳ್ಳುವುದಿಲ್ಲ. ಮಮತೆಯಿಂದ ಸದಾ ಕರುವನ್ನು ನೆನೆಯುತ್ತದೆ. ಮರೆಯುವುದಿಲ್ಲ. ಹಾಗೇ ಭಗವಂತ ನಮಗೆ ತಂದೆಯೂ ಹೌದು. ತಾಯಿಯೂ ಹೌದು. ಮಾತೃವಾತ್ಸಲ್ಯದಿಂದ ಆತ ನಮ್ಮನ್ನು ಸದಾ ಮರೆಯದೇ ಕಾಪಾಡುತ್ತಾನೆ. ನಾವು ಆತನನ್ನು ಮರೆತರೂ ಆತ ನಮ್ಮನ್ನು ಮರೆಯುವುದಿಲ್ಲ.

## ಮಮತೆಯಲಿ ರಕ್ಷಿಸು ನಮ್ಮನನವರತ

ಭಕ್ತವತ್ಸಲ ಭಗವಂತ ನಿಜ. ಆದರೂ ನಮ್ಮ ಭಕ್ತಿಯೇ ಭಗವಂತ ನಮ್ಮನ್ನು ಕಾಪಾಡಲು ಕಾರಣವಲ್ಲ. ಅವನ ಮಮತೆಯೇ ಕಾರಣ. ಮಮತೆಯಿಂದಲೇ ಆತ ನಮಗೆ ಭಕ್ತಿ ನೀಡಿ ಭಕ್ತಿಗನುಗುಣವಾಗಿ ಒಲಿದು ಕಾಪಾಡುತ್ತಾನೆ. ಅದರಿಂದ ಶ್ರೀಹರಿ, ನೀನು ನಮ್ಮನ್ನು ಮಮತೆಯಿಂದ ಸದಾ ಕಾಪಾಡು. ★

---

(10ನೇ ಪುಟದಿಂದ....)

**ತತ್ರ ಮಗ್ನಾಂ ಸಮಾದಾಯ ಪ್ರತಿಮಾಂ ದ್ವಾದಶ ಸ್ತುತೀಃ ।**
**ಕುರ್ವನ್ನಾನೀಯ ತಾಂ ರೌಪ್ಯ ಆಸ್ಥಾಪಯದನಲ್ಪಧೀಃ ॥ ಇತಿ**

ಅಲ್ಲಿ ಮುಳುಗಿದ್ದ ಪ್ರತಿಮೆಯನ್ನು ಸರ್ವಜ್ಞರಾದ ಮಧ್ವರು ಮೇಲೆತ್ತಿ ದ್ವಾದಶಸ್ತೋತ್ರಗಳನ್ನು ಹಾಡುತ್ತಾ ರೌಪ್ಯಪೀಠಕ್ಕೆ ತಂದು ಪ್ರತಿಷ್ಠಾಪಿಸಿದರು.

**ಏತಸ್ಮಿನ್ನಂತರೇ ಬ್ರಹ್ಮನ್ನಾರುಹ್ಯ ಮಕರಂ ಸ್ವಯಮ್ ।**
**ವರುಣಸ್ತ್ವಾನಯಮಾಸ ತದ್ರೂಪಂ ನಾರದೇರಿತಃ** ॥ ಇತಿ ಪೂರ್ವೋಕ್ತ ಪುರಾಣ ವಾಕ್ಯಾತ್ " ತತ್ರ ಮಗ್ನಾಂ ಸಮಾದಾಯ" ಇತ್ಯತ್ರ ಸಾಕ್ಷಾತ್ ವರುಣೇನ ದತ್ತಾಂ ಸಮಾದಾಯೇತಿಪಿ ವಿಶೇಷೋ ಬೋದ್ಧಾವ್ಯಃ ॥

ಈ ಮಧ್ಯದಲ್ಲಿ ನಾರದರಿಂದ ಪ್ರೇರೇಪಿಸಲ್ಪಟ್ಟ ವರುಣನು ತನ್ನ ವಾಹನವಾದ ಮೊಸಳೆಯನ್ನೇರಿ ತಾನೆ ಆ ವಿಗ್ರಹವನ್ನು ತಂದೊಪ್ಪಿಸಿದನು. ★

ಎಂದಿಗೂ ನಾಸ್ತಿಕರಾಗಬೇಡಿ; ನಾಸ್ತಿಕವಾದಕ್ಕೆ ತಲೆಬಾಗಬೇಡಿ.

# ಶ್ರೀಮನ್ನ್ಯಾಯಸುಧಾ



-ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರು

ಶ್ರುತಿಗಳಲ್ಲಿ ಶ್ರೀಹರಿಗೆ ಜನ್ಮಾದಿಕಾರಣತ್ವವು ಹೇಳಲ್ಪಟ್ಟಿದೆಯೆಂಬ ವಿಷಯವು ಭಾಷ್ಯದಲ್ಲಿ ಹೇಳಲ್ಪಟ್ಟಿದೆ. ಪುನಃ ಅದನ್ನು ಅನುವ್ಯಾಖ್ಯಾನದಲ್ಲಿಯೂ ಏಕೆ ಹೇಳಬೇಕು? ಇದರ ಅರ್ಥವಿವರಣೆಯನ್ನು ಮಾಡುವ ಸುಧಾಗ್ರಂಥವನ್ನು ನೋಡಿದರೆ ಈ ಶ್ಲೋಕದ ಗಾಂಭೀರ್ಯವು ಎಷ್ಟು ಇದೆಯೆಂದು ತಿಳಿಯುತ್ತದೆ.

ಶ್ರೀಸುಧೆಯಲ್ಲಿ ಈ ಶ್ಲೋಕವು ಭಾಮತಿಯ ಮತ್ತು ರಾಮಾನುಜಭಾಷ್ಯದಲ್ಲಿರುವ ತಪ್ಪನ್ನು ತಿದ್ದಲಿಕ್ಕೆ ಹೊರಟಿದೆಯೆಂದು ವ್ಯಾಖ್ಯಾನಮಾಡುತ್ತಾರೆ. ಪರಬ್ರಹ್ಮನಿಗೆ ಜಗತ್ತಿನ ಜನ್ಮಾದಿಗಳೇ ಲಕ್ಷಣವೋ ಅಥವಾ ಜಗಜ್ಜನ್ಮಾದಿಕಾರಣತ್ವವು ಲಕ್ಷಣವೋ?

ಜನ್ಮಾದಿಗಳು ಜಗತ್ತಿನಲ್ಲಿದೆ. ಪರಬ್ರಹ್ಮನಲ್ಲಿ ಅವುಗಳಿಲ್ಲ. ಅದರ ಲಕ್ಷಣವು ಅದರಲ್ಲಿರಬೇಕು. ಅದರಲ್ಲಿರದ ಧರ್ಮವು ಅದರ ಲಕ್ಷಣವು ಹೇಗಾಗುತ್ತದೆ? ಜನ್ಮಾದಿ ಕಾರಣತ್ವವು ಲಕ್ಷಣವೆಂದು ಹೇಳುವುದಾದರೆ ಲಕ್ಷಣವು ಪ್ರಸಿದ್ಧವಾಗಿರಬೇಕು. ಜನ್ಮಾದಿಕಾರಣತ್ವವು ಯಾರಲ್ಲಿ ಉಂಟೆಂದು ಯಾರಿಗೂ ಲೋಕದಲ್ಲಿ ಗೊತ್ತಾಗಲಿಲ್ಲ. ಈ ಶಂಕೆಯನ್ನು ಪರಿಹರಿಸುವುದಕ್ಕಾಗಿ ಜನ್ಮಾದಿಕಾರಣತ್ವವೇ ಲಕ್ಷಣ. ಈ ಲಕ್ಷಣವು ಶ್ರುತಿಪ್ರಸಿದ್ಧವಾದುದರಿಂದ ಜನ್ಮಾದಿಕಾರಣತ್ವವು ಬ್ರಹ್ಮಲಕ್ಷಣವೆಂದು ಹೇಳಬೇಕು.

ಭಾಮತಿಕಾರರು ಜನ್ಮಾದಿಕಾರಣತ್ವವು ಅಪ್ರಸಿದ್ಧವೆಂಬ ಕಾರಣದಿಂದ ಅದನ್ನು ಲಕ್ಷಣವೆಂದು ಹೇಳದೆ ಜಗದುತ್ಪತ್ತಿಯನ್ನು ಬ್ರಹ್ಮಲಕ್ಷಣವೆಂದು ಹೇಳಿ ಅದು ಬ್ರಹ್ಮನಲ್ಲಿಲ್ಲವಾದರೂ ಸೂರ್ಯನ ದೇಶಾಂತರ ಪ್ರಾಪ್ತಿಯು ಸೂರ್ಯಗತಿಗೆ ಲಕ್ಷಣವಾಗುವಂತೆ ಜಗದುತ್ಪತ್ತಿಯು ಲಕ್ಷಣವಾಗುತ್ತದೆಂದು ಬರೆದಿದ್ದಾರೆ.

ಈ ರೀತಿ ಭಾಮತಿಕಾರರು ಹೇಳಿದ್ದು ತಪ್ಪು. ಶ್ರುತಿಯಲ್ಲಿ ಜನ್ಮಾದಿಕಾರಣತತ್ವವನ್ನು ಲಕ್ಷಣವನ್ನಾಗಿ ಹೇಳಿರುವಾಗ ಶ್ರುತ್ಯುಕ್ತಲಕ್ಷಣವನ್ನು ಬಿಟ್ಟು ಬಿಡುವುದು ವೈದಿಕರಿಗೆ ಭೂಷಣವಲ್ಲವೆಂದು ಅನುವ್ಯಾಖ್ಯಾನದಲ್ಲಿ ಹೇಳಿ ಭಾಮತಿಯನ್ನು ನಿರಾಸ ಮಾಡಿದ್ದಾರೆ.



ರಾಮಾನುಜ ಭಾಷ್ಯದಲ್ಲಿ ಜನ್ಮಕಾರಣತ್ವವು ಇರುವಾಗ ಸ್ಥಿತಿಕಾರಣತ್ವ ಸಂಹಾರಕಾರಣತ್ವವು ಇಲ್ಲ. ಆದುದರಿಂದ ಇವುಗಳು ಏಕಕಾಲದಲ್ಲಿ ಬ್ರಹ್ಮನಲ್ಲಿಲ್ಲದಿದ್ದರೂ ಭಿನ್ನ ಭಿನ್ನ ಕಾಲಗಳಲ್ಲಿ ಎಲ್ಲ ಲಕ್ಷಣಗಳೂ ಬ್ರಹ್ಮನಲ್ಲಿ ಅವಿರುದ್ಧಗಳೆಂದು ಹೇಳಿದ್ದಾರೆ.

ಇದು ತಪ್ಪು ಮಾತು. ಕಾರಣತ್ವವು ಶಕ್ತಿರೂಪ. ಪರಮಾತ್ಮನ ಎಲ್ಲ ಶಕ್ತಿಗಳೂ ಎಲ್ಲಾ ಕಾಲದಲ್ಲಿಯೂ ಇವೆ. ಆದುದರಿಂದ ಶಕ್ತಿರೂಪವಾದ ಜನ್ಮಕಾರಣತ್ವವಿರುವಾಗ ಶಕ್ತಿರೂಪವಾದ ಸ್ಥಿತಿಲಯಕಾರಣತ್ವವೂ ಏಕೆ ಇರಬಾರದೆಂದು ಅನುವ್ಯಾಖ್ಯಾನದಲ್ಲಿ **'ಸದಾ'** ಪದವನ್ನು ಪ್ರಯೋಗಿಸಿ ರಾಮಾನುಜಭಾಷ್ಯವು ತಪ್ಪೆಂದು ತಿಳಿಸಿದ್ದಾರೆ.

ರಾಮಾನುಜಭಾಷ್ಯದಲ್ಲಿ ಇನ್ನೊಂದು ತಪ್ಪು ಮಾತನ್ನಾಡಿದ್ದಾರೆ. ಸೂತ್ರದಲ್ಲಿ ಜನ್ಮಕಾರಣತ್ವಾದ್ಯನೇಕ ಲಕ್ಷಣಗಳನ್ನು ಹೇಳಿದರೆ ಒಂದು ಲಕ್ಷಣವೇ ಸಾಕು. ಅನೇಕ ಲಕ್ಷಣ ಏಕೆ ಎಂಬ ಶಂಕೆಯು ಬರುತ್ತದೆ. ಆದುದರಿಂದ ಸೂತ್ರಕಾರರು ಅನೇಕ ಲಕ್ಷಣವನ್ನು ಹೇಳದೆ ಜನ್ಮಕಾರಣತ್ವ ಸ್ಥಿತಿಕಾರಣತ್ವ ಲಯಕಾರಣತ್ವಗಳ ಸಮುದಾಯವನ್ನು ಲಕ್ಷಣವನ್ನಾಗಿ ವಿವಕ್ಷೆ ಮಾಡಿದ್ದಾರೆ. ಆದುದರಿಂದ ಜನ್ಮಾದಿ ಎಂದು ಸೂತ್ರದಲ್ಲಿ ಸಮುದಾಯೈಕವಚನವಿದೆ ಎಂದು ಬರೆದಿದ್ದಾರೆ. ಇದೂ ತಪ್ಪು. ಏಕೆಂದರೆ ಶ್ರುತಿಯಲ್ಲಿ ಹೇಳಿದ ಲಕ್ಷಣವನ್ನು ಸೂತ್ರಕಾರರು ಹೇಳುವುದು ಉಚಿತ. ಶ್ರುತಿಗಳಲ್ಲಿ ಎಲ್ಲಿಯೂ ಜನ್ಮಕಾರಣತ್ವಾದಿಗಳ ಸಮುದಾಯವನ್ನು ಲಕ್ಷಣವನ್ನಾಗಿ ಹೇಳಲಿಲ್ಲ. ಶ್ರುತಿಯಲ್ಲಿ ಸಮುದಾಯ ಪದವನ್ನಾಗಲೀ ತತ್ಸೂಚಕ ಪದವನ್ನಾಗಲೀ ಹೇಳಲಿಲ್ಲ. ಸೂತ್ರಕಾರರು ಜನ್ಮಾದಿಯೆಂದು ಏಕವಚನವನ್ನು ಪ್ರಯೋಗಿಸಿದರೂ ಅದು ಸಮುದಾಯಲಕ್ಷಣವೆಂಬ ಅಭಿಪ್ರಾಯದಿಂದಲ್ಲ. ಯಾರಿಗೆ ಛತ್ರಾದಿಯು ಉಂಟೋ ಅವನು ರಾಜನೆಂದು ರಾಜನಿಗೆ ಲಕ್ಷಣವನ್ನಾಗಿ ಹೇಳುವಾಗ ಏಕವಚನ ಪ್ರಯೋಗಮಾಡಿದರೂ ಅಲ್ಲಿ ಛತ್ರವೂ ರಾಜನಿಗೆ ಪ್ರತ್ಯೇಕ ಲಕ್ಷಣವಾಗುವಂತೆ ಇಲ್ಲಿಯೂ ಪ್ರತ್ಯೇಕ ಲಕ್ಷಣವಾದರೂ ಏಕವಚನ ಕೂಡುತ್ತದೆ. ಆದರೆ ಒಂದು ಲಕ್ಷಣವು ಸಾಕಾಗಿರುವಾಗ ಅನೇಕ ಲಕ್ಷಣಗಳನ್ನು ಸೂತ್ರಕಾರರಾಗಲೀ ಶ್ರುತಿಯಲ್ಲಾಗಲೀ ಏಕೆ ಹೇಳಬೇಕು ಎಂಬ ಶಂಕೆಗೂ ಅನುವ್ಯಾಖ್ಯಾನದಲ್ಲಿ **'ಆಸು ಶ್ರುತಿಷೂಕ್ತಾಃ'** ಎಂದು ಹೇಳಿ ಉತ್ತರವನ್ನು ಕೊಟ್ಟಿದ್ದಾರೆ.

ಜಿಜ್ಞಾಸಾವಿಧಾಯಕ ಶ್ರುತಿಗಳು ಬೇರೆ ಬೇರೆ ಉಪನಿಷತ್ತುಗಳಲ್ಲಿವೆ. ಅಲ್ಲಿ ಜಿಜ್ಞಾಸ್ಯವನ್ನು ಜೀವಭಿನ್ನನೆಂದು ತಿಳಿಯಲಿಕ್ಕೆ ಲಕ್ಷಣವು ಬೇಕು. ಜನ್ಮಾದಿಕಾರಣತ್ವರೂಪ

(28ನೇ ಪುಟದಲ್ಲಿ...)

# ಶ್ರೀವಿಷ್ಣುಪುರಾಣ

## ಧ್ರುವವರದನಾದ ಭಗವಂತ

–ಸ್ಫೂರ್ತಿ

*(ಹಿಂದಿನ ಸಂಚಿಕೆಯಿಂದ ಮುಂದುವರಿದುದು..........)*

ದೇವತೆಗಳು ನಾನಾ ವಿಧದಿಂದ ಧ್ರುವನ ತಪಸ್ಸನ್ನು ಭಂಗಗೊಳಿಸಲು ಪ್ರಯತ್ನಿಸಿದರೂ ಸಾಧ್ಯವಾಗದೆ ಹೋಯಿತು. ದೇವತೆಗಳೆಲ್ಲರೂ ಸೇರಿ ಜಗನ್ನಾಥನಾದ ನಾರಾಯಣನ ಬಳಿಗೆ ತೆರಳಿ ಪ್ರಾರ್ಥಿಸಿದರು. 'ಓ ದೇವ, ಜಗನ್ನಾಥ, ಧ್ರುವನ ತಪಸ್ಸಿನಿಂದ ನಾವು ಬಹಳ ಬೆಂದು ಹೋಗುತ್ತಿದ್ದೇವೆ. ದಿನದಿಂದ ದಿನಕ್ಕೆ ಅವನ ತಪಸ್ಸು ಪ್ರಖರವಾಗುತ್ತಲಿದೆ. ಅವನು ನಿನ್ನಿಂದ ಏನನ್ನು ಪಡೆಯಲು ಇಚ್ಛಿಸುತ್ತಿದ್ದಾನೊ ಗೊತ್ತಿಲ್ಲ. ಆದ್ದರಿಂದ ಹೇ ಸ್ವಾಮಿ, ನೀನು ಆದಷ್ಟು ಬೇಗನೆ ಪ್ರಸನ್ನನಾಗಿ ಧ್ರುವನನ್ನು ತಪಸ್ಸಿನಿಂದ ಹೊರಬರುವಂತೆ ಅನುಗ್ರಹಿಸು' ಎಂದು.

ಭಗವಂತನು ದೇವತೆಗಳನ್ನು ಕುರಿತು 'ಧ್ರುವನು ಏನನ್ನು ಬಯಸಿದರೂ ಕೊಡುತ್ತೇನೆ. ನೀವು ನಿಮ್ಮ ಸ್ಥಾನವನ್ನು ಕುರಿತು ತೆರಳಿರಿ. ಧ್ರುವನನ್ನು ತಪಸ್ಸಿನಿಂದ ಹಿಂದಿರುಗಿಸುತ್ತೇನೆ' ಎಂದು ಆಶ್ವಾಸನೆಯನ್ನಿತ್ತು ಧ್ರುವನು ತಪಸ್ಸಿನಲ್ಲಿರುವ ಸ್ಥಳಕ್ಕೆ ಬಂದು ತನ್ನ ಚತುರ್ಭುಜಧಾರಿಯಾದ ರೂಪವನ್ನು ತೋರಿ ' ಎಲವೋ ಧ್ರುವನೇ, ನಿನಗೆ ಮಂಗಳವಾಗಲಿ. ನಿನ್ನ ತಪಸ್ಸಿನಿಂದ ಸಂತುಷ್ಟನಾದ ನಾನು ವರದನಾಗಿ ನಿನ್ನ ಕಣ್ಮುಂದೆ ನಿಂತಿದ್ದೇನೆ. ಹೊರಗಿನ ಎಲ್ಲ ಭೋಗಗಳನ್ನು ತೊರೆದು ನನ್ನಲ್ಲೇ ಮನಸ್ಸನ್ನು ನೆಲೆಗೊಳಿಸಿದ್ದರಿಂದ ಸಂತುಷ್ಟನಾಗಿದ್ದೇನೆ. ಬೇಕಾದ ವರವನ್ನು ಕೇಳು' ಎಂದು ನುಡಿದನು.

ಭಗವಂತನ ಮಾತನ್ನು ಕೇಳಿ ಬಾಲಕನಾದ ಧ್ರುವನು ಕಣ್ಣುತೆರೆದು ನೋಡಲು ಇಲ್ಲಿಯವರೆಗೆ ಧ್ಯಾನ ಗೋಚರನಾಗಿದ್ದ ಹರಿಯು ತನ್ನ ಕಣ್ಮುಂದೆ ಕಂಡನು. ಶಂಖ-ಚಕ್ರ-ಗದಾ-ಶಾರ್ಙ್ಗ-ನಂದಕಖಡ್ಗಗಳನ್ನು ಧರಿಸಿ ಕಿರೀಟಧಾರಿಯಾಗಿ ನಿಂತಿದ್ದ ಆನಂದಮಯನಾದ ಅಚ್ಯುತನನ್ನು ಕಂಡು ಧ್ರುವನು ಉದ್ದಂಡ ಪ್ರಣಾಮಗಳನ್ನು ಅರ್ಪಿಸಿದನು. ರೋಮಾಂಚಿತನಾಗಿ, ಅಚಲಭಕ್ತಿಯಿಂದ ಒಮ್ಮೆಲೆ ಭಯಭೀತನಾಗಿ



ಭಗವಂತನನ್ನು ಸ್ತುತಿಸಲು ಇಚ್ಛಿಸಿದನು. ಆದರೆ 'ನಾನು ಏನೆಂದು ಈ ದೇವದೇವನನ್ನು ಹೊಗಳಲಿ? ಏನೆಂದು ಹೊಗಳಿದರೆ ಈತನ ಸ್ತುತಿಯಾದೀತು? ಎಂದು ಯೋಚಿಸುತ್ತ ಗಲಿಬಿಲಿಗೊಂಡವನಾಗಿ ಕಡೆಗೆ ಆ ಭಗವಂತನನ್ನೇ ಶರಣುಹೊಂದಿದನು.

ಹೇ ಸ್ವಾಮಿ, ನನ್ನ ತಪಸ್ಸಿನಿಂದ ನೀನು ಸಂತುಷ್ಟನಾಗಿದ್ದರೆ ನಿನ್ನನ್ನು ಸ್ತುತಿಸಲು ಇಚ್ಛಿಸುತ್ತಿರುವ ನನಗೆ ಅದೇ ವರವನ್ನು ನೀಡು. ಬ್ರಹ್ಮಾದಿ ದೇವತೆಗಳಿಗೂ, ವೇದಜ್ಞರಾದ ಜ್ಞಾನಿಗಳಿಗೂ ಯಾರ ಸ್ವರೂಪ ಪೂರ್ಣವಾಗಿ ತಿಳಿದಿಲ್ಲವೋ ಅಂತಹ ನಿನ್ನನ್ನು ಬಾಲಕನಾದ ನಾನು ಹೇಗೆ ತಾನೆ ಸ್ತುತಿಸಲು ಶಕ್ತನಾಗುತ್ತೇನೆ. ನನ್ನ ಮನಸ್ಸು ನಿನ್ನ ಭಕ್ತಿಯಿಂದ ಕರಗಿ ನಿನ್ನನ್ನು ಸ್ತುತಿಸಲು ಹಾತೊರೆಯುತ್ತಾ ನಿನ್ನ ಪಾದಕಮಲದತ್ತ ಹರಿದು ಬರುತ್ತಿದೆ. ಅದಕ್ಕೆ ಬೇಕಾದ ಜ್ಞಾನವನ್ನು ಕೊಟ್ಟು ಕರುಣಿಸು' ಹೀಗೆ ಸ್ತುತಿಸಲು ಭಗವಂತನು ಕೈಮುಗಿದು ನಿಂತಿರುವ ಧ್ರುವನನ್ನು ತನ್ನ ಶಂಖದ ತುದಿಯಿಂದ ಮುಟ್ಟಿದನು. ಕೂಡಲೆ ಪ್ರಸನ್ನನಾದ ಧ್ರುವನು ಭಗವಂತನನ್ನು ಬಗೆ ಬಗೆಯಿಂದ ಸ್ತುತಿಸಿದನು.

ಧ್ರುವನ ಸಂಸ್ತುತಿಯಿಂದ ಸಂತುಷ್ಟನಾದ ಭಗವಂತನು 'ನನ್ನ ದರುಶನ ಎಂದಿಗೂ ವಿಫಲವಾಗುವುದಿಲ್ಲ. ನನ್ನನ್ನು ಕಂಡ ಮಾತ್ರದಿಂದಲೆ ಮನುಷ್ಯನ ಎಲ್ಲ ಆಕಾಂಕ್ಷೆಗಳೂ ಕೈಗೂಡುವುವು. ಆದ್ದರಿಂದ ವರವನ್ನು ಕೇಳು' ಎಂದು ನುಡಿದನು.

ಧ್ರುವನು ಕೈಮುಗಿದು–

**ಭಗವನ್ ಭೂತಭವ್ಯೇಶ ಸರ್ವಸ್ಯಾಸ್ತೇ ಭವಾನ್ ಹೃದಿ ।**
**ಕಿಮಜ್ಞಾತಂ ತವ ಬ್ರಹ್ಮನ್ ಮನಸಾ ಯನ್ಮಯೇಕ್ಷಿತಮ್ ॥**

ಹೇ ಭೂತ-ಭವಿಷ್ಯತ್-ವರ್ತಮಾನ ಜಗತ್ತಿನ ಒಡೆಯನಾದ ಸ್ವಾಮಿಯೆ, ನೀನು ಎಲ್ಲರ ಹೃದಯದಲ್ಲೂ ನೆಲೆಸಿರುವವನಷ್ಟೆ. ಪರಿಪೂರ್ಣನಾದ ನಿನಗೆ ನನ್ನ ಮನಸ್ಸಿನ ಅಭಿಲಾಷೆ ತಿಳಿಯದೇನು?

ಹಾಗಿದ್ದರೂ ನಿನ್ನಪ್ಪಣೆಯಂತೆ ದುರ್ವಿನೀತನಾದ ನಾನು ಅತಿದುರ್ಲಭವಾದ ನನ್ನ ಮನಸ್ಸಿನ ಅಭಿಲಾಷೆಯನ್ನು ತಿಳಿಸುತ್ತೇನೆ.

**ಕಿಂ ವಾ ಸರ್ವಜಗತ್ಸ್ರಷ್ಟುಃ ಪ್ರಸನ್ನೇ ತ್ವಯಿ ದುರ್ಲಭಮ್ ।**
**ತ್ವತ್ಪ್ರಸಾದಫಲಂ ಭುಂಕ್ತೇ ತ್ರೈಲೋಕ್ಯಂ ಮಘವಾನಪಿ ॥**

ಸಮಸ್ತ ಜಗತ್ತಿನ ಸೃಷ್ಟಿಕರ್ತನಾದ ನೀನು ಪ್ರಸನ್ನನಾದರೆ ದುರ್ಲಭವಾದುದಾದರೂ ಏನುಂಟು? ಇಂದ್ರನೂ ಮೂರುಲೋಕದ ಆಧಿಪತ್ಯವನ್ನು ನಿನ್ನ ಅನುಗ್ರಹದಿಂದಲೆ ಪಡೆದು ಅನುಭವಿಸುತ್ತಿದ್ದಾನಷ್ಟೆ.

ನನ್ನ ಚಿಕ್ಕತಾಯಿ ತನ್ನ ಉದರದಲ್ಲಿ ಹುಟ್ಟಿ ಬಂದ ನಿನಗೆ ಸಿಂಹಾಸನವನ್ನೇರುವ ಅರ್ಹತೆ ಇಲ್ಲವೆಂದು ಗಟ್ಟಿಯಾಗಿ ಅಹಂಕಾರದಿಂದ ನುಡಿದಳು. ಆದ್ದರಿಂದ ಹೇ ಪ್ರಭೋ, ನಿನ್ನ ಅನುಗ್ರಹದಿಂದ ಎಲ್ಲರಿಗಿಂತಲೂ ಅತ್ಯುತ್ತಮವಾದ, ನಾಶರಹಿತವಾದ, ಸಮಸ್ತ ಜಗತ್ತಿಗೆ ಆಧಾರಭೂತವಾದ ಸ್ಥಾನವನ್ನು ಪಡೆಯಲು ಇಚ್ಛಿಸುತ್ತೇನೆ ಎಂದು ನುಡಿದನು.

## ಧ್ರುವನ ಪೂರ್ವಜನ್ಮದ ವೃತ್ತಾಂತ

ಭಗವಂತನು ನೀನು ಇಚ್ಛಿಸುವ ಸ್ಥಾನವನ್ನು ಖಂಡಿತವಾಗಿಯೂ ಪಡೆಯುವಿ. ನೀನು ಹಿಂದಿನ ಜನ್ಮದಲ್ಲಿಯೆ ನನ್ನನ್ನು ಸಂತೋಷಗೊಳಿಸಿದ್ದಿ. ಆಗ ಬ್ರಾಹ್ಮಣನಾಗಿದ್ದ ನೀನು ಸದಾ ನನ್ನಲ್ಲೇ ಮನಸ್ಸನ್ನಿಟ್ಟವನಾಗಿ ಭಕ್ತಿಯಿಂದ ಆರಾಧಿಸುತ್ತಿದ್ದಿ. ತಂದೆ–ತಾಯಂದಿರ ಶುಶ್ರೂಷೆಯನ್ನು ಮಾಡುತ್ತಾ ಸ್ವಧರ್ಮದಲ್ಲಿಯೇ ನಿರತನಾದ ನಿನಗೆ ಕಾಲಕ್ರಮದಲ್ಲಿ ಯೌವ್ವನ ಸಮೀಪಿಸಿದಾಗ ರಾಜಪುತ್ರನ ಗೆಳೆತನವಾಯಿತು. ಅವನ ಸಕಲಭೋಗಗಳು, ರೂಪ, ಲಾವಣ್ಯಗಳನ್ನು ಕಂಡು ಅತಿ ದುರ್ಲಭವಾದ ಅಂತಹ ಭೋಗ ತನಗೂ ಬೇಕೆಂಬ ಇಚ್ಛೆ ನಿನ್ನೊಳಗೆ ಮೂಡಿ ರಾಜಕುಮಾರನಾಗಬೇಕೆಂಬ ಬಯಕೆ ಮನಸ್ಸಿನಲ್ಲಿ ಗಟ್ಟಿಯಾಯಿತು. ಅದರ ಫಲವಾಗಿಯೇ ಈ ಜನ್ಮದಲ್ಲಿ ಉತ್ತಾನಪಾದನ ಅರಮನೆಯಲ್ಲಿ ರಾಜಕುಮಾರನಾಗಿ ಹುಟ್ಟಿ ಬಂದಿರುವಿ. ನೀನು ಈಗಾಗಲೆ ಹುಟ್ಟಿ ಬಂದಿರುವ ಸ್ವಾಯಂಭುವಮನುವಿನ ಕುಲದಲ್ಲಿ ಮತ್ತೊಬ್ಬರು ಹುಟ್ಟಿಬರುವುದು ದುರ್ಲಭವೇ ಸರಿ. ನನ್ನನ್ನು ಆರಾಧಿಸಿದ ಮನುಷ್ಯನು ಮೋಕ್ಷವನ್ನೇ ಅನಾಯಾಸವಾಗಿ ಪಡೆಯುತ್ತಾನೆ. ಇನ್ನು ಸ್ವರ್ಗಾದಿಗಳ ಬಗ್ಗೆ ಹೇಳುವುದೇನು? ನೀನು ಮೂರು ಲೋಕದಲ್ಲೂ ಅತ್ಯಧಿಕವಾದ, ಸಕಲ ನಕ್ಷತ್ರ, ಗ್ರಹಗಳಿಗೆ ಆಶ್ರಯವಾದ ಸ್ಥಾನವನ್ನು ನನ್ನ ಅನುಗ್ರಹದಿಂದ ಪಡೆಯುವಿ. ಇದರಲ್ಲಿ ಸಂದೇಹವೇ ಇಲ್ಲ ಸೂರ್ಯ, ಚಂದ್ರ, ಬುಧ ಮುಂತಾದ ಗ್ರಹರಿಗಿಂತಲೂ, ಸಕಲ ನಕ್ಷತ್ರಗಳಿಗಿಂತಲೂ,

ಇಂದ್ರಿಯಗಳೆಂಬ ಕುದುರೆಗಳನ್ನು ಹಿಡಿತದಲ್ಲಿಟ್ಟುಕೊಳ್ಳಲು ಪ್ರಯತ್ನಿಸಿ.



ಸಪ್ತರ್ಷಿಗಳಿಗಿಂತಲೂ ಇಂದ್ರಾದಿದೇವತೆಗಳಿಗಿಂತಲೂ ಉತ್ತರದ ಸ್ಥಾನವು ನಿನಗೆ ದೊರಕಲ್ಪಟ್ಟಿದೆ.

ಕೆಲವು ಪದವಿ ಚತುರ್ಯುಗಪರ್ಯಂತ, ಕೆಲವು ಮನ್ವಂತರ ಪರ್ಯಂತ ನೆಲೆಸಿದ್ದರೆ ನಿನ್ನ ಪದವಿ ಮಾತ್ರ ಕಲ್ಪಪರ್ಯಂತ ನೆಲೆಸುವುದಾಗಿ ಅನುಗ್ರಹಿಸುತ್ತಿದ್ದೇನೆ.

ನಿನ್ನ ತಾಯಿ ಸುನೀತಿಯೂ ನಿನ್ನ ಬಳಿ ಅತ್ಯಂತ ಸ್ವಚ್ಛ ತಾರಕೆಯಾಗಿ ಕಲ್ಪಪರ್ಯಂತ ವಿಮಾನದಲ್ಲಿ ನೆಲೆಸಿರುತ್ತಾಳೆ.

**ಯೇ ಚ ತ್ವಾಂ ಮಾನವಾಃ ಪ್ರಾತಃ ಸಾಯಂ ಚ ಸುಸಮಾಹಿತಾಃ ।**
**ಕೀರ್ತಯಿಷ್ಯಂತಿ ತೇಷಾಂ ಚ ಮಹತ್ಪುಣ್ಯಂ ಭವಿಷ್ಯತಿ ॥**

ಯಾವ ಮಾನವರು ಪ್ರಾತಃ ಸಾಯಂಕಾಲದಲ್ಲಿ ಮನಸ್ಸನ್ನು ನೆಲೆಗೊಳಿಸಿ ಈ ಕಥೆಯನ್ನು ನುಡಿಯುತ್ತಾರೋ ಅವರಿಗೂ ಬಹಳ ಪುಣ್ಯ ಪ್ರಾಪ್ತಿಯಾಗುತ್ತದೆ ಎಂದು ನುಡಿದನು. **(ಮುಂದುವರಿಯುವುದು)**

---

(24ನೇ ಪುಟದಿಂದ......)

ಎಂಟು ಲಕ್ಷಣಗಳನ್ನು ತಿಳಿದರೆ ಆ ಎಂಟು ಲಕ್ಷಣಗಳ ಪೈಕಿ ಯಾವುದಾದರೊಂದು ಲಕ್ಷಣವು ಆ ಜಿಜ್ಞಾಸಾವಿಧಾಯಕ ವಾಕ್ಯದಲ್ಲಿ ಇದ್ದೇ ಇರುತ್ತದೆ. ಆದುದರಿಂದ ಜಿಜ್ಞಾಸ್ಯದಲ್ಲಿ ಜೀವಭೇದ ಸಿದ್ಧಿಯಾಗದೇ ಇರುವುದಿಲ್ಲ. ಆದುದರಿಂದ ಅನೇಕ ಲಕ್ಷಣೋಕ್ತಿಗೆ ವೈಯರ್ಥ್ಯವು ಇಲ್ಲವೆಂದು ಸುಧಾದಲ್ಲಿ 'ಆಸು ಶುತಿಷೂಕ್ತಾಃ' ಎಂಬುದರ ವಿವರಣವನ್ನು ಮಾಡಿದ್ದಾರೆ.

ಈ ರೀತಿಯಾಗಿ ಅಪೂರ್ವಾರ್ಥವನ್ನು ಅನುವ್ಯಾಖ್ಯಾನದ ಶ್ಲೋಕವು ಹೇಳುತ್ತದೆಂದು ತಿಳುವಳಿಕೆಯನ್ನು ಸುಧಾಕಾರರು ನಮಗೆ ತಿಳಿಸಿ ಮಹೋಪಕಾರ ಮಾಡಿದ್ದಾರೆ. ಇದನ್ನು ಓದಿದಾಗ ಸಕಲರಾಜ್ಯದ ಆಧಿಪತ್ಯವು ಸಿಕ್ಕಿದಾಗ ಎಷ್ಟು ಆನಂದ ಆಗುತ್ತದೋ ಅಷ್ಟು ಆನಂದ ಆಗುತ್ತದೆ. ಮತ್ತು ಪಠಿಸುವವರಿಗೆ ವಿಶೇಷ ಸಂಪತ್ತು ಸಿಗುತ್ತದೆ. ಇದನ್ನು ತಿಳಿಸುವುದಕ್ಕಾಗಿ ಆದಿಯಲ್ಲಿ ಶ್ರೀಶಬ್ದವನ್ನು 'ಭೂತಿರ್ಮಹಾಲಕ್ಷ್ಮೀಃ' ಎಂದು ಅಂತ್ಯದಲ್ಲಿಯೂ ಹೇಳಿದ್ದಾರೆ.

★

ಸತ್ಯ, ಪ್ರಿಯ ಮತ್ತು ಹಿತ ನುಡಿಗಳು ನಿಮ್ಮ ಜೀವನದಲ್ಲಿ ಹಾಸುಹೊಕ್ಕಾಗಿರಲಿ.

# ಯಮನು ಯಮಪಾಶವನ್ನು ಬದಿಗಿರಿಸುವ ಮಹಿಮೆ

–ಡಾ। ಎನ್. ವೆಂಕಟೇಶ ಆಚಾರ್ಯ, ಬೆಂಗಳೂರು

~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~

*(ಹಿಂದಿನ ಸಂಚಿಕೆಯಿಂದ ಮುಂದುವರಿದುದು..........)*

**ತ್ರಿನಾಚಿಕೇತಸ್ತ್ರಯಮೇತದ್ವಿದಿತ್ವಾ ಯ ಏವಂ ವಿದ್ವಾಂಶ್ಚಿನುತೇ ನಾಚಿಕೇತಮ್ ।**
**ಸ ಮೃತ್ಯುಪಾಶಾತ್ ಪುರತಃ ಪ್ರಣೋದ್ಯ ಶೋಕಾತಿಗೋ ಮೋದತೇ ಸ್ವರ್ಗಲೋಕೇ ।**

ಯಾವ ಜ್ಞಾನಿಯು ಮೂರುಭಾರಿ ನಾಚಿಕೇತಾಗ್ನಿಯನ್ನು ಚಯನ ಮಾಡಿದವನೋ, ಹಾಗೂ ಈ ಮೂರನ್ನು ವಿಷ್ಣುರೂಪಗಳು, ಇಟ್ಟಿಗೆಯ ದೇವತೆಗಳು ಇಟ್ಟಿಗೆಯ ಸಂಖ್ಯೆ–ಅವುಗಳ ಪರಿಮಾಣ ಇವನ್ನು ತಿಳಿದು ವೇದಿಕೆಯನ್ನು ನಿರ್ಮಾಣ ಮಾಡುತ್ತಾನೋ ಆ ವ್ಯಕ್ತಿಯು ಮುಂದೆ ಇರುವ ಯಮನ ಪಾಶವನ್ನು ಬದಿಗೆ ಸರಿಸಿ ಶೋಕ ದಾಟಿ ಸ್ವರ್ಗ ಎನಿಸಿದ ವಿಷ್ಣುಲೋಕದಲ್ಲಿ ಸುಖವನ್ನು ಅನುಭವಿಸುತ್ತಾನೆ.

ಇಂದು ಒಂದು ಮನೆಯನ್ನು ಕಟ್ಟಲು ಸಿವಿಲ್ ಎಂಜಿನಿಯರಿಂಗ್ ಏನೆಲ್ಲಾ ಪ್ರಮಾಣದಲ್ಲಿ ಬೆಳೆದಿದೆ. ಅಲ್ಲಿಯ ಡಿಸೈನ್‌ಗಳು, ಉದ್ದೇಶಗಳು, ಭಾರಹೊರುವ ಧೃಡತೆ ಇವುಗಳನ್ನು ಚರ್ಚಿಸುತ್ತಿದೆ. ಬದುಕಿನಲ್ಲಿ ಮನೆಯಲ್ಲಿ ವಾಸಿಸುವುದಕ್ಕಿಂತ, ಭಗವಂತನನ್ನು ಆಹ್ವಾನಿಸುವ ಆ ಕುಂಡದ ನಿರ್ಮಾಣ, ಬಳಸಬೇಕಾದ ಇಟ್ಟಿಗೆಯ ಸಂಖ್ಯೆ, ಅವುಗಳಲ್ಲಿ ಚಿಂತಿಸಬೇಕಾದ ಭಗವಂತನ ರೂಪ ಇವೆಲ್ಲವೂ ನಿಶ್ಚಿತವಾಗಿದ್ದು ಯಜ್ಞದ ವೇದಿಕೆ ಹಾಗೆ ನಿರ್ಮಾಣವಾಗಬೇಕು. ಇಂದು ಇದನ್ನು ಗಮನಿಸುವ ಕೌಶಲವೂ ಇಲ್ಲದ ಯಜಮಾನವರ್ಗ ಇರುವಾಗ ಇದನ್ನು ಅರಿವು ನೀಡಿದ ಯಮ ಎಷ್ಟು ದೊಡ್ಡವ. ಅದನ್ನು ತಿಳಿದ ನಚಿಕೇತ ಸಣ್ಣವನಾದರೂ ನಿಜಕ್ಕೂ ಹಿರಿಯನಾದ.
ನಚಿಕೇತನಿಗೆ ಯಜ್ಞ ನಡೆದಾಗ ಮಧ್ಯದಲ್ಲೆ ತೆರಳಿದವನು ಎಂಬ ಅಪಖ್ಯಾತಿ ಬರುತ್ತಿತ್ತೋ ಏನೋ? ತಂದೆಯು ಬರೀ ಯಜ್ಞ ಮಾಡಿದವನು, ಮಗನು ಯಜ್ಞ ನಡೆದಾಗ ಯಮನ ಬಳಿ ಬಂದು ಯಜ್ಞನ ಪೂರ್ಣ ಮಾಹಿತಿ ಪಡೆದವನು. ಹೀಗಾಗಿ ಯಜ್ಞಕ್ಕೆ ಬೇಕಾದ ತ್ಯಾಗ, ತಾಳ್ಮೆ, ಬೌದ್ಧಿಕ ಪರಿಪೂರ್ಣತೆ ಎಲ್ಲವನ್ನೂ ಮಗ ಸಂಪಾದಿಸಿದವನಾದ ಎಂಬ ಕೀರ್ತಿಯೇ ಅವನಿಗೆ ಲಭಿಸಿತು.

**ನಿಮ್ಮನೇ ನಂಬಿ ಬದುಕುವ ಜನರನ್ನು ರಕ್ಷಿಸಿರಿ.**



ದ್ರವ್ಯಯಜ್ಞ ಕಾಲಮಿತಿಯಲ್ಲಿ ಮುಗಿದಿತು, ಜ್ಞಾನ ಯಜ್ಞ ಅಂತ್ಯವಿಲ್ಲದ ಅದ್ಭೂರಿ ಯಜ್ಞ.

ಯಮನು ಒಂದು ಲೋಕದ ಅಧಿದೇವತೆಯಾಗಿದ್ದು ಅವನ ಪಾಶಕ್ಕೆ ಎದುರಾರೂ ಆಗರು. ಆ ಪಾಶದಿಂದ ಪಾರಾಗಲು ಸಾಧ್ಯವೇ ಇಲ್ಲ. ಒಬ್ಬ ವ್ಯಾಪಾರಸ್ಥ ಮೊದಲ ಭಾರಿ ತನ್ನ ಬಳಿ ಬಂದವಗೆ ತನ್ನ ವ್ಯಾಪಾರದ ಗುಟ್ಟು, ಅದನ್ನೂ ಮೀರಿದ ಎತ್ತರದ ಪಟ್ಟು ಇದೆಲ್ಲವನ್ನು ಎಂದಿಗೂ ಹೇಳಲಾರ. ಆದರೆ ಯಮ ಯಮಪಾಶವನ್ನು ಬದಿಗೆ ಸರಿಸುವ ಮಹಿಮೆಯನ್ನು ಹೇಳಿದ್ದಾನೆ  ಆಗ ತಾನೆ ಬಂದ ನಚಿಕೇತನಿಗೆ.

360 ಇಟ್ಟಿಗೆಯು 360 ದಿನಗಳನ್ನು ತುಂಬಿಕೊಂಡ ವರ್ಷದ ಸಂಕೇತ. ಇಟ್ಟಿಗೆಯ ಏರುಪೇರಾಗದ ಪರಿಮಾಣ ನಮ್ಮ ಪ್ರತಿದಿನವೂ ಅಚ್ಚುಕಟ್ಟಾಗಿ ಸುಯೋಜಿತವಾಗಿ ಸಂಕಲ್ಪಬದ್ಧನಾಗಿ ಸಾಗಬೇಕಾದ ದೈನಂದಿನ ಕರ್ಮಗಳ ಪ್ರತಿರೂಪ. ಇಟ್ಟಿಗೆಗಳಿಂದ ಆದ ಒಟ್ಟಾರೆ ಆಕಾರ ವರ್ಷಗಳ ಸಾಧನೆಯ ಹೆಗ್ಗುರಿಯನ್ನು ಮನದ ಆಶೆಯನ್ನು ಹೊರಗಿಡುತ್ತದೆ. ಅದರಲ್ಲಿ ಸ್ಥಾಪಿಸುವ ಅಗ್ನಿ–ಉರಿಸಲು ಕಟ್ಟಿಗೆ ಆಹುತಿಯ ಆಜ್ಯ ಇವೆಲ್ಲವೂ ಭಗವಂತನ ಬಗೆಯನ್ನು ಬೆಳೆಸಲು ಶ್ರವಣ–ಮನನ–ನಿದಿಧ್ಯಾಸನವನ್ನೂ, ಜೊತೆಗಿರುವ ಪತ್ನೀ, ಸಂಗಾತಿಯಾದ ಶ್ರದ್ಧೆಯನ್ನು, ಯಜ್ಞದಲ್ಲಿ ಅಲುಗದೆ ಕುಳಿತಿರುವ ಅಚಲ ಆಸನ ಶತ್ರುಗಳನ್ನು ನಿರಸನಮಾಡಿ ಹರಿಪ್ರೀತಿಯನ್ನು ಸಂಪಾದಿಸಲೇ ನಿಶ್ಚಿತವಾದ ದೃಢಸಂಕಲ್ಪವನ್ನು ಹೇಳುತ್ತದೆ. ಅಲ್ಲಿ ಇಟ್ಟಿಗೆಯು ಹಸಿಯಾಗಿ ಮುಂದೆ ಬಿಸಿಯಾಗುವಂತೆ ನಮ್ಮ ಜ್ಞಾನಾಗ್ನಿಯಿಂದ ಪರಿಪಕ್ವವಾಗಿ ಅನುಸಂಧಾನದಿಂದ ಗಟ್ಟಿಯಾಗಬೇಕು. ಇಟ್ಟಿಗೆಯು ಎಲ್ಲಾ ಮುಖದಿಂದಲೂ ಮತ್ತೊಂದರೊಂದಿಗೆ ಹೊಂದಿಕೊಳ್ಳುವಂತೆ ಪ್ರತಿದಿನವೂ ಹೊಂದಾಣಿಕೆಯಾಗಬೇಕು. ಹಗರಣ ಆಗಬಾರದು ಇಟ್ಟಿಗೆಯಲ್ಲಿ ದೇವತೆಗಳು–ಅಂತರ್ಯಾಮಿರೂಪಗಳು ಆಹ್ನಿಕವನ್ನು ಪರಿಚಿಂತನವನ್ನೂ ಪೂರ್ಣವಾಗಿ ಸಾಗಿಸಬೇಕು. ನಮ್ಮ ಯಜ್ಞ ಪುರೋಹಿತನೊಂದಿಗೆ ಸಾಗುವಂತೆ ಬದುಕು ಪುರೋಗಾಮಿಯಾಗಬೇಕು. ಋತ್ವಿಕ್‌ನೊಂದಿಗೆ ಋಕ್‌ಗಳ ಉಚ್ಚಾರಣೆ ಸಾಗುವಂತೆ ಸಾತ್ತ್ವಿಕವಾಗಬೇಕು. ಹರಿಯ ಗುಣಗಾನ ಅನುದಿನ ಆಗಬೇಕು. ಹೀಗಾದಾಗ ಯಮನ ಪಾಶ ಬಂಧಕವಾಗದೆ ಬದುಕು ಸಾರ್ಥಕವಾಗುತ್ತದೆ. ಆಗ ಬದುಕು ಉಸಿರಾಗದೆ ಉತ್ಸಾಹ–ಉಲ್ಲಾಸಗಳ ತವರಾಗುತ್ತದೆ. ಆಗ ಶೋಕ ಬೆನ್ನೇರದೇ ಆನಂದ ಹೆಗಲೇರುತ್ತದೆ. ಸ್ವರ್ಗ ಎನಿಸಿದ ವಿಷ್ಣುಲೋಕದಲ್ಲಿ ಸ್ವರೂಪಸುಖ ಅನುಭವಿಸುತ್ತಾನೆ.

(ಮುಂದುವರಿಯುವುದು)

**ದೀನ–ದುಃಖಿತರಿಗೆ ನಿಮ್ಮಲ್ಲಿರುವುದನ್ನು ಕೊಡಿ.**
~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~

# ಅಧ್ಯಾತ್ಮ ಪ್ರವೇಶ

## I ಭಗವದ್ಗೀತೆ ನಿಮಗೆಷ್ಟು ಗೊತ್ತು?

**1. ಈ ಪ್ರಪಂಚದಲ್ಲಿ ಸಾತ್ವಿಕ, ರಾಜಸ, ತಾಮಸ-ಈ ಮೂರು ಗುಣಗಳಿಗೆ ಒಳಪಡದ ವಸ್ತು**

ಅ) ಇದೆ ಬ) ಇಲ್ಲ ಕ) ತಿಳಿಯುವುದಿಲ್ಲ ಡ) ಕೆಲವು ಇರಬಹುದು

**2. ದೇವತೆಗಳು ನೆಲೆಸಿರುವ ಸ್ವರ್ಗಲೋಕವು**

ಅ) ಪ್ರಾಕೃತವಾದುದು ಬ) ಅಪ್ರಾಕೃತವಾದುದು

ಕ) ಕೆಲವು ಪ್ರಾಕೃತ-ಕೆಲವು ಅಪ್ರಾಕೃತ ಡ) ತಿಳಿಯುವುದಿಲ್ಲ

**3) ಮುಕ್ತಿಯಲ್ಲಿ ಸಾತ್ವಿಕ, ರಾಜಸ, ತಾಮಸ ಗುಣಗಳ ಪ್ರಭಾವವಿದೆಯೆ?**

ಅ) ಇದೆ ಬ) ಇಲ್ಲ ಕ) ತಿಳಿಯುವುದಿಲ್ಲ ಡ) ಕೆಲವು ಬಾರಿ ಇರಬಹುದು

**4) ಜೀವರಾಶಿಗಳು ಒಟ್ಟು ಎಷ್ಟು ವಿಧ?**

ಅ) 3 ಬ) 2 ಕ) 1 ಡ) ಅಸಂಖ್ಯ

**5) ಜೀವರಾಶಿಗಳಲ್ಲಿ ಸಾತ್ವಿಕ ಜೀವರು**

ಅ) ದೇವತೆ, ಪಿತೃ, ಗಂಧರ್ವರು ಬ) ಒಳ್ಳೆಯ ಮನುಷ್ಯರು ಕ) ಮುಕ್ತರು ಡ) ಈ ಮೂವರು

**6) ದೇವತೆಗಳೆಲ್ಲರೂ**

ಅ) ಸಾತ್ವಿಕ ಸಾತ್ವಿಕರು ಬ) ಸಾತ್ವಿಕ ರಾಜಸರು ಕ) ಸಾತ್ವಿಕ ತಾಮಸರು ಡ) ರಾಜಸ ಸಾತ್ವಿಕರು

**7) ಋಷಿ-ಮುನಿಗಳೆಲ್ಲರೂ**

ಅ) ಸಾತ್ವಿಕ-ಸಾತ್ವಿಕರು ಬ) ಸಾತ್ವಿಕ ರಾಜಸರು ಕ) ಸಾತ್ವಿಕ ತಾಮಸರು ಡ) ರಾಜಸ ಸಾತ್ವಿಕರು

**8) ಪಿತೃ-ಗಂಧರ್ವ ಮುಂತಾದವರು**

ಅ) ಸಾತ್ವಿಕ-ಸಾತ್ವಿಕರು ಬ) ಸಾತ್ವಿಕ ರಾಜಸರು ಕ) ಸಾತ್ವಿಕ ತಾಮಸರು ಡ) ರಾಜಸ ಸಾತ್ವಿಕರು

**9) ದೇವತೆಗಳಲ್ಲಿಯೂ ಇಂದ್ರ ಮುಂತಾದ ತತ್ವಾಭಿಮಾನಿಗಳು**

ಅ) ಸಾತ್ವಿಕ ಸಾತ್ವಿಕ ಸಾತ್ವಿಕ ಬ) ಸಾತ್ವಿಕ ಸಾತ್ವಿಕ ರಾಜಸ

ಕ) ಸಾತ್ವಿಕ ಸಾತ್ವಿಕ ತಾಮಸ ಡ) ಸಾತ್ವಿಕ ರಾಜಸ ಸಾತ್ವಿಕ

**10) ಬ್ರಹ್ಮ-ರುದ್ರಾದಿ ದೇವತೆಗಳು**

ಅ) ಸಾತ್ವಿಕ ಸಾತ್ವಿಕ ಸಾತ್ವಿಕ ಬ) ಸಾತ್ವಿಕ ಸಾತ್ವಿಕ ರಾಜಸ

ಕ) ಸಾತ್ವಿಕ ಸಾತ್ವಿಕ ತಾಮಸ ಡ) ಸಾತ್ವಿಕ ರಾಜಸ ಸಾತ್ವಿಕ

## II ಹರಿಕಥಾಮೃತಸಾರ ನಿಮಗೆಷ್ಟು ಗೊತ್ತು?

1) ಪಂಚಭೂತಗಳಲ್ಲಿ ಭಗವಂತನ ಉಪಾಸನೆ ಹೇಗೆ?

ಗಳಿಸಿದ ಹಣವನ್ನು ಕೇವಲ ವಿಲಾಸ ಜೀವನಕ್ಕಾಗಿಯೇ ಪೋಲು ಮಾಡದಿರಿ,



## III ಯೋಚಿಸಿ ಉತ್ತರಿಸಿ:

ಒಬ್ಬ ವ್ಯಕ್ತಿಯು ಸತ್ತ ಬಳಿಕ ಅವರಿಗೆ ಪ್ರೇತತ್ವ ನಿವಾರಣೆಗಾಗಿ ಸದ್ಗತಿ ದೊರಕಲೆಂದು ಹನ್ನೆರಡು ದಿನಗಳ ಕಾಲ ಔರ್ಧ್ವದೈಹಿಕ ಕ್ರಿಯೆಗಳನ್ನು ನಡೆಸುವುದನ್ನು ಕಂಡಿದ್ದೇವೆ. ಆದರೆ ಇಂದಿನ ಆಧುನಿಕ ಯುಗದಲ್ಲಿ ಯಾವ ಕರ್ಮವನ್ನು ಶಾಸ್ತ್ರೋಕ್ತವಾಗಿ ನಡೆಸಲು ಸಾಧ್ಯವಾಗುವುದಿಲ್ಲ. ಅದರಲ್ಲಿಯೂ ಔರ್ಧ್ವದೈಹಿಕ ಕರ್ಮಗಳನ್ನಂತೂ ಶಾಸ್ತ್ರೋಕ್ತವಾಗಿ ನಡೆಸಲು ಸಾಧ್ಯವೇ ಆಗದಷ್ಟು ವಿಷಮ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಇಂತಹ ಸಂದರ್ಭದಲ್ಲಿ ಸತ್ತ ವ್ಯಕ್ತಿಗೆ ಸದ್ಗತಿ ಪ್ರಾಪ್ತಿಯಾಗುತ್ತದೆಯೇ? ಆಗದಿದ್ದರೆ ಆಚರಿಸಿದ ಕರ್ಮ ವ್ಯರ್ಥವಲ್ಲವೆ? ಯೋಚಿಸಿ ಉತ್ತರಿಸಿ.

### ಉತ್ತರ ಮುಂದಿನ ತಿಂಗಳು

### ಕಳೆದ ಸಂಚಿಕೆಯ ಉತ್ತರ

**I** 1) ಕ 2) ಅ 3) ಅ 4) ಅ 5) ಅ 6) ಬ 7) ಬ 8) ಕ 9) ಕ 10) ಕ

**II** ಮಳೆಯಲ್ಲಿ ಭಗವಂತನ ಉಪಾಸನೆ- ಮೇಘದಲ್ಲಿ ನಾರಾಯಣ, ಮೇಘದಲ್ಲಿರುವ ನೀರು-ವಾಸುದೇವ, ಗುಡುಗು-ಸಂಕರ್ಷಣ, ಮಿಂಚು-ಪ್ರದ್ಯುಮ್ನ, ಮಳೆಯ ಹನಿ-ಅನಿರುದ್ಧ

**III 'ನ ದೇವ ತೋಷಣಂ ವೃಥಾ'** ಎಂಬಂತೆ ಯಾವುದೇ ಯುಗದಲ್ಲಾದರೂ ದೇವರ ಪ್ರೀತಿಗಾಗಿ ಭಕ್ತಿ-ಶ್ರದ್ಧೆಯಿಂದ ಆಚರಿಸುವ ಕರ್ಮವು ವಿಫಲವಾಗುವುದೇ ಇಲ್ಲ. ಕಲಿಯುಗವೂ ಇದಕ್ಕೆ ಅಪವಾದವಲ್ಲ. ಆದರೆ ಶೀಘ್ರ ಫಲದೊರಕದಿರಲು ಹಲವು ಕಾರಣಗಳಿರಬಹುದು. ಕರ್ತೃವಿನ ಸಂಕಲ್ಪಶಕ್ತಿ, ಶ್ರದ್ಧೆ ಕಡಿಮೆ ಇರಬಹುದು. ಕಾಲ-ದೇಶ ಶುದ್ಧವಿಲ್ಲದಿರಬಹುದು. ಮಂತ್ರೋಚ್ಚಾರಣೆ-ವಿಧಿವಿಧಾನಗಳು ಸರಿಯಾಗಿ ನಡೆಯದಿರಬಹುದು. ಆರಾಧನೆಗಾಗಿ ಬಳಸಿದ ದ್ರವ್ಯ ಶುದ್ಧವಿಲ್ಲದಿರಬಹುದು. ಹೀಗೆ ಅನೇಕ ಕಾರಣಗಳಿಂದ ಶೀಘ್ರಫಲ ದೊರಕದಿರಬಹುದು. ಆದರೆ ಆಚರಿಸಿದ ಕರ್ಮ ವಿಫಲವಾಗುವುದಂತೂ ಇಲ್ಲ. ಖಂಡಿತವಾಗಿಯೂ ಯಾವತ್ತಾದರೂ ಫಲಕಾರಿಯಾಗುತ್ತದೆ. ಯಾವತ್ತು ಹೇಗೆ, ಎಂಬುದು ಮಾತ್ರ ಭಗವಂತನಿಗೆ ಗೊತ್ತು. ವಸ್ತುತಃ ಫಲಕಾಮನೆಯನ್ನು ಇರಿಸಿಕೊಂಡು ಕರ್ಮವನ್ನಾಚರಿಸುವುದು ಸರಿಯಲ್ಲ. ಕೇವಲ ದೇವರ ಪ್ರೀತಿಗಾಗಿಯೇ ಕರ್ಮವನ್ನಾಚರಿಸುವುದು ಸೂಕ್ತ. ಸಾತ್ವಿಕವಾದ ಫಲಕಾಮನೆಯನ್ನಿರಿಸಿಕೊಂಡರೂ ಅಡ್ಡಿಯಿಲ್ಲ. ಆದರೆ ಕರ್ಮವನ್ನಾಚರಿಸಿದ ಕೂಡಲೆ ಫಲದೊರಕಬೇಕೆಂಬ ಆಸೆ ಸಲ್ಲದು. ಕರ್ಮವನ್ನಾಚರಿಸಿ ಕಡೆಗೆ **'ಕೃಷ್ಣಾರ್ಪಣಮಸ್ತು'** ಎಂದು ದೇವರಿಗೆ ಅರ್ಪಿಸಿದ ಬಳಿಕ ಕರ್ಮ ಭಗವಂತನ ಕೈ ಸೇರಿದಂತಾಯಿತು. ಬಳಿಕ ಅದಕ್ಕೆ ಫಲಕೊಡುವುದು ಅವನ ಅಧೀನವೆಂದು ತಿಳಿದು ನಿಶ್ಚಿಂತೆಯಿಂದಿರುವುದು ಒಳಿತು. **'ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ'.**

ಬಂದ ಹಣದಲ್ಲಿ ಸ್ವಲ್ಪ ಭಾಗವನ್ನು ಧಾರ್ಮಿಕ ಕಾರ್ಯಕ್ಕಾಗಿ, ಬಡಬಗ್ಗರಿಗಾಗಿ ವಿನಿಯೋಗಿಸಿ.

# ಶ್ರೀಕೃಷ್ಣ ಮೆಚ್ಚಿದ ಕೃಷ್ಣಾಪುರ ಪರ್ಯಾಯ

-ಅನಂತಕೃಷ್ಣಾಚಾರ್ಯ

ಶ್ರೀಕೃಷ್ಣಾಪುರ ಮಠಾಧೀಶರಾದ ಶ್ರೀವಿದ್ಯಾಸಾಗರತೀರ್ಥಶ್ರೀಪಾದರು ತಮ್ಮ ಎರಡು ವರುಷಗಳ ಶ್ರೀಕೃಷ್ಣಪೂಜಾಪರ್ಯಾಯವನ್ನು ಯಶಸ್ವಿಯಾಗಿ ಹರಿ-ವಾಯು-ಗುರುಗಳು ಮೆಚ್ಚುವಂತೆ ನಡೆಸಿದ್ದು ಅದರ ಸಂಕ್ಷಿಪ್ತ ಸಿಂಹಾವಲೋಕನ ಇಲ್ಲಿದೆ.

★ ತಮ್ಮ ಎರಡು ವರುಷಗಳ ಪರ್ಯಾಯಾವಧಿಯಲ್ಲಿ ಯಾವ ಪ್ರಚಾರವನ್ನು ಬಯಸದೆ ಪತ್ರಿಕಾ ಮಾಧ್ಯಮದಿಂದ ದೂರವಿದ್ದು ಶ್ರೀಕೃಷ್ಣ-ಮುಖ್ಯಪ್ರಾಣರ ಪೂಜಾ ಕೈಂಕರ್ಯದಲ್ಲಿಯೇ ತಮ್ಮನ್ನು ಸಂಪೂರ್ಣ ತೊಡಗಿಸಿಕೊಂಡದ್ದು ಮೆಚ್ಚುವ ಸಂಗತಿ.

★ ಪ್ರತಿದಿನವೂ ಶ್ರೀಕೃಷ್ಣನ ಪೂಜೆಗೆ ಉಪಯೋಗಿಸುವ ಸಾವಿರಾರು ಕುಡಿ ತುಳಸಿಯನ್ನು ತಾವೆ ಹೆಕ್ಕಿ ಸರಿಪಡಿಸುತ್ತಿದ್ದುದು ಶ್ರೀಪಾದರಿಗೆ ಶ್ರೀಕೃಷ್ಣ ಪೂಜೆಯಲ್ಲಿರುವ ನಿಷ್ಠೆಯನ್ನು ಎತ್ತಿ ತೋರಿಸುತ್ತಿತ್ತು.

★ ಪ್ರತಿದಿನ ಸಂಜೆ ಶ್ರೀಕೃಷ್ಣದೇವರ ಮುಂಭಾಗದ ಚಂದ್ರಶಾಲೆಯಲ್ಲಿ ಪುರಾಣಪ್ರವಚನವಾದ ಬಳಿಕ ಪರ್ಯಾಯ ಶ್ರೀಪಾದರು ಬಂದು ನಡೆಸುವ ವೇದವ್ಯಾಸಪೂಜೆಯನ್ನು ಉಳಿದ ಎಲ್ಲ ವೈಭವಗಳೊಂದಿಗೆ ಕ್ರಮ ಪ್ರಕಾರ ನಡೆಸುತ್ತಿದ್ದರು.

## ಆಧ್ಯಾತ್ಮಿಕ ಕಾರ್ಯಕ್ರಮಗಳು

★ ಶ್ರೀಪಾದರು ಪೂಜೆ, ಪ್ರಸಾದ ವಿನಿಯೋಗ ಹೊರತುಪಡಿಸಿ ಉಳಿದ ಸಂದರ್ಭದಲ್ಲಿ ಸುಮಾರು ಹದಿನೆಂಟು ವಿದ್ಯಾರ್ಥಿಗಳಿಗೆ ಎರಡು ಅವಧಿಯಲ್ಲಿ ಶ್ರೀಮಧ್ವವಿಜಯವೇ ಮೊದಲಾದ ಗ್ರಂಥಗಳ ಪಾಠವನ್ನು ಧಾತು, ಶಬ್ದ, ಪ್ರತ್ಯಯ, ವ್ಯಾಕರಣ ವಿಶೇಷ ಸಹಿತವಾಗಿ ನಡೆಸುತ್ತಿದ್ದರು. ಪರೀಕ್ಷೆ ನಡೆಸಿ ತಾಳ್ಮೆಯಿಂದ ಆಲಿಸುತ್ತಿದ್ದರು.

★ ಸಂಸ್ಕೃತಮಹಾಪಾಠಶಾಲೆಯ ನಿವೃತ್ತ ಪ್ರಾಂಶುಪಾಲರಾದ ವಿ॥ ಲಕ್ಷ್ಮೀನಾರಾಯಣ ಶರ್ಮರ ಸಹಕಾರದಿಂದ ಶ್ರೀಪಾದರು 'ಶ್ರೀಮನ್ನ್ಯಾಯಸುಧಾ' ಗ್ರಂಥದ ಚಿಂತನೆಯನ್ನು ನಡೆಸುತ್ತಿದ್ದರು.

★ ನಿರಂತರ ಜ್ಞಾನಯಜ್ಞ ಎರಡು ವರುಷಗಳ ಅವಧಿಯಲ್ಲಿ ನಡೆದು ಉಳಿದ

ಹೆಂಡತಿ ಮಕ್ಕಳಿಗೆ ಹಿತೋಪದೇಶವನ್ನು ಮಾಡುತ್ತಾ ಕುಟುಂಬವನ್ನು ಸಾಗಿಸುತ್ತಿರಿ.



ವಿಷಯಗಳೊಂದಿಗೆ ವಿಶೇಷವಾಗಿ ಮಹಾಭಾರತತಾತ್ಪರ್ಯನಿರ್ಣಯದ ಸಂಪೂರ್ಣ ಉಪನ್ಯಾಸ ನಡೆಯಿತು.

★ ಪೇಜಾವರ ಶ್ರೀಪಾದರು, ಅದಮಾರು ಕಿರಿಯ ಶ್ರೀಪಾದರು, ಪಲಿಮಾರು ಶ್ರೀಪಾದರು, ಕಾಣಿಯೂರು ಶ್ರೀಪಾದರು, ಜ್ಞಾನಯಜ್ಞದಲ್ಲಿ ಪಾಲ್ಗೊಂಡು ಪ್ರವಚನವನ್ನು ನೀಡಿದರು.

★ ಬನ್ನಂಜೆ ಗೋಪಾಲಕೃಷ್ಣ ಉಪಾಧ್ಯಾಯರು ಚೌಕಿಪುರಾಣ ಹಾಗೂ ಚಂದ್ರಶಾಲೆ ಪುರಾಣವನ್ನು ನಡೆಸಿದರು.

## ಧಾರ್ಮಿಕ ಕಾರ್ಯಕ್ರಮಗಳು

★ ಶ್ರೀಮುಖ್ಯಪ್ರಾಣದೇವರಿಗೆ ಸುಮಾರು ಎರಡೂವರೆ ಕೋಟಿ ರೂಪಾಯಿಗಳ ವೆಚ್ಚದಲ್ಲಿ ನವರತ್ನ ಖಚಿತವಾದ ವಜ್ರಕವಚವನ್ನು ಶ್ರೀಮಠದ ಖರ್ಚಿನಿಂದಲೇ ನಿರ್ಮಿಸಿ ಶ್ರೀಕೃಷ್ಣ-ಮುಖ್ಯಪ್ರಾಣರಿಗೆ ಸಮರ್ಪಿಸಲಾಯಿತು.

★ ವಿವಿಧ ಯಜ್ಞ-ಯಾಗಗಳು ಎರಡು ವರುಷಗಳ ಉದ್ದಕ್ಕೂ ನಡೆದಿವೆ.

★ ಎರಡು ಬಾರಿ ಕೋಟಿ ತುಳಸೀ ಅರ್ಚನೆ ನಡೆದಿದ್ದು ಅನೇಕ ಬಾರಿ ಲಕ್ಷ ತುಳಸೀ ಅರ್ಚನೆ ನಡೆದಿವೆ.

★ ಶ್ರೀಕೃಷ್ಣಜನ್ಮಾಷ್ಟಮಿ, ಮಧ್ವನವಮಿ ಮುಂತಾದ ವಿಶೇಷ ಸಂದರ್ಭಗಳಲ್ಲಿ ಸರ್ವಮೂಲ, ವೇದ ಮುಂತಾದ ಸದ್ಗ್ರಂಥಗಳ ಪಾರಾಯಣ ವಿದ್ವಾಂಸರಿಂದ ನಡೆಸಿ ಯೋಗ್ಯ ಸಂಭಾವನೆಯನ್ನು ನೀಡಿ ಗೌರವಿಸಲಾಗಿದೆ.

★ ಎರಡೂ ವರುಷಗಳ ಶ್ರಾವಣಮಾಸದ ಪ್ರತಿಶುಕ್ರವಾರದಂದು ವಿಪ್ರ ಮಹಿಳೆಯರು ಶ್ರೀವಾದಿರಾಜ ವಿರಚಿತ ಲಕ್ಷ್ಮೀಶೋಭಾನೆ ಪದ್ಯವನ್ನು ಪಠಿಸಿದರು. ಪ್ರತಿಬಾರಿಯೂ ಎಲ್ಲ ಮಹಿಳೆಯರಿಗೂ ಫಲಮಂತ್ರಾಕ್ಷತೆ ದಕ್ಷಿಣೆಯನ್ನು ಶ್ರೀಪಾದರು ನೀಡಿದರು.

★ ಶಿಥಿಲವಾಗಿದ್ದ ಚೌಕಿಯ ಮೇಲ್ಭಾಗವನ್ನು ನವೀಕರಿಸಲಾಯಿತು. ಮೃಷ್ಟಾನ್ನ ಉಪ್ಪರಿಗೆಗೆ ನಯವಾದ ಕಲ್ಲು ಹಾಸಿ ಚೆಂದಗೊಳಿಸಲಾಯಿತು.

★ ಶ್ರೀಕೃಷ್ಣದೇವರ ಗುಡಿಯ ಸುತ್ತಲಿನ ಚಂದ್ರಶಾಲೆ, ಸೂರ್ಯಶಾಲೆಯ ಶಿಥಿಲವಾಗಿದ್ದ ಮೇಲ್ಭಾಗದ ಗೋಡೆ, ನೆಲವನ್ನು ನವೀಕರಿಸಿ ಕೊಠಡಿಗಳನ್ನಾಗಿಸಿ ವಿದ್ಯಾರ್ಥಿಗಳಿಗೆ ಪಾಠ-ಪ್ರವಚನ, ಪಾರಾಯಣಗಳನ್ನು ನಡೆಸಲು ಅನುಕೂಲವಾಗುವಂತೆ ನಿರ್ಮಿಸಲಾಯಿತು.

(45ನೇ ಪುಟದಲ್ಲಿ....)

ಭಾರತೀಯ ಸಂಸ್ಕೃತಿ-ವಿದ್ಯೆಗಳನ್ನು ಕಲಿಯಲು ತೊಡಗಿರಿ.

(6ನೇ ಪುಟದಿಂದ...)

ಅಷ್ಟಮಠಾಧೀಶರನ್ನಾಗಿ ಮಾಡಿದ್ದು ಸ್ಪಷ್ಟವಾಗಿತ್ತು. ಇದನ್ನು ದ್ವಂದ್ವಮಠಾಧೀಶರಾದ ಅದಮಾರು ಶ್ರೀಪಾದರೂ, ಶ್ರೀಕೃಷ್ಣಮಠದ ಅಧಿಕಾರವನ್ನು ವರ್ಗಾಯಿಸುವ ಪೇಜಾವರ ಶ್ರೀಪಾದರೂ ಒಪ್ಪಿದ್ದರು. ಕಡೆಗೆ ನ್ಯಾಯಾಲಯವೇ ಶ್ರೀವಿದ್ಯಾಮಾನ್ಯರನ್ನು ಪಲಿಮಾರು ಮಠಾಧೀಶರೆಂದು ಘೋಷಿಸಿತು. ಹೀಗೆ ಆ ವಿವಾದ ಕೊನೆಗೊಂಡಿತು.

ಆದರೆ ಇತ್ತೀಚೆಗೆ ಉಂಟಾದ ವಿವಾದ ಅಧಿಕಾರಕ್ಕಿಂತಲೂ ಅರ್ಹತೆಗೆ ಸಂಬಂಧಪಟ್ಟದ್ದು. ಇದೇ ಅಂದಿಗೂ–ಇಂದಿಗೂ ವ್ಯತ್ಯಾಸ. ಆದ್ದರಿಂದ ಎರಡನ್ನೂ ಒಂದಾಗಿ ನೋಡುವಂತಿಲ್ಲ. ನೋಡುವುದು ಅಪರಾಧವಾದೀತು.

## ಈಗ ಅರ್ಹತೆಯ ವಿಷಯದಲ್ಲಿ ವಿವಾದ

ಶಾಸ್ತ್ರಗಳು ನಿಷಿದ್ಧ ದೇಶಗಳಲ್ಲಿ ಸಂಚರಿಸುವುದರಿಂದ ವ್ಯಕ್ತಿಯು ಅಪವಿತ್ರನಾಗುತ್ತಾನೆ ಎಂದು ನೂರಾರು ಪ್ರಮಾಣಗಳಿಂದ ಸಾರುತ್ತಿವೆ. ಆದ್ದರಿಂದ ಶ್ರೀಕೃಷ್ಣನನ್ನು ಪೂಜಿಸುವ ಅರ್ಹತೆಯನ್ನು ಕಳೆದುಕೊಳ್ಳುತ್ತಾನೆ ಎಂಬುದೇ ನಿಜವಾಗಿ ಚರ್ಚೆಯ ವಿಷಯ. ಪಂಡಿತ ಮಂಡಲಿಯು ನಿರ್ಧರಿಸಿದ್ದೂ 'ನಿಷಿದ್ಧ ದೇಶಗಳಲ್ಲಿ ಸಂಚರಿಸಿದವರಿಗೆ ಶ್ರೀಕೃಷ್ಣನನ್ನು ಪೂಜಿಸುವ, ಶ್ರೀಮಧ್ವರ ಸನ್ನಿಧಾನದಿಂದ ಕೂಡಿರುವ ಸರ್ವಜ್ಞಪೀಠವನ್ನೇರುವ ಅರ್ಹತೆ ಇಲ್ಲ' ಎಂದು.

ಅನರ್ಹರು ಶ್ರೀಕೃಷ್ಣನನ್ನು ಮುಟ್ಟಿ ಪೂಜಿಸಿದರೆ–ಸರ್ವಜ್ಞಪೀಠವನ್ನೇರಿದರೆ ಏನಾಗುತ್ತದೆ?

ಶ್ರೀಕೃಷ್ಣ ಪ್ರತಿಮೆಯಾಗಲಿ–ಸರ್ವಜ್ಞಪೀಠವಾಗಲಿ ಹಿಂದೆ ವಿವರಿಸಿದಂತೆ ಎಂದಿಗೂ ಮೈಲಿಗೆಯಾಗುವುದಿಲ್ಲ. ಆದರೆ ಅನರ್ಹರಾಗಿ ಪೂಜಿಸುವುದರಿಂದ ಪೂಜಿಸುವ ವ್ಯಕ್ತಿಗೆ , ದೇಶಕ್ಕೆ ಅನಿಷ್ಟ ಕಟ್ಟಿಟ್ಟಬುತ್ತಿ ಎಂಬುದನ್ನು ಶಾಸ್ತ್ರಗಳು ಸ್ಪಷ್ಟವಾಗಿ ಸಾರುತ್ತಿವೆ. ನಿಜವಾಗಿ ಇತ್ತೀಚೆಗೆ ಉಂಟಾದ ವಿವಾದ ಈ ವಿಷಯದಲ್ಲಿ ಸಾರ್ಥಕವಾಗುತ್ತದೆ.

ಆದರೆ ಈ ಅರ್ಹತೆ–ಅನರ್ಹತೆಯನ್ನು ಕೇವಲ ಮೇಲ್ನೋಟದಿಂದ ಗುರುತಿಸುವಂತಿಲ್ಲ. ಕೆಲವೊಮ್ಮೆ ಹೊರಗಿನಿಂದ ಅನರ್ಹರೆನಿಸಿಕೊಂಡವರೂ ಒಳಗಿನಿಂದ ಅರ್ಹರಾಗಿರಬಹುದು. ಕೆಲವೊಮ್ಮೆ ಹೊರಗಿನಿಂದ ಅರ್ಹರೆನಿಸಿಕೊಂಡವರೂ ಒಳಗಿನಿಂದ ಅನರ್ಹರಾಗಿರಬಹುದು. ಅದರ ಗುಟ್ಟನ್ನು ಆ ಕೃಷ್ಣನೇ ಬಲ್ಲ. ವ್ಯಕ್ತಿಯ ಸಾಕ್ಷಿ ಇಂದ್ರಿಯ

ಹಸಿದವರಿಗೆ ಅನ್ನವನ್ನು ನೀಡಿ.



ತಿಳಿಯಬಲ್ಲದು. ಸಾಕ್ಷಿಗೆ ಬೆಲೆ ಕೊಟ್ಟು ಅನರ್ಹನೆಂದು ಹಿಂದೆ ಸರಿಯಬಹುದು. ಸಾಕ್ಷಿಗೆ ಬೆಲೆ ಕೊಡದೆ ಉದ್ಧಟತನದಿಂದ ಮುನ್ನುಗ್ಗಲೂಬಹುದು. ಅದು ಅವರವರ ಸ್ವಭಾವ–ಪ್ರಭಾವಕ್ಕೆ ಬಿಟ್ಟಿದ್ದು. ಆದರೆ ಎಂದಿಗೂ ಶ್ರೀಕೃಷ್ಣನು ಪರಮಪವಿತ್ರನೇ. ಇದಕ್ಕೆ ಸಂಶಯವಿಲ್ಲ. ★

(14ನೇ ಪುಟದಿಂದ.............)

**ಅರ್ಘ್ಯಜಪಕಾಲೇ ಉಪವಿಶ್ಯೈವ ಕುರ್ಯಾದಿತ್ಯರ್ಥಃ** । ಎಂದು 'ಉತ್ತರಾಮುಪವಿಶ್ಯೈವ' ಎಂದರೆ ಸಾಯಂಕಾಲ ಸಂಧ್ಯಾವಂದನೆಯನ್ನು ಅರ್ಘ್ಯ–ಜಪಕಾಲದಲ್ಲಿ ಕುಳಿತೇ ಆಚರಿಸಬೇಕೆಂಬುದು ಆಚಾರ್ಯರ ಅಭಿಪ್ರಾಯ ಎಂದು ತಿಳಿಸುತ್ತಾರೆ.

ಈ ರೀತಿ ಈ ಶ್ಲೋಕವನ್ನು ಕಾಲಪರವಾಗಿ ಅರ್ಥೈಸುವುದು ಉಚಿತವೂ ಆಗಿದೆ. ಏಕೆಂದರೆ 'ಸಂಧ್ಯಾ' ಶಬ್ದಕ್ಕೆ 'ಸಂಧ್ಯಾ ಶಬ್ದ ವಾಚ್ಯಾಂ ಗಾಯತ್ರೀಂ' ಎಂದು ನರಹರ್ಯಾಚಾರ್ಯರು, 'ಸಂಧಿಕಾಲೋಪಾಸ್ಯತ್ವಾತ್, ಸಮ್ಯಕ್ ಧ್ಯೇಯತ್ವಾದ್ವಾ ಸಂಧ್ಯಾಶಬ್ದವಾಚ್ಯಾಂ ಗಾಯತ್ರೀಂ' ಎಂದು ಶ್ರೀನಿವಾಸಾಚಾರ್ಯರೇ ಮುಂತಾದವರು ವ್ಯಾಖ್ಯಾನವನ್ನು ಮಾಡಿದರೂ ಈ ಶ್ಲೋಕಕ್ಕೆ ಸಂಧ್ಯಾಕಾಲ ಪರವಾದ ಅರ್ಥವನ್ನು ಒಪ್ಪಿಕೊಂಡಿದ್ದಾರೆ. ಆದ್ದರಿಂದಲೇ ವ್ಯಾಖ್ಯಾನಕಾರರೂ **ಪೂರ್ವಾಂ**–ಪ್ರಾತಸ್ತನೀಂ ಸಂಧ್ಯಾಂ (ಶ್ರೀನಿವಾಸೀಯ), ಪ್ರಾತಃ ಕಾಲೀನಾಂ (ನರಹರೀಯ) **ಉತ್ತರಾಂ**–ಸಾಯಂತನೀಂ ಸಂಧ್ಯಾಂ ಎಂದು ಅರ್ಥೈಸಿದ್ದಾರೆ. ಸ್ಮೃತಿಮುಕ್ತಾವಲಿಯಲ್ಲಿ 'ಅತ್ರ ಕಾಲವಾಚಿನಾ ಸಂಧ್ಯಾಶಬ್ದೇನ ತಸ್ಮಿನ್ ಕಾಲೇ ಉಪಾಸ್ಯದೇವತಾ ಉಪಲಕ್ಷ್ಯತೇ' ಎಂದು ಸಂಧ್ಯಾಶಬ್ದಕ್ಕೆ ಕಾಲವಾಚಕವಾದ ಅರ್ಥ ಪ್ರಧಾನವಾಗಿದ್ದು ಉಪಲಕ್ಷಣದಿಂದ 'ದೇವತಾ'ಪರವಾದ ಅರ್ಥವು ಕೂಡುತ್ತದೆ ಎಂದಿದೆ.

ಹೀಗೆ ವ್ಯಾಖ್ಯಾನಕಾರರು 'ಸಂಧ್ಯಾ' ಶಬ್ದಕ್ಕೆ ಸಂಧ್ಯಾಕಾಲಪರವಾದ ಅರ್ಥವನ್ನು ಒಪ್ಪಿಕೊಂಡೇ ದೇವತಾಪರವಾಗಿ ಅರ್ಥೈಸಿದ್ದಾರೆ. ಒಂದೊಮ್ಮೆ ಕಾಲಪರವಾದ ಅರ್ಥವನ್ನು ಒಪ್ಪದಿದ್ದರೆ 'ಪೂರ್ವಾಂ' ಹಾಗೂ 'ಉತ್ತರಾಂ' ಎಂಬ ವಿಶೇಷಣಗಳೇ ವ್ಯರ್ಥವಾಗುತ್ತವೆ.

ಒಟ್ಟಾರೆ ಪ್ರಾತಃಕಾಲದ ಸಂಧ್ಯೆಯ ನಕ್ಷತ್ರಗಳಿರುವಾಗಲೆ, ಸಾಯಂಕಾಲದ ಸಂಧ್ಯೆಯನ್ನು ಸೂರ್ಯನಿರುವಾಗಲೆ ಮಾಡಬೇಕೆಂದು ಹೇಳಿದಂತಾಯಿತು.

ಬಾಯಾರಿದವರನ್ನು ನೀರಿನಿಂದ ತೃಪ್ತಿಗೊಳಿಸಿ.

ಆದ್ದರಿಂದ 'ಪೂರ್ವಾಂ ಸಂಧ್ಯಾಂ ಸನಕ್ಷತ್ರಾಂ' ಎನ್ನುವ ಶ್ಲೋಕ ಕೇವಲ ಗಾಯತ್ರೀ ಜಪಕ್ಕೆ ಮಾತ್ರ ಅನ್ವಯಿಸುತ್ತದೆಂದು ಅರ್ಥೈಸಲಾಗದು. ಪ್ರಾತಃಕಾಲದ ಅರ್ಘ್ಯ–ಜಪ ಸಹಿತವಾದ ಸಂಧ್ಯಾವಂದನೆ, ಸಾಯಂಕಾಲದ ಅರ್ಘ್ಯ–ಜಪ ಸಹಿತವಾದ ಸಂಧ್ಯಾವಂದನೆ ಎಂದೇ ಅರ್ಥೈಸಬೇಕಾಗುತ್ತದೆ.

## ಕಾಲದ ನಿಯಮ ಅರ್ಘ್ಯ, ಜಪ ಎರಡಕ್ಕೂ ಬೇಕು

ಸಂಧ್ಯಾವಂದನೆಯಲ್ಲಿ ಪ್ರಧಾನವಾದ ಅಂಗವೇ ಅರ್ಘ್ಯಪ್ರದಾನ. ಇದನ್ನು ಛಲಾರಿ ಆಚಾರ್ಯರು **'ಅರ್ಘ್ಯಾಂತ ಏವ ಪ್ರಧಾನ ಸಂಧ್ಯಾ ಜಪೋಪಸ್ಥಾನಾದಿಕಂ ತು ತದಂಗಂ'** ಎಂದು ತಿಳಿಸುತ್ತಾರೆ.

ಕಾಲದ ನಿಯಮ ಅರ್ಘ್ಯಪ್ರದಾನಕ್ಕೆ ಮುಖ್ಯವಾಗಿ ಅನ್ವಯಿಸುತ್ತದೆ. ಏಕೆಂದರೆ ಮಂದೇಹ ರಾಕ್ಷಸರು ಬ್ರಹ್ಮವರದಿಂದ ಸೂರ್ಯನನ್ನು ಬಾಧಿಸುವುದು ಸಂಧ್ಯಾ ಕಾಲದಲ್ಲಿಯೇ. ಅವರ ನಾಶಕ್ಕಾಗಿಯೇ ಅರ್ಘ್ಯಪ್ರದಾನ. ಅದಕ್ಕಾಗಿಯೇ ಸಂಧ್ಯಾಕಾಲದಲ್ಲಿ ಅರ್ಘ್ಯಪ್ರದಾನ ಸಾಧ್ಯವಾಗದಿದ್ದರೆ ಪ್ರಾಯಶ್ಚಿತ್ತರೂಪವಾಗಿ ನಾಲ್ಕನೆಯ ಅರ್ಘ್ಯವನ್ನು ಬಿಡುವುದು. ಆದ್ದರಿಂದ 'ಸದಾಚಾರಸ್ಮೃತಿ'ಯ 'ಪೂರ್ವಾಂ ಸಂಧ್ಯಾಂ' ಎನ್ನುವಲ್ಲಿ ಸಂಧ್ಯಾಶಬ್ದದಿಂದ ಅರ್ಘ್ಯ–ಜಪಗಳೆರಡನ್ನೂ ಪರಿಗಣಿಸಬೇಕು ಎಂಬುದು ಸ್ಪಷ್ಟವಾಗುತ್ತದೆ.

'ಸಂಧ್ಯಾ' ಶಬ್ದ ಕೇವಲ ಗಾಯತ್ರೀಜಪವನ್ನು ಮಾತ್ರ ತಿಳಿಸುತ್ತದೆ ಎಂದು ಅರ್ಥೈಸಿದರೆ ಆಚಾರ್ಯರು ಸಂಧ್ಯಾವಂದನೆಯಲ್ಲಿ ಪ್ರಧಾನಾಂಗವಾದ ಅರ್ಘ್ಯಪ್ರದಾನಕ್ಕೆ ಬಹಳ ಮುಖ್ಯವಾದ ಕಾಲದ ನಿಯಮವನ್ನೇ ತಿಳಿಸದೆ 'ಸದಾಚಾರಸ್ಮೃತಿ' ಅಪೂರ್ಣ ಗ್ರಂಥವಾಗುವ ಪ್ರಸಂಗ ಬಂದೀತು.

ಹೀಗೆ 'ಪೂರ್ವಾಂ ಸಂಧ್ಯಾಂ' ಎಂಬ ಶ್ಲೋಕವನ್ನು ವಿಮರ್ಶಿಸಿದಾಗ ಪ್ರಾತಃಕಾಲದ ಸಂಧ್ಯಾವಂದನೆಯನ್ನು (ಅರ್ಘ್ಯಪ್ರದಾನ, ಜಪ) ನಕ್ಷತ್ರವಿರುವಾಗಲೇ ಪ್ರಾರಂಭಿಸಬೇಕು. ಮಧ್ಯಾಹ್ನ, ಸಾಯಂ ಸಂಧ್ಯಾವಂದನೆಯನ್ನು ಸೂರ್ಯನಿರುವಾಗಲೇ ಪ್ರಾರಂಭಿಸಬೇಕು. ಸಾಯಂ ಸಂಧ್ಯಾವಂದನೆಯ (ಅರ್ಘ್ಯಪ್ರದಾನ, ಜಪ) ಯನ್ನು ಕುಳಿತುಕೊಂಡೇ ನಡೆಸಬೇಕು ಎಂದು ಅರ್ಥವಾಗುತ್ತದೆ.

ಒಟ್ಟು 'ಸದಾಚಾರಸ್ಮೃತಿ' ಯ ಪ್ರಕಾರ ಸಾಯಂ ಸಂಧ್ಯೆಯಲ್ಲಿಯೂ ಕುಳಿತೇ



ಅರ್ಘ್ಯಪ್ರದಾನವೆಂದು ಸಿದ್ಧವಾಗುತ್ತದೆ.

ಈ ರೀತಿಯ ಅರ್ಥವನ್ನು ಬಲಾತ್ಕಾರವಾಗಿ ಮಾಡಬೇಕಿಲ್ಲ. ಛಂದೋಗಶ್ರುತಿ ಸ್ಪಷ್ಟವಾಗಿ ಸಾಯಂ ಸಂಧ್ಯೆಯಲ್ಲಿ ಕುಳಿತೇ ಅರ್ಘ್ಯಪ್ರದಾನ ಮಾಡಬೇಕೆಂದು ತಿಳಿಸಿ ಹಾಗೆ ಕುಳಿತು ಅರ್ಘ್ಯಪ್ರದಾನ ಮಾಡುವುದರಿಂದ ವೀರರು ಪಡೆಯುವ ಸ್ಥಾನವು ಲಭ್ಯವಾಗುತ್ತದೆಂದು ಫಲವನ್ನು ತಿಳಿಸುತ್ತದೆ.

**ಬ್ರಹ್ಮವಾದಿನೋ ವದಂತಿ, ಕಸ್ಮಾತ್ ಬ್ರಾಹ್ಮಣಃ ಸಾಯಮಾಸೀನಃ ಸಂಧ್ಯಾಮುಪಾಸ್ತೆ ಕಸ್ಮಾತ್ ಪ್ರಾತಸ್ತಿಷ್ಠನ್ , ಕಾ ಚ ಸಂಧ್ಯಾ, ಕಶ್ಚ ಸಂಧ್ಯಾಕಾಲಃ...............................**

...............................

**ತಸ್ಮಾದ್ ಬ್ರಾಹ್ಮಣೋಽಹೋರಾತ್ರಸ್ಯ ಸಂಯೋಗೇ ಸಂಧ್ಯಾಮುಪಾಸ್ತೇ, ಜ್ಯೋತಿಷ್ಯಾ ಜ್ಯೋತಿಷೋ ದರ್ಶನಾತ್, ಸೋಽಸ್ಯಕಾಲಃ, ಸಾ ಸಂಧ್ಯಾ, ತತ್ ಸಂಧ್ಯಾಯಾಃ ಸಂಧ್ಯಾತ್ವಮ್ ಯತ್ ಸಾಯಮಾಸೀನಃ ಸಂಧ್ಯಾಮುಪಾಸ್ತೇ, ತಯಾ ವೀರಸ್ಥಾನಂ ಜಯತಿ, ಅಥ ಯದಪಃ ಪ್ರಯುಂಕ್ತೇ ತಾ ವಿಪ್ಲುಷೋ ವಜ್ರೀಭವಂತಿ, ತಾ ವಿಪ್ಲುಷೋ ವಜ್ರೀಭೂತ್ವಾಽಸುರಾನುಪಾಘ್ನಂತಿ'**

–ಛಂದೋಗಶ್ರುತಿ

ಶಂಖಸ್ಮೃತಿ, ಲೌಗಾಕ್ಷಿಸ್ಮೃತಿ, ಮನುಸ್ಮೃತಿ, ವ್ಯಾಸಸ್ಮೃತಿ, ಶಾತಾತಪ ಸ್ಮೃತಿಗಳೂ ಸಾಯಂ ಸಂಧ್ಯೆಯಲ್ಲಿ ಕುಳಿತೇ ಗಾಯತ್ರೀ ಮಂತ್ರವನ್ನು ಅರ್ಘ್ಯಪ್ರದಾನ, ಜಪ–ತರ್ಪಣಕಾಲದಲ್ಲಿ ಜಪಿಸಬೇಕೆಂದು ತಿಳಿಸುತ್ತಿವೆ.

ಈ ಶ್ರುತಿ–ಸ್ಮೃತಿಗಳ ಅಭಿಪ್ರಾಯವನ್ನೇ ಆಚಾರ್ಯರು 'ಸದಾಚಾರಸ್ಮೃತಿ'ಯಲ್ಲಿ 'ಉತ್ತರಾಮುಪವಿಶ್ಯೈವ' ಎಂದು ಸಾಯಂ ಸಂಧ್ಯೆಯನ್ನು ಕುಳಿತೇ ಆಚರಿಸಬೇಕೆಂದು ತಿಳಿಸಿದ್ದಾರೆ.

## ಆಚಾರ್ಯರ ವಾಕ್ಯ ಸರ್ವಶಾಖಿಗಳಿಗೂ ಸಂಬಂಧಿಸಿದ್ದು

ಕೆಲವರು ಮೇಲಿನ ಶ್ರುತಿ–ಸ್ಮೃತಿ, ಆಚಾರ್ಯರ ವಾಕ್ಯ ಋಕ್ ಶಾಖೆಯಿಂದ ಭಿನ್ನರಾದ ಯಜುಃಶಾಖೆ, ಸಾಮಶಾಖೆ, ಅಥರ್ವಶಾಖೆಯವರಿಗೆ ಮಾತ್ರ

ಸಂಬಂಧಿಸಿದ್ದು. ಋಕ್ ಶಾಖೆಯವರು 'ತಿಷ್ಠನ್ನರ್ಘ್ಯತ್ರಯಂ ದದ್ಯಾತ್ ಎಂಬ ಸ್ಮೃತಿ ವಾಕ್ಯದಂತೆ ಸಾಯಂ ಸಂಧ್ಯೆಯಲ್ಲಿ ನಿಂತೇ ಅರ್ಘ್ಯಪ್ರದಾನ ಮಾಡಬೇಕೆಂದು ಅರ್ಥೈಸುವುದುಂಟು. ಇದು ಸರಿಯಲ್ಲ. ಛಂದೋಗಶ್ರುತಿ ಸಂಧ್ಯಾವಂದನೆಯನ್ನು ಆಚರಿಸುವ ಸಮಸ್ತ ಬ್ರಾಹ್ಮಣರನ್ನು ಕುರಿತಾಗಿದೆ ಎಂಬುದು ಅದನ್ನು ನೋಡಿದಾಗಲೆ ಸ್ಪಷ್ಟವಾಗುತ್ತದೆ. ಸ್ಮೃತಿ ವಾಕ್ಯಗಳಲ್ಲಿ ಎಲ್ಲಿಯೂ ಇದು ಇಂತಹ ಶಾಖೆಯವರಿಗೆ ಮಾತ್ರ ಅನ್ವಯಿಸುತ್ತದೆ ಎಂಬುದಿಲ್ಲ. ಇನ್ನು ಆಚಾರ್ಯರ ಮಾತನ್ನು ಕೇವಲ ಕೆಲವು ಶಾಖೆಯವರಿಗೆ ಮಾತ್ರ ಸಂಬಂಧಿಸಿದ್ದೆಂದು

ಅರ್ಥೈಸಿದರೆ ಆಚಾರ್ಯರ ಗ್ರಂಥಗಳು ಸರ್ವಶಾಖಾನಿರ್ಣಾಯಕವಲ್ಲ ಎಂದು ಹೇಳಿದಂತೆ ಆಗುತ್ತದೆ. ಇದು ಸರಿಯಲ್ಲ. ಆದ್ದರಿಂದ ಆಚಾರ್ಯರು ಸಮಸ್ತಶಾಖೆಗಳಿಗೂ ಸಂಬಂಧಿಸಿದಂತೆ ನುಡಿದಿದ್ದಾರೆಂದೇ ಅರ್ಥೈಸಬೇಕು.

ಹಿಂದಿನಿಂದ ಬಂದ ಶಿಷ್ಟ ಸಂಪ್ರದಾಯವೂ ಋಗ್ವೇದಿಗಳು ಸಾಯಂ ಸಂಧ್ಯೆಯಲ್ಲಿ ಕುಳಿತೇ ಅರ್ಘ್ಯಪ್ರದಾನ ಮಾಡಬೇಕೆಂದು ತಿಳಿಸುತ್ತಿದೆ. ಋಗ್ವೇದಿಯ ಆಹ್ನೀಕ ಮಂಜರಿ, ಋಗ್ವೇದೀಯ ಸಂಧ್ಯಾವಂದನೆ, ಸದಾಚಾರಸ್ಮೃತಿ, ಕನ್ನಡ ವ್ಯಾಖ್ಯಾನ, ಜಪ ಮೀಮಾಂಸಾ, ಸಂಧ್ಯಾರಹಸ್ಯ, ಋಗ್ವೇದೀಯ ಸುಲಭನಿತ್ಯಾನುಷ್ಠಾನ ಸಂಗ್ರಹ ಮುಂತಾದುವು ಉದಾಹರಣೆಗಳು.

ಕೇವಲ ಬ್ರಹ್ಮಕರ್ಮ ಸಮುಚ್ಚಯ, ಧರ್ಮಸಿಂಧು ಮುಂತಾದ ಮಾಧ್ವೇತರ ಗ್ರಂಥಗಳು ಋಗ್ವೇದಿಗಳು ಸಾಯಂ ಸಂಧ್ಯೆಯಲ್ಲಿ ನಿಂತು ಅರ್ಘ್ಯಪ್ರದಾನ ಮಾಡಬೇಕೆಂದು ತಿಳಿಸುತ್ತವೆ.

## ಹಾಗಿದ್ದರೆ ಸ್ಮೃತಿ ವಾಕ್ಯದ ಗತಿ ಏನು?

ಹಾಗಿದ್ದರೆ 'ತಿಷ್ಠನ್ ಅರ್ಘ್ಯತ್ರಯಂದದ್ಯಾತ್' ಎಂಬ ಸ್ಮೃತಿ ವಾಕ್ಯ ಅಪ್ರಾಮಾಣಿಕವೆ? ಎಂದು ಸಂಶಯ ಮೂಡುತ್ತದೆ. ಖಂಡಿತ ಇಲ್ಲ.

ಲಘ್ವಾಶ್ವಲಾಯನ ಸ್ಮೃತಿಯಲ್ಲಿ ಬರುವ ಈ ಶ್ಲೋಕದ ಪೂರ್ಣಪಾಠ ನೋಡಿದಾಗ ಹೇಗೆ ಅರ್ಥೈಸಬೇಕೆಂದು ತಿಳಿಯುತ್ತದೆ.



**ಜಲಮಂಜಲಿನಾऽऽದಾಯ ಗಾಯತ್ರ್ಯಾ ಚಾಭಿಮಂತ್ರಯೇತ್ ।**
**ದದ್ಯಾದರ್ಘ್ಯತ್ರಯಂ ತಿಷ್ಠಂಸ್ತ್ರಿಷು ಕಾಲೇಷು ಬಹ್ವೃಚಃ ॥**
**ಪ್ರಾತರ್ಮಧ್ಯಾಹ್ನಯೋರಪ್ಸು ಕ್ಷಿಪೇತ್ ಸಾಯಂ ಮಹೀತಲೇ ।**

ಋಗ್ವೇದಿಗಳು ಜಲವನ್ನು ಬೊಗಸೆಯಲ್ಲಿ ತುಂಬಿಸಿಕೊಂಡು ಗಾಯತ್ರಿಯಿಂದ ಅಭಿಮಂತ್ರಿಸಿ ಮೂರು ಕಾಲದಲ್ಲಿಯೂ ನಿಂತು ಅರ್ಘ್ಯವನ್ನು ನೀಡಬೇಕು. ಬೆಳಗ್ಗೆ, ಮಧ್ಯಾಹ್ನ, ನೀರಿನಲ್ಲಿ ಅರ್ಘ್ಯವನ್ನು ಎಸೆದರೆ ಸಾಯಂಕಾಲ ನೆಲದಲ್ಲಿ ಅರ್ಘ್ಯವನ್ನು ಬಿಡಬೇಕು.

ಈ ಶ್ಲೋಕದ ಪೂರ್ಣ ಪಾಠವನ್ನು ಅರ್ಥೈಸಿಕೊಂಡಾಗ ಇದು ಕೇವಲ ನದಿ ಪ್ರವಾಹಗಳಲ್ಲಿ ಸಂಧ್ಯಾವಂದನೆಯನ್ನು ಮಾಡುವಾಗ ಮಾತ್ರ ಅನ್ವಯಿಸುವ ನಿಯಮವೆಂದು ಸ್ಪಷ್ಟವಾಗಿ ತೋರುತ್ತದೆ. ಬೊಗಸೆಯಲ್ಲಿ ನೀರನ್ನು ತುಂಬಿಸಿಕೊಳ್ಳುವುದು, ನೀರಿನಲ್ಲಿ, ಶುದ್ಧನೆಲದಲ್ಲಿ ಅರ್ಘ್ಯವನ್ನು ಬಿಡುವುದು ಉಳಿದ ಕಡೆ ಸಾಧ್ಯವಿಲ್ಲ. ಆದ್ದರಿಂದ ಇದು ಸಾರ್ವತ್ರಿಕ ನಿಯಮವಲ್ಲ. ಸಾಂದರ್ಭಿಕ ನಿಯಮವಷ್ಟೆ ಎಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದಲೆ 'ಸಂಧ್ಯಾರಹಸ್ಯ' (ಮಾಹುಲಿ ಗೋಪಾಲಾಚಾರ್ಯ ಸಂಪಾದಿತ)ದಲ್ಲಿ ಸಾಯಂ ಸಂಧ್ಯೆಯನ್ನು ನದಿಪ್ರವಾಹಗಳಲ್ಲಿ ನಡೆಸುವಾಗ ನಿಂತು ಅರ್ಘ್ಯ ಕೊಡಬೇಕು. ಉಳಿದೆಡೆಗಳಲ್ಲಿ ಕುಳಿತು ಅರ್ಘ್ಯವನ್ನು ಕೊಡಬೇಕೆಂದು ತಿಳಿಸಿದ್ದಾರೆ. ಇದು ಕೇವಲ ಸಾಂದರ್ಭಿಕ ನಿಯಮವಾದ್ದರಿಂದ ಸ್ಮೃತಿಮುಕ್ತಾವಳಿಕಾರರು, ಸ್ಮೃತ್ಯರ್ಥಸಾಗರಕಾರರು ಈ ಪ್ರಮಾಣವನ್ನು ಉಲ್ಲೇಖಿಸುವುದಿಲ್ಲ.

ಅನೇಕ ವ್ಯಾಖ್ಯಾನಕಾರರು ಈ ಪ್ರಮಾಣದ ಕೇವಲ ಒಂದು ಸಾಲನ್ನು, ಬಾಯಿಯಿಂದ ಬಾಯಿಗೆ ಕೇಳಿದ್ದನ್ನೇ ದಾಖಲಿಸಿ, ಅದು ಯಾವ ಸ್ಮೃತಿ ಎಂಬುದನ್ನು ಅದರ ಪೂರ್ವಾಪರವನ್ನು ತಿಳಿಯದೆ 'ಋಗ್ವೇದಿಗಳು ಮೂರು ಹೊತ್ತು ನಿಂತೇ ಅರ್ಘ್ಯಪ್ರದಾನವನ್ನು ಮಾಡಬೇಕೆಂದು ನಿರ್ಣಯಿಸುವುದನ್ನು ಕಂಡಾಗ ಬೇಸರವಾಗುತ್ತದೆ.

ಒಟ್ಟಾರೆ ಹೀಗೆ ದೀರ್ಘವಾಗಿ ಅಲೋಚಿಸಿದಾಗ ಆಚಾರ್ಯರು ಸದಾಚಾರಸ್ಮೃತಿ ಯಲ್ಲಿ ತಿಳಿಸಿದಂತೆ ಸಾಯಂಸಂಧ್ಯೆಯಲ್ಲಿ ಋಗ್ವೇದಿಗಳು ಅರ್ಘ್ಯಪ್ರದಾನ ಜಪವನ್ನು ಕುಳಿತೇ ನಡೆಸಬೇಕೆಂದು ಸಿದ್ಧವಾಗುತ್ತದೆ. ★

# ಕುಜ

ವಿ|| ಕೆ. ಶ್ರೀಪತಿ ಉಪಾಧ್ಯಾಯ, ಕುಂಭಾಸಿ

ಪಂಚತಾರಾಗ್ರಹಗಳಲ್ಲಿ (ಕುಜ, ಬುಧ, ಗುರು, ಶುಕ್ರ, ಶನಿ) ಈತನು ವೇದಗಳಲ್ಲಿ, ಪುರಾಣಗಳಲ್ಲಿ, ಭೂ ಸಂಬಂಧಿಯೆಂದೂ, ಭೂಪುತ್ರನೆಂದೂ ವರ್ಣಿತನಾಗಿರುತ್ತಾನೆ. ಕೆಂಪಾಗಿ ಕಾಣುವ ಈತನು ಭೂಮಿಯ ಬಹುಸಾಮ್ಯವನ್ನು ಹೊಂದಿರುತ್ತಾನೆ.

ಪುರಾಣದಲ್ಲಿ ರುದ್ರದೇವರ ಬೆವರಿನಿಂದ ಹುಟ್ಟಿದವನೆಂದೂ ಪ್ರಸಿದ್ಧಿಯಿದೆ. ಕೆಲವು ಪುರಾಣಗಳಲ್ಲಿ ಸೃಷ್ಟಿಯ ಆರಂಭದಲ್ಲಿ ಪ್ರಜಾಪತಿಯು ಕ್ರೋಧದಿಂದ ತನ್ನ ಕೈಯಿಂದ ಹೊರಹೊಮ್ಮುತ್ತಿರುವ ತೇಜಸ್ಸಿನ ರೂಪವಾದಂತಹ ಅಗ್ನಿಯಲ್ಲಿ ತೇಜಸ್ಸಿನಿಂದಲೇ ಹೋಮಿಸಿದನು. ಆ ಅಗ್ನಿಯಿಂದ ಭೂಮಿಗೆ ಹೊರಟ ಬಹುಗಾತ್ರದ ಅಗ್ನಿಯಿಂದಲೇ ಈ ಅಂಗಾರಕನು ಉತ್ಪನ್ನನಾದನು. ಈತನು ಸ್ವಯಂಭುವಿನ ನಿಯೋಗದಂತೆ ರಾಶಿಚಕ್ರದಲ್ಲಿ ಸಂಚರಿಸುತ್ತಾ ವಕ್ರಗತಿಗಳಿಂದ ಜನರಮೇಲೆ ಪ್ರಭಾವ ಬೀರುತ್ತಿರುವನು.

ವೈಜ್ಞಾನಿಕವಾಗಿ ಸೂರ್ಯನ ಸುತ್ತ ಭ್ರಮಿಸುವ ಈತ ಸೂರ್ಯನಿಂದ 150,000,000 ಕಿ.ಮೀ ದೂರದಲ್ಲಿರುವನು. ಈತನಿಗೆ ಸ್ವಪ್ರಕಾಶವಿಲ್ಲ. ನೀರಿಲ್ಲ, ಪ್ಲಾಟಿನಂ ಮೊದಲಾದಂತಹ ಕೆಲವು ಖನಿಜಗಳಿರುವುದರಿಂದ ಭೂಮಿಗೆ ಕೆಂಪಾಗಿ ಕಾಣುವನು. ವೈಜ್ಞಾನಿಕವಾಗಿ ಬಹು ಸಂಶೋಧನೆಗೆ ಒಳಪಟ್ಟ ಹಾಗೂ ಒಳಪಡುತ್ತಿರುವ ಗ್ರಹ ಈತ. ಯಾವುದೇ ಜೀವಿಗಳ ಅಸ್ತಿತ್ವವೂ ಈತನ ಮೇಲ್ಮೈಯಲ್ಲಿದೆ ಎನ್ನುವುದಕ್ಕೆ ಸುಳಿವು ದೊರಕಿಲ್ಲ.

ಪ್ರಾಚೀನ ಜ್ಯೋತಿಷಶಾಸ್ತ್ರದಲ್ಲಿ 'ಸತ್ವಂ ಕುಜಃ' ಎನ್ನುವಂತೆ ಈತನು ಸತ್ತ್ವಕಾರಕನು. ಆತ್ಮಕಾರಕ ರವಿ, ಮನಃಕಾರಕ ಚಂದ್ರನಾದರೆ ಶಕ್ತಿಕಾರಕನೇ ಕುಜನು. ಆತ್ಮ, ಶರೀರವನ್ನು ಪ್ರವೇಶಿಸಿದ ನಂತರ ಮಾನಸಿಕ ಸ್ವಾಸ್ಥ್ಯ ಮುಖ್ಯ. ಅನಂತರ ದೈಹಿಕ ಬೆಳವಣಿಗೆ. ಈ ದೈಹಿಕ ಶಕ್ತಿಯನ್ನು ಸೂಚಿಸುವ ಗ್ರಹನೇ ಅಂಗಾರಕ. ಆತ್ಮನಿಗೂ ಮನಸ್ಸಿಗೂ ಸಂಯೋಗ. ಮನಸ್ಸಿಗೂ ಇಂದ್ರಿಯಕ್ಕೂ ಸಂಯೋಗ ಈತನಿಂದ

ನಿಜವಾದ ಮರ್ಮವನ್ನರಿಯದ ಮೂರ್ಖರನ್ನು ಎಂದಿಗೂ ಗುರುವೆಂದು ನಂಬದಿರಿ.



ಉಂಟಾಗುತ್ತದೆ. ಇಂದ್ರಿಯ ಕಾರಕನೀತ. ಹೀಗೆ ಈತನ ಸ್ಥಾನವು ಅತೀ ಮುಖ್ಯವಾದುದು.

ಈತನನ್ನು ಸೇನಾಧಿಪತಿಯೆಂದೇ ಕರೆಯುವರು. ಕ್ಷತ್ರಿಯನಾದ ಈತ ಯುದ್ಧಕಾರಕನು. ಮೇಷ–ವೃಶ್ಚಿಕಗಳು ಈತನ ಸ್ವಕ್ಷೇತ್ರ.. ಮೇಷವು ಮೂಲತ್ರಿಕೋಣದ ಸ್ಥಾನವೂ ಹೌದು. ಮಕರವು ಉಚ್ಚ. ಮಕರದ 28ನೇ ಅಂಶವು ಪರಮೋಚ್ಚಸ್ಥಾನ. ಕರ್ಕಾಟಕದ 28 ಅಂಶವು ಪರಮ ನೀಚಸ್ಥಾನ. ರವಿ, ಚಂದ್ರ,, ಗುರುಗಳು ಈತನ ಮಿತ್ರರು. ಬುಧನು ಶತ್ರುವು, ಶುಕ್ರ, ಶನಿಗಳು ಸಮಾನರು. ಈತನು ರವಿಯಿಂದ 15ಡಿಗ್ರಿ ಅಂತರದಲ್ಲಿ ಅಸ್ತಂಗತನಾಗುವನು. ಚಂದ್ರನೊಡನೆ ಸೇರಿದಾಗ ಸಮಾಗಮವಾಗುವುದು. ವಕ್ರಂಗತನಾದಾಗ, ಯುದ್ಧದಲ್ಲಿ ಗೆದ್ದಾಗ ಚೇಷ್ಟಾಬಲ ಬರುತ್ತದೆ. ದಶಮದಲ್ಲಿ ಈತನಿಗೆ ದಿಗ್ಬಲವಿದೆ. ದಶಮದಲ್ಲಿ ಅಂಗಾರಕನಿದ್ದರೆ ಕುಲದೀಪಕ ಯೋಗವೆಂದು ವರ್ಣಿಸಲ್ಪಡುತ್ತದೆ. ಕೇಂದ್ರ ಕೋಣದಲ್ಲಿ (1,4,7,10,5,9) ಸ್ವಕ್ಷೇತ್ರಸ್ಥನೋ, ಮೂಲತ್ರಿಕೋಣಸ್ಥನೋ, ಉಚ್ಚನೋ ಆದರೆ 'ರುಚಕ' ಎನ್ನುವ ಯೋಗವಾಗುವುದು. ಕುಜ–ಚಂದ್ರರಿಂದ 'ಶಶಿಮಂಗಳಯೋಗ'ವೆಂದೂ ಕುಜ–ಶುಕ್ರರಿಂದ 'ಭೃಗ್ವಂಗಾರಕ ಯೋಗ' (ಜಾರಯೋಗ) ಶನಿಯಿಂದ ಕೂಡಿದಾಗ 'ಮಂದಾರ' ಎಂದು ಕರೆಯಲ್ಪಡುವ ಯೋಗಗಳಾಗುವವು.

ಮಂಗಳವಾರಕ್ಕೆ ಈತನು ಅಧಿಪತಿ. ಈತನಿಗೆ ಮಾಸಾಧಿಪತ್ಯವೂ ಇದೆ. ಸ್ತ್ರೀಯರ ಆರ್ತವಕ್ಕೆ (ಋತುಕಾಲಕ್ಕೆ) ಚಂದ್ರನೊಂದಿಗೆ ಈತನೂ ಕಾರಕನು. ಗರ್ಭಧಾರಣ ಶಕ್ತಿಯು ಈತನಿಂದಲೇ ನಿರ್ಣಯಿಸಲ್ಪಡುತ್ತದೆ.

ಈತನು ತಾನಿರುವ ಸ್ಥಾನದಿಂದ 4,7,8ನೇ ಮನೆಗಳನ್ನು ಪೂರ್ಣದೃಷ್ಟಿಯಿಂದ ನೋಡುವನು. ಈತನಿಗೆ ಊರ್ಧ್ವದೃಷ್ಟಿ. ಪೃಷ್ಠೋದಯ (ಪೂರ್ವಾಭಿಮುಖವಾಗಿ ಉದಯ) ಮಜ್ಜಾಧಾತುವಿಗೆ ಕಾರಕನು. (ರಕ್ತ ಉತ್ಪತ್ತಿಯ ಸ್ಥಾನ Bone narrow) ತಿಕ್ತರಸಕ್ಕೆ (ಒಗರು) ಕಾರಕನು.

ಈತನದ್ದು ಪುರುಷಾಕೃತಿಯಾಗಿದ್ದು ಲಂಕೆಯಿಂದ ಕೃಷ್ಣಾನದಿಯ ತನಕದ ಭೂಮಿಯು ಈತನಿಗೆ ಸಂಬಂಧಿಸಿದೆ. ಹವಳ ಹಾಗೂ ಕೆಂಪು ಕಲ್ಲು ಈತನಿಗೆ ಸಂಬಂಧಿಸಿದೆ. ಅತಿರಕ್ತ ವರ್ಣನು, ಕ್ರೂರದೃಷ್ಟಿ ಉಳ್ಳವನೂ (ಕೆಂಪಾದ ಕಣ್ಣು) ಯುವಶರೀರೋಪೇತನು, ಉದಾರಿಯೂ, ಪಿತ್ತಪ್ರಕೃತಿಯೂ, ಚಪಲಚಿತ್ತನೂ, ಕೃಶವಾದ

ಜೀವನವೇ ಭಗವಂತನ ಪೂಜಾರೂಪವಾದ ಯಜ್ಞವಾಗಲಿ.

ನಡುವುಳ್ಳವನೂ ಆಗಿರುವನು. ಪರ್ವತ, ಕಾನನ, ರಣಭೂಮಿ, ಭಯೋತ್ಪಾದನೆಯ ಪ್ರದೇಶದಲ್ಲಿ ಸಂಚಾರ. ಈತನು ಬಾಲಕನು. ಈತನು ಪಾಪಿಗಹ್ರನು. ಕೇಂದ್ರಾಧಿಪತ್ಯ ಶುಭವು.

ಕುಜ, ಮಂಗಳ, ಭೂಮಿಪುತ್ರ, ಅವನೀಸುತ, ಆವನೇಯ, ಕ್ರೂರ, ರುಧಿರ, ಅಂಗಾರಕ, ಕ್ರೂರನೇತ್ರ ಮೊದಲಾದ ಹೆಸರುಳ್ಳವನು.

ವಧೂ-ವರರ ಸಂಘಟನೆ ಮಾಡುವಾಗ ಸ್ತ್ರೀಪುರುಷರ ಜಾತಕದಿಂದ 1,2,12,4,7,8 ಸ್ಥಾನದಲ್ಲಿರಲು ಕುಜದೋಷವನ್ನುಂಟುಮಾಡುವನು. ಲಗ್ನ, ಚಂದ್ರ ಯಾ ಶುಕ್ರನಿಂದ ಸಪ್ತಮಾಷ್ಟದಲ್ಲಿರಲು ವೈಧವ್ಯ ಯಾ ವಿದುರ ಯೋಗ ಉಂಟಾಗುವುದು.

'ಧೂಮ' ಈತನ ಉಪಗ್ರಹವು. ಸಾಮವೇದಕ್ಕೆ ಅಧಿಪತಿಯು. ಧಾತುಗ್ರಹನು (ಧಾತುಪದಾರ್ಥಗಳ ಕಾರಕನೆಂದರ್ಥ.) ಚಿನ್ನವು ಈತನ ಅಧಿಪತ್ಯಕೊಳಗಾಗಿದೆ. ಅಗ್ನಿತತ್ತ್ವ, ಸ್ಕಂಧದೇವತೆ, ಸುಟ್ಟ ಬಟ್ಟೆ, ಸುಟ್ಟಮಾಂಸ, ಕೆಂಪು ಬಟ್ಟೆ, ಕೆಂಪು ಹೂಗಳು ಈತನಿಗೆ ಸಂಬಂಧಿಸಿವೆ. ತಮೋಗುಣವುಳ್ಳವನು. ತನ್ನ ವಾರದಲ್ಲಿ ವಿಶೇಷ ಬಲವಿದೆ. ಮುಹೂರ್ತದಲ್ಲಿ, ಲಗ್ನದಲ್ಲಿ ಯಾ ಸಪ್ತಮಾಷ್ಟಮದಲ್ಲಿ ಇದ್ದರೆ ನಿಂದಿತನೂ ಲಾಭದಲ್ಲಿದ್ದರೆ ಪ್ರಶಸ್ತನೂ ಆಗುವನು.

ಕುಜವಾರವು ಎಲ್ಲಾ ಶುಭಕಾರ್ಯಗಳಿಗೂ ನಿಂದಿತವಾಗಿದೆ. ಅಡಿಗೆ ಮನೆ ಈತನ ಅಧಿಪತ್ಯಕ್ಕೊಳಗಾಗಿದೆ. ಮೃಗಶಿರಾ-ಚಿತ್ರಾ-ಧನಿಷ್ಠಾ ನಕ್ಷತ್ರಗಳಲ್ಲಿ ಇವನ ದಶಾರಂಭ. ದಶಾಪ್ರಮಾಣ 7 ವರ್ಷ. ಇವನ ದಶೆ ಮುಗಿದು ರಾಹುದಶೆ ಆರಂಭವಾಗುವಾಗ ಕುಜರಾಹು ಸಂಧಿಯಾಗುವುದು. ಈ ಕಾಲದಲ್ಲಿ ವಿಶೇಷ ಅನಿಷ್ಟವಾಗಲಿದ್ದು ಪರಿಹಾರ ಅಗತ್ಯ.

ನರ್ಮದಾ, ಶೋಣಾ, ಭೀಮರಥೀ, ಗೋದಾವರಿ, ನೇತ್ರಾವತಿ, ಶಿಪ್ರಾ, ಮಂದಾಕಿನೀ, ಧವಳಾನದಿಗಳು, ವಿಂಧ್ಯಾ, ಮಲಯಾಚಲ, ದಂಡಕಾರಣ್ಯ, ಉತ್ತರಪ್ರಾಂತ್ಯದ ಅರಣ್ಯಪ್ರದೇಶಗಳು ಈತನ ಸಂಚಾರ ಪ್ರದೇಶಗಳು.

ಸುಟ್ಟ ಕಂದಪದಾರ್ಥ, ಬೇಯಿಸಿದ, ಕುದಿಸಿದ ವಸ್ತುಗಳು, ಅರಣ್ಯ ದುರ್ಗವಾಸಿಗಳು, ಕಳ್ಳರು, ದರೋಡೆಕೋರರು ತೀಕ್ಷ್ಣಗುಣವುಳ್ಳವರು, ದೀರ್ಘದ್ವೇಷಿಗಳು, ಶಸ್ತ್ರಾಸ್ತ್ರ ತಯಾರಕರು, ಕಲ್ಲು ಮಣ್ಣು ಯಂತ್ರಾಗಾರದ ಕೆಲಸಗಾರರು, ಶಾಕ್ಯಮುನಿಗಳು, ಜ್ವಾಲಾಮುಖಿ, ಲಾಲಾರಸ, ಕುರಿ, ಕೋಳಿ, ಆಡುಗಳು ಇವುಗಳೆಲ್ಲವುಗಳ ಸೂಚಕನೀತ.

ಎಲ್ಲ ಕಷ್ಟಗಳಿಗೆ ದಿವ್ಯೌಷಧವಾದ ಶ್ರೀಕೃಷ್ಣಾಯ ನಮಃ ಎಂಬ ನಾಮವನ್ನು ಪ್ರತಿದಿನ ನೆನೆಯಿರಿ



ಈತನ ಸಂಖ್ಯೆ 2. ದಕ್ಷಿಣದಿಕ್ಕು. ಈತನ ದಶೆಯಲ್ಲಿ ಬಲಿಷ್ಠನಾದರೆ ಭೂಮಿಯ ಪ್ರಾಪ್ತಿ. ಶತ್ರುಪರಾಜಯ, ಸಹೋದರರಿಂದ ಸಹಾಯ. ಮಣ್ಣು, ಚಿನ್ನ, ಯಂತ್ರ ವಾಹನ ಲಾಭ. ಧಾತು, ಪ್ರಹರಣಾ ಸಾಮಗ್ರಿಗಳಿಂದ ಧನಾಗಮ. ಶಸ್ತ್ರ, ವೈದ್ಯರು, ಭೂಮಾಲಿಕರು, ಕಮ್ಮಾರ, ರಾಸಾಯನಿಕ, ಪೈಂಟಿಂಗ್, ಬೆಸುಗೆ ಹಾಕುವವರು. ಭೌತ, ಜೈವಿಕ ಶಾಸ್ತ್ರಜ್ಞರು, ವಿಜ್ಞಾನಿಗಳು, ಭೂದಲ್ಲಾಳಿಗಳು, ತಂತ್ರಜ್ಞಾನಿಗಳು (ಇಂಜಿನಿಯರುಗಳು) ಕಾರ್ಖಾನೆ ಹಾಗೂ ದೊಡ್ಡ ಪ್ರಮಾಣದ ಉದ್ದಿಮೆದಾರರು, ಮುಳ್ಳಿರುವ ಮರ, ಖದಿರೆ ಸಮಿಧೆ, ಖದಿರಾರಿಷ್ಟ, ಕೆಂಪುರಕ್ತಕಣಗಳೆಲ್ಲವೂ ಈತನ ಕಾರಕತ್ತ್ವಕ್ಕೆ ಸಂಬಂಧಿಸಿದವುಗಳಾಗಿವೆ.

ಈತನು ಅನಿಷ್ಟ ಸ್ಥಾನದಲ್ಲಿರುವಾಗ ಹೆಚ್ಚು ಬಾಯಾರಿಕೆ, ಬಹುಭೋಜನ, ಪಿತ್ತಕ್ಕೆ ಸಂಬಂಧಿಸಿದ ಶರೀರ ಪೀಡೆ, ಜಾಂಡೀಸ್, ಉಚ್ಛಾಂಗ ರೋಗ, ಶಸ್ತ್ರ ಚಿಕಿತ್ಸೆ, ಮೂಳೆ ಮುರಿತ, ಅಪಘಾತ, ಪತನ, ಕಲಹ, ಕಣ್ಣಿಗೆ ಸಂಬಂಧಿಸಿದ ರೋಗ, ರಕ್ತ ಹೀನತೆ, ಅರ್ಬುದ, ಗ್ಯಾಸ್ಟ್ರಿಕ್, ಹುಣ್ಣು, ಜ್ವರ, ಸುಟ್ಟಗಾಯಗಳು. ಆತ್ಮಹತ್ಯೆ, ಕೊಲೆ, ಹೊಡೆದಾಟಗಳಿಗೆ ಸಹೋದರರ, ಜಾತಿಗಳ ವೈಮನಸ್ಸಿಗೆ ಕಾರಣನಾಗುವನು. ವಿಪರೀತ ಕೋಪ, ಕೃಶ ಶರೀರ, ಅಸಹಿಷ್ಣುತೆ, ಈತನ ಪ್ರಧಾನ ಗುಣ.

ಅರಿಷ್ಠ ಪರಿಹಾರಕ್ಕಾಗಿ ತೊಗರಿದಾನ, ಕೆಂಪುವಸ್ತ್ರದಾನ, 10000 ಕುಜ ಮಂತ್ರಜಪ, ಗುಡದಾನ (ಬೆಲ್ಲದಾನ) ಸ್ಕಂಧಾರಾಧನೆ, ನಾಗದೇವತೆ, ಸುಬ್ರಹ್ಮಣ್ಯನಿಗೆ ಫಲ ಪಂಚಾಮೃತ, ಪವಮಾನಕಲಶಾಭಿಷೇಕ, 12 ದಿವಸ ಕುಜಮಂತ್ರಜಪ, ನಾಗಪ್ರತಿಷ್ಠೆ ಸರ್ಪಸಂಸ್ಕಾರ, ಆಶ್ಲೇಷಾಬಲಿದಾನ, ತುಲಾಭಾರಸೇವೆ, ನವಗ್ರಹಪೂರ್ವಕ ಕುಜಮಂತ್ರ ಹೋಮ, ಅಘೋರಾಸ್ತ್ರ ಹೋಮ ಬಲಿ, ತ್ರಿಮದ್ವಾಕ್ತದೂರ್ವೆಯಿಂದ ಕುಜಮಂತ್ರ ಹೋಮ, ನೀಚಾನ್ನದಾನ, ಮೃತ್ಯುಂಜಯ ಜಪ, ಹೋಮ, ಮೃತ ಸಂಜೀವಿನೀ ಹೋಮ, ಅನ್ನದಾನ, ಸುಬ್ರಹ್ಮಣ್ಯ ಕ್ಷೇತ್ರ ದರ್ಶನ, ಕುಮಾರಧಾರಾನದಿಯಲ್ಲಿ ಸ್ನಾನ, ವಿಶೇಷಸೇವೆ, ಚಂಡಿಕಾಹೋಮ, ದುರ್ಗಾರಾಧನೆ, ದೇವಿ ಯಾ ಸುಬ್ರಹ್ಮಣ್ಯನಿಗೆ ದೀಪಸಮರ್ಪಣೆ ಮಾಡಬೇಕು. ಗ್ರಹರ ದೃಷ್ಟಿ ಯುತಿ, ದೋಷ ಪ್ರಾಬಲ್ಯ ನೋಡಿ ಸೂಕ್ತ ಪರಿಹಾರ ಹೇಳಬೇಕು.

ಹಸ್ತ ಸಾಮುದ್ರಿಕಾ ಶಾಸ್ತ್ರದಲ್ಲಿ ಮೊದಲ ಮಂಗಳಪರ್ವ ತರ್ಜನೀ ಹಾಗೂ ಹೆಬ್ಬೆರಳ ಮಧ್ಯಭಾಗದಲ್ಲಿ ದ್ವಿತೀಯ ಪರ್ವ, ಕನಿಷ್ಠಿಕಾ ಬೆರಳ ಕೆಳಗೆ ಬುಧಪರ್ವದ ಕೆಳಭಾಗದಲ್ಲಿದೆ. ★

ಮಧ್ವಮತದ ಸಿದ್ಧಾಂತದ ಪದ್ಧತಿ ಬಿಡಬೇಡಿ.

(34ನೇ ಪುಟದಿಂದ....)

★ ಭೋಜನೆ ಶಾಲೆಯ ಪ್ರಾಣದೇವರ ಹಾಗೂ ಸುಬ್ರಹ್ಮಣ್ಯ ಗುಡಿಯ ದಳಿಗಳಿಗೆ ಬೆಳ್ಳಿಯನ್ನು ಮಡಾಯಿಸಲಾಯಿತು.

★ ಶ್ರೀಕೃಷ್ಣದೇವರಿಗೆ ಪ್ರತಿದಿನವೂ ಉತ್ಸವ ನಡೆಸಲಾಯಿತು. ಎರಡು ವರುಷಗಳಲ್ಲಿ ಸುಮಾರು ಹತ್ತೊಂಭತ್ತು ಸಪ್ತೋತ್ಸವ ನಡೆದದ್ದು ವಿಶೇಷ.

★ ಪ್ರತಿಭಾನುವಾರ 'ನಿರಂತರ ಭಜನಾ ಕಾರ್ಯಕ್ರಮ' ವು ನಡೆದು ರಾಜ್ಯದ ಅನೇಕ ಭಜನಾ ಮಂಡಳಿಗಳು ಭಾಗವಹಿಸುವಂತಾಯಿತು.

## ಸಾಂಸ್ಕೃತಿಕ ಕಾರ್ಯಕ್ರಮ

★ ಎರಡೂ ವರುಷಗಳಲ್ಲಿ ಶ್ರೀಕೃಷ್ಣಜನ್ಮಾಷ್ಟಮಿ, ಮಧ್ವನವಮಿ, ಶ್ರೀವಾದಿರಾಜಜಯಂತಿ ಮುಂತಾದ ವಿಶೇಷ ಸಂದರ್ಭಗಳಲ್ಲಿ ಎಲ್ಲ ವಯಸ್ಸಿನವರಿಗೂ ವಿವಿಧ ಸ್ಪರ್ಧೆಗಳನ್ನು ನಡೆಸಿ ಬಹುಮಾನವನ್ನು ವಿತರಿಸಲಾಯಿತು.

★ ಎರಡೂ ವರುಷಗಳಲ್ಲಿ ಸರಣಿ ಯಕ್ಷಗಾನ ತಾಳಮದ್ದಲೆ, ಯಕ್ಷಗಾನ, ಸಂಗೀತ, ನೃತ್ಯ ಮುಂತಾದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

## ಸಾಮಾಜಿಕ ಕಾರ್ಯಕ್ರಮಗಳು

★ ಉಡುಪಿಯ ಆಸುಪಾಸಿನ ನೂರಾರು ಶಾಲೆಗಳಿಗೆ ಪ್ರತಿದಿನ ಮಧ್ಯಾಹ್ನ ಬಿಸಿಯೂಟವನ್ನು ಒದಗಿಸುವ 'ಚಿಣ್ಣರ ಸಂತರ್ಪಣೆ' ಮುಂದುವರೆದಿದೆ.

★ ಮಕ್ಕಳನ್ನು ಪ್ರೋತ್ಸಾಹಿಸುವ 'ಚಿಣ್ಣರ ಮೇಳ' ಕಾರ್ಯಕ್ರಮ ಎರಡೂ ವರುಷಗಳಲ್ಲಿ ಒಂದು ತಿಂಗಳ ಪರ್ಯಂತ ನೇರವೇರಿದೆ.

★ ಶ್ರೀಕೃಷ್ಣ ಜನ್ಮಾಷ್ಟಮಿಯಂದು ಈ ಎಲ್ಲ ಶಾಲೆಗಳಿಗೂ ಉಂಡೆ-ಚಕ್ಕುಲಿಗಳನ್ನು ವಿತರಿಸಲಾಗಿದೆ.

★ ಹೀಗೆ ಶ್ರೀಕೃಷ್ಣಾಪುರ ಮಠದ ಶ್ರೀ ವಿದ್ಯಾಸಾಗರತೀರ್ಥ ಶ್ರೀಪಾದರ ಎರಡು ವರುಷಗಳ ಪರ್ಯಾಯಾವಧಿಯಲ್ಲಿ ಬಗೆಬಗೆಯ ಕಾರ್ಯಕ್ರಮಗಳು ನಡೆದು ಪರ್ಯಾಯ ಯಶಸ್ವಿಯಾಗಿದೆ. ಇಲ್ಲಿರುವುದು ಕೇವಲ ಅದರ ಸ್ಥೂಲ ಪರಿಚಯ ಮಾತ್ರ. ★

ಶ್ರೀ ಮಾಧ್ವಗ್ರಂಥಗಳ ಅಧ್ಯಯನ ನಿಮ್ಮ ಯೋಗ್ಯತೆಗೆ ಸರಿಯಾಗಿ ಮಾಡಿರಿ.



(16ನೇ ಪುಟದಿಂದ...)

ಪ್ರತಿಯೊಬ್ಬ ಸಾಧಕನು ತಾನು ಬದುಕಬೇಕೆಂಬ ಒಂದೇ ಉದ್ದೇಶದಿಂದ ಬಹಳ ಪ್ರಾಣಿಗಳ ಬಂಧನವನ್ನಾಗಲಿ, ವಧೆಯನ್ನಾಗಲಿ ಮಾಡಬಾರದು. ಹೀಗೆ ಅಹಿಂಸೆಯಿಂದ ಬದುಕುವವನ ಬದುಕೇ ಧನ್ಯವಾದುದು.

ಉಪವಾಸ ವ್ರತವನ್ನಾಚರಿಸುವುದರಿಂದ ಅಂದಿನ ಮಟ್ಟಿಗಾದರೂ ಹಿಂಸೆಯಿಂದ ದೂರಾದಂತಾಗುತ್ತದೆ. ಏಕೆಂದರೆ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಆಹಾರಕ್ಕಾಗಿ ಅನೇಕ ಜೀವಿಗಳಿಗೆ ಹಿಂಸೆ ನೀಡುವುದು ಅನಿವಾರ್ಯ. ಅದನ್ನು ಸಂಪೂರ್ಣ ತ್ಯಜಿಸಲಾಗದಿದ್ದರೂ ಕಡೆಗೆ ಪರ್ವದಿನಗಳಲ್ಲಾದರೂ ತ್ಯಜಿಸಿ ಅಹಿಂಸೆಯಿಂದಿರುವುದೇ ಉಪವಾಸವ್ರತದ ಹಿಂದಿರುವ ಮುಖ್ಯ ಉದ್ದೇಶ. ಇದರಿಂದಲೆ ಉಪವಾಸವ್ರತ ಭಗವಂತನ ಪ್ರೀತಿಗೆ ಪಾತ್ರವಾದ ವ್ರತವಾಯಿತು.

**ತಸ್ಮಾತ್ ಪುಣ್ಯಂ ಲಭೇನ್ ಮರ್ತ್ಯಃ ಸ್ವಯಮಾಹಾರ ಕರ್ಶನಾತ್ ।**
**ತದ್ ಗೃಹಸ್ಥೈರ್ಯಥಾಶಕ್ತಿ ಕರ್ತವ್ಯಮಿತಿ ನಿಶ್ಚಯಃ ॥**

ಉಪವಾಸದಿಂದ ಅಹಿಂಸೆಯನ್ನು ಪಾಲನೆ ಮಾಡಿದಂತೆ ಆಗುವುದರಿಂದಲೆ ಪುಣ್ಯ ಪ್ರಾಪ್ತಿಯಾಗುತ್ತದೆ. ಇಂತಹ ಉಪವಾಸವ್ರತವನ್ನು ಗೃಹಸ್ಥರು ಯಥಾಶಕ್ತಿ ಆಚರಿಸಲೇಬೇಕೆಂಬುದು ಜ್ಞಾನಿಗಳ ನಿರ್ಧಾರ. (ಗೃಹಸ್ಥರು ಆಚರಿಸಬೇಕೆಂದು ಶಾಸ್ತ್ರಗಳು ತಿಳಿಸುತ್ತಿರುವಾಗ ಸಂನ್ಯಾಸಿ, ಬ್ರಹ್ಮಚಾರಿಗಳು ಸುತರಾಂ ಆಚರಿಸಲೇಬೇಕೆಂಬುದು ಸ್ಪಷ್ಟವಾಗುತ್ತದೆ)

**ಉಪವಾಸಾರ್ದಿತೇ ಕಾಯೇ ಆಪದರ್ಥಂ ಪಯೋ ಜಲಮ್ ।**
**ಭುಂಜನ್ನಪ್ರತಿಘಾತೀ ಸ್ಯಾತ್ ಬ್ರಾಹ್ಮಣಾನನುಮಾನ್ಯ ಚ ॥**

ಉಪವಾಸದಿಂದ ಒಂದೊಮ್ಮೆ ಶರೀರಕ್ಕೆ ಬಹಳ ಪೀಡೆಯುಂಟಾದರೆ ಅಂತಹ ಆಪತ್ಕಾಲದಲ್ಲಿ ಬ್ರಾಹ್ಮಣರ ಅನುಜ್ಞೆಯನ್ನು ಪಡೆದು ನೀರನ್ನು ಸ್ವೀಕರಿಸಬಹುದು. ನಂತರವೂ ಉಪಶಮನವಾಗದಿದ್ದರೆ ಸ್ವಲ್ಪ ಹಾಲನ್ನು ಸ್ವೀಕರಿಸುವುದರಿಂದ ಉಪವಾಸವ್ರತಕ್ಕೆ ಭಂಗ ಉಂಟಾಗಲಾರದು. ಆದರೆ ಈ ನಿಯಮ 'ಇನ್ನು ಸಾಧ್ಯವೇ ಇಲ್ಲ' ಎಂದು ಪ್ರಾಮಾಣಿಕವಾಗಿ ತೋರಿದಾಗ ಮಾತ್ರ ಅನ್ವಯಿಸುತ್ತದೆ. ★

ಎಷ್ಟೋ ಜನುಮದ ಸುಕೃತದಿಂದ ಪ್ರಾಪ್ತನಾದ ಈ ಮನುಷ್ಯ ಜನ್ಮವನ್ನು ಸಾರ್ಥಕಪಡಿಸಿಕೊಳ್ಳಿ.

ತತ್ರ

ಸ್ಪಂದನಕ್ಕೊಂದು ಪ್ರತಿಕ್ರಿಯೆ

# ಅನಂತಪದ್ಮನಾಭನೆಂದೇ ಪ್ರಾಜ್ಞರು ಪೂಜಿಸಿದರು

ಶ್ರೀಯುತ ಅನಂತೇಶ್ವರ ದೇವಸ್ಥಾನದಲ್ಲಿ ಹಿಂದಿನಿಂದಲೂ ರುದ್ರನ ಸನ್ನಿಧಿ ಇದೆ ಎಂಬ ನಂಬಿಕೆಯನ್ನು ದೃಢ ಪಡಿಸಲು ಶ್ರೀಮಹಾಭಾರತತಾತ್ಪರ್ಯನಿರ್ಣಯದ ಅಶ್ವಮೇಧ ಯಾಗಕ್ಕೆ ಸಂಬಂಧಿಸಿದ ಪ್ರಕರಣವನ್ನು ಅನಂತೇಶ್ವರ ದೇವಾಲಯಕ್ಕೆ ಸಂಬಂಧ ಹಚ್ಚುವ ಪ್ರಯತ್ನವನ್ನು ನಡೆಸಿದ್ದಾರೆ. ವಸ್ತುತಃ ಇಂತಹ ಚಿಂತನೆಗೆ ಆಧಾರವಾದ ಮೂಲ ವಿಷಯವೆ ದೋಷಪೂರಿತವಾಗಿದೆ. ಏಕೆಂದರೆ ಉಡುಪಿಯ ಅನಂತೇಶ್ವರ ಲಿಂಗದಲ್ಲಿ ರುದ್ರನ ಸನ್ನಿಧಾನ ಇದೆ ಎಂಬುದು ಹಿಂದಿನಿಂದ ಬಂದ ಪ್ರಾಜ್ಞರ ನಂಬಿಕೆಯಲ್ಲ. ಕೇವಲ ಅಜ್ಞರ ನಂಬಿಕೆಯಷ್ಟೆ. ಹಿಂದಿನಿಂದ ಇಂದಿನವರೆಗೂ ಪ್ರಾಜ್ಞರು ಅನಂತೇಶ್ವರನನ್ನು ಲಿಂಗರೂಪಿಯಾದ ಅನಂತಪದ್ಮನಾಭನೆಂದೇ ಆರಾಧಿಸುತ್ತಾ ಬಂದಿದ್ದಾರೆಯೆ ಹೊರತು ಶಂಕರನಾರಾಯಣ ಎಂದಾಗಲಿ, ಶಿವಾಂತರ್ಗತ ಪರಶುರಾಮ ಎಂದಾಗಲಿ, ಶಿವಾಂತರ್ಗತ ಅನಂತಪದ್ಮನಾಭ ಎಂದಾಗಲಿ ಆರಾಧಿಸುತ್ತಿಲ್ಲ. ಇದಕ್ಕೆ ಸಂಬಂಧಿಸಿದಂತೆ ಸರ್ವಮೂಲ ಪತ್ರಿಕೆಯಲ್ಲಿ ಈಗಾಗಲೆ ಪುರಾಣಗಳ, ಮಧ್ವವಿಜಯ, ತೀರ್ಥಪ್ರಬಂಧ ಮುಂತಾದ ಗ್ರಂಥಗಳ ಅಭಿಪ್ರಾಯಗಳು ಪ್ರಕಟವಾಗಿವೆ. ಸಾವಿರಾರು ವರ್ಷಗಳ ಹಿಂದಿನ ಪುರಾಣಗಳಲ್ಲಿ, 800 ವರ್ಷಗಳ ಹಿಂದಿನ ಮಧ್ವವಿಜಯದಲ್ಲಿ, 400 ವರ್ಷದ ಹಿಂದಿನ ತೀರ್ಥಪ್ರಬಂಧದಲ್ಲಿ ಸ್ಪಷ್ಟವಾಗಿ ಅನಂತಪದ್ಮನಾಭನೆಂದೇ ಉಲ್ಲೇಖವಿದೆ. ಆದ್ದರಿಂದ 'ಹಿಂದಿನಿಂದ ರುದ್ರನ ಸನ್ನಿಧಾನವಿದೆ ಎಂಬ ನಂಬಿಕೆ ಇತ್ತು' ಎಂಬುದು ತಪ್ಪು ಕಲ್ಪನೆ ಎಂದು ಸ್ಪಷ್ಟವಾಗುತ್ತದೆ.

ಇದಲ್ಲದೆ ಇಂದಿಗೂ ಪ್ರಾಜ್ಞರ ರೂಢಿಯನ್ನು ಗಮನಿಸಿದಾಗ ಹಿಂದಿನಿಂದಲೂ ಕೇವಲ ಅನಂತಪದ್ಮನಾಭನೆಂದೇ ಆರಾಧಿಸುತ್ತಿದ್ದರು ಹೊರತು ಬೇರೆ ವಿಧದಿಂದಲ್ಲವೆಂಬುದು ಬಹಳ ಸ್ಪಷ್ಟವಾಗುತ್ತದೆ.

ಅಷ್ಟಮಠಾಧೀಶರು ಹಿಂದಿನಿಂದ ಇಂದಿನವರೆಗೆ ಪ್ರತಿದಿನವೂ ಅನಂತೇಶ್ವರ ದೇಗುಲಕ್ಕೆ ಭೇಟಿ ನೀಡುತ್ತಾರೆ. ವಿಶೇಷ ಸಂದರ್ಭಗಳಲ್ಲಿ ಪ್ರಾರ್ಥನೆಯನ್ನು ಸಲ್ಲಿಸುತ್ತಾರೆ. ಆ



ಎಲ್ಲ ಸಂದರ್ಭದಲ್ಲಿಯೂ ಪ್ರಾರ್ಥನೆ, ಪೂಜೆ, ನಮಸ್ಕಾರಗಳನ್ನು ಸಲ್ಲಿಸುವಾಗ ಮೊದಲು ಅನಂತೇಶ್ವರನಿಗೆ ಸಲ್ಲಿಸಿ ಮತ್ತೆ ಅಲ್ಲಿಯೆ ಅದೃಶ್ಯರಾಗಿರುವ ಶ್ರೀಮಧ್ವರ ಸನ್ನಿಧಾನಕ್ಕೆ ಸಲ್ಲಿಸುತ್ತಾರೆ. ಒಂದೊಮ್ಮೆ ಶಿವಾಂತರ್ಗತ ಅನಂತಪದ್ಮನಾಭ ಅಥವಾ ಪರಶುರಾಮ ಎಂಬ ನಂಬಿಕೆ ಇದ್ದರೆ ಈ ರೀತಿ ಆರಾಧಿಸಲು ಸಾಧ್ಯವಿಲ್ಲ. ಏಕೆಂದರೆ ಶಾಸ್ತ್ರಗಳ ಪ್ರಕಾರ ಮೊದಲು ಶಿವನಿಗೆ ಪೂಜೆ ಸಲ್ಲಿಸಿ ಬಳಿಕ ವಾಯುದೇವರಿಗೆ ಪೂಜೆ ಸಲ್ಲಿಸಲಾಗದು. ಶಿವನ ಅಂತರ್ಯಾಮಿಯಾದ ಅನಂತಪದ್ಮನಾಭನಿಗೆ ಪೂಜೆ ಸಲ್ಲಿಸುವುದರಿಂದ ಬಳಿಕ ಶ್ರೀಮಧ್ವರಿಗೆ ಪೂಜೆ ಸಲ್ಲಿಸುವುದು ತಪ್ಪಾಗುವುದಿಲ್ಲ ಎಂದು ತಿಳಿಯುವಂತಿಲ್ಲ. ಏಕೆಂದರೆ ಶ್ರೀಮಧ್ವರ ಪೂಜೆ ಎಂದರೆ ಮಧ್ವರ ಅಂತರ್ಗತನಾದ ಭಗವಂತನ ಪೂಜೆ ಎಂದೇ ಅರ್ಥ. 'ತತ್ರ ತತ್ರ ಸ್ಥಿತೋ ವಿಷ್ಣುಃ ತತ್ತಚ್ಛಕ್ತೀಃ ಪ್ರಬೋದಯನ್ । ಏಕೇವ ಮಹಾನ್ ಶಕ್ತಿಃ ಕುರುತೇ ಸರ್ವಮಂಜಸಾ' ಎಂದು ಶ್ರೀಮಧ್ವರು ಅದೇಶಿಸಿರುವಂತೆ ಎಲ್ಲ ದೇವತೆಗಳ ಪೂಜೆಯೂ ಅಂತರ್ಗತನಾದ ನಾರಯಣನ ಪೂಜೆಯೇ ಆಗುತ್ತದೆ. ಅದರಲ್ಲಿಯೂ ಉಪನಿಷತ್ತು ವಿಶೇಷವಾಗಿ ನಮಸ್ತೇ ವಾಯೋ । ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ । ಎಂದು ವಾಯುದೇವರು ಭಗವಂತನ ಸಾಕ್ಷಾತ್ ಪ್ರತೀಕವೆಂದು ತಿಳಿಸಿದ್ದರಿಂದ ವಾಯುದೇವರ (ಮಧ್ವರ) ಪೂಜೆಯಂತೂ ಅಂತರ್ಗತನಾದ ನಾರಾಯಣನ ಪೂಜೆಯೇ ಆಗುತ್ತದೆ. ಆದ್ದರಿಂದ ಮೊದಲು ಶಿವನ ಅಂತರ್ಯಾಮಿಯಾದ ಅನಂತಪದ್ಮನಾಭನಿಗೆ ಪೂಜೆ ಸಲ್ಲಿಸಿ ಬಳಿಕ ಮಧ್ವರ ಅಂತರ್ಯಾಮಿಯಾದ ನಾರಾಯಣನಿಗೆ ಪೂಜೆ ಸಲ್ಲಿಸಿದರೆ ಮೊದಲು ನೀಚಾಧಿಷ್ಠಾನಕ್ಕೆ ಪೂಜೆ ಸಲ್ಲಿಸಿ ಬಳಿಕ ಉಚ್ಚಾಧಿಷ್ಠಾನಕ್ಕೆ ಪೂಜೆ ಸಲ್ಲಿಸಿದಂತಾಗಿ ಶಾಸ್ತ್ರದ ನಿಯಮಕ್ಕೆ ವಿರುದ್ಧವಾಗುತ್ತದೆ. ತತ್ವಜ್ಞಾನದ ತಲಸ್ಪರ್ಶಿ ಪಾಂಡಿತ್ಯವುಳ್ಳ, ತಪಸ್ವಿಗಳಾದ ಅಷ್ಟಮಠಾಧೀಶರು ಹಿಂದಿನಿಂದಲೂ ಎಂದಿಗೂ ಹೀಗೆ ಶಾಸ್ತ್ರಕ್ಕೆ ವಿರುದ್ಧವಾಗಿ ಉಪಾಸನೆ ನಡೆಸುವವರಲ್ಲ. ಅವರು ಮೊದಲು ಅನಂತೇಶ್ವರನಿಗೆ ಪೂಜೆ ಸಲ್ಲಿಸುತ್ತಾರೆಂದೇ ತಿಳಿಯಬೇಕು. ಆದ್ದರಿಂದಲೆ ಬಳಿಕ ಶ್ರೀಮಧ್ವರಿಗೆ ಪೂಜೆ ಸಲ್ಲಿಸುತ್ತಾರೆ. ಅಷ್ಟಮಠಾಧೀಶರು ಇಂದಿಗೂ ಪ್ರದೋಷಕಾಲದಲ್ಲಿ ಅನಂತೇಶ್ವರ ದೇವಾಲಯಕ್ಕೆ ಭೇಟಿಕೊಟ್ಟರೂ ಅದು ವಿಶೇಷವಾಗಿ ಶಿವನಿದ್ದಾನೆಂಬ ಅನುಸಂಧಾನದಿಂದಲ್ಲ. ಪ್ರದೋಷಕಾಲದಲ್ಲಿ ಶಿವನ ಸಂದರ್ಶನ ಮಹಾಪುಣ್ಯಪ್ರದ. ಅದಕ್ಕಾಗಿ ಚಂದ್ರಮೌಳೀಶ್ವರನನ್ನು ನಮಸ್ಕರಿಸಿ ಬಳಿಕ ಅನಂತೇಶ್ವರಕ್ಕೆ ಬರುತ್ತಾರಷ್ಟೆ. ಏಕೆಂದರೆ ಉಡುಪಿಯಲ್ಲಿ ಕೇವಲ ಚಂದ್ರಮೌಳೀಶ್ವರನ್ನಾಗಲಿ, ಅನಂತೇಶ್ವರನನ್ನಾಗಲಿ ಸಂದರ್ಶಿಸವು

ಕ್ರಮವಿಲ್ಲ. ಚಂದ್ರಮೌಳೀಶ್ವರನನ್ನು ಕಂಡು ಬಳಿಕ ಅನಂತೇಶ್ವರ ದರ್ಶನದಿಂದಲೇ ಪೂರ್ಣಫಲವೆಂದು ಶಿಷ್ಟ ಸಂಪ್ರದಾಯ. ಅದಕ್ಕಾಗಿ ಅಷ್ಟಮಠಾಧೀಶರು ಮೊದಲು ಶಿವನನ್ನು ಕಂಡು ಬಳಿಕ ಶಿವನ ಒಡೆಯನಾದ ಭಗವಂತನನ್ನು ಕಾಣಲು ಬರುತ್ತಾರೆ. ಹೀಗೆ ಅಷ್ಟಾಮಠಾಧೀಶರು ಹಿಂದಿನಿಂದಲೂ ಅನಂತೇಶ್ವರನನ್ನು ಅನಂತಪದ್ಮನಾಭನೆಂದೇ ಆರಾಧಿಸುತ್ತಿದ್ದಾರೆಯೇ ಹೊರತು ಬೇರೆ ವಿಧದಿಂದಲ್ಲವೆಂಬುದು ಸ್ಪಷ್ಟವಾಗುತ್ತದೆ.

ತೌಳವ ಮಾಧ್ವ ಬ್ರಾಹ್ಮಣರಲ್ಲಿ ಹಿಂದಿನಿಂದಲೂ ಯಾವುದೇ ಶುಭಸಮಾರಂಭವನ್ನು ನಡೆಸುವಾಗ ದೇವತಾಪ್ರಾರ್ಥನೆಯನ್ನು ಸಲ್ಲಿಸುವುದಿದೆ. ಆ ಸಂದರ್ಭದಲ್ಲಿ ಕ್ಷೇತ್ರಾಧಿಪತಿಯಾದ ಅನಂತೇಶ್ವರನನ್ನು ಪ್ರಾರ್ಥಿಸುವಾಗ ಎಲ್ಲ ಕಡೆಯೂ 'ಪೂರ್ವೇಪಿ ಕರ್ದಮ ಪರಾಶರ ಪಾಂಡುಮುಖ್ಯಾಃ ........ ನಾರಾಯಣಂ ಕುಲಪತಿಂ ಶರಣಂ ವ್ರಜೇಮ' ಎಂಬ ಶ್ಲೋಕವನ್ನೇ ಪಠಿಸುತ್ತಾರೆ ಹೊರತು ಬೇರೆ ಶ್ಲೋಕವನ್ನಲ್ಲ. ಈ ಶ್ಲೋಕವು ನಾರಾಯಣನ ಪರವಾಗಿದೆ ಹೊರತು ಇಲ್ಲಿ ಸ್ವಲ್ಪವೂ ಶಿವನಿದ್ದಾನೆಂಬ ಸುಳಿವೂ ಇಲ್ಲ. ಈ ಪ್ರಾಚೀನವಾದ ಪ್ರಾಜ್ಞರ ರೂಢಿಯಿಂದಲೂ ಅನಂತೇಶ್ವರ ಲಿಂಗದಲ್ಲಿ ಅನಂತಪದ್ಮನಾಭನೇ ನೆಲೆಲಸಿರುವುದು ಸ್ಪಷ್ಟವಾಗುತ್ತದೆ.

ಅನಂತೇಶ್ವರನನ್ನು ನಾರಾಯಣ, ಅನಂತಪದ್ಮನಾಭ ಎಂದು ಸ್ತುತಿಸುವ ಶ್ಲೋಕಗಳು, ಸ್ತೋತ್ರಗಳು ದೊರೆಯುತ್ತವೆ ಹೊರತು ಶಿವ, ಶಂಕರ-ನಾರಾಯಣ ಎಂದು ಪ್ರಾಜ್ಞರು ಹೊಗಳಿರುವ ಒಂದೇ ಒಂದು ಸ್ತೋತ್ರವಾಗಲಿ, ಶ್ಲೋಕವಾಗಲಿ ದೊರೆಯುವುದಿಲ್ಲ (ಅಜ್ಞರು ಇತ್ತೀಚೆಗೆ ರಚಿಸಿರುವ ಕೆಲವು ಕನ್ನಡ ಪದ್ಯಗಳಿರಬಹುದು) ಇದರಿಂದಲೂ ಹಿಂದಿನಿಂದ ಅನಂತಪದ್ಮನಾಭನೆಂದೇ ಪ್ರಾಜ್ಞರು ಪೂಜಿಸುತ್ತಿದ್ದರೆಂಬುದು ಸ್ಪಷ್ಟವಾಗುತ್ತದೆ.

ಹೀಗೆ ಅನೇಕ ವಿಧದಿಂದ ಚಿಂತಿಸಿದಾಗ ಪ್ರಾಜ್ಞರು ಹಿಂದಿನಿಂದಲೂ ಅನಂತಪದ್ಮನಾಭನೆಂದೇ ಪೂಜಿಸುತ್ತಿರುವುದು ದೃಢವಾಗುತ್ತದೆ. ಕೇವಲ ಪುರಾಣಗಳ-ಸಂಪ್ರದಾಯದ ಅರಿವಿಲ್ಲದ ಅಜ್ಞರು ಮಾತ್ರ ಶಿವ, ಶಂಕರನಾರಾಯಣ ಎಂದೆಲ್ಲ ಆರಾಧಿಸುತ್ತಾರೆ. ಇದು ಶಾಸ್ತ್ರೋಕ್ತವಾದ ಮಾರ್ಗವಲ್ಲ. ಕೇವಲ ಪೂರ್ವಾಗ್ರಹದಿಂದ ಅಥವಾ ಎಲ್ಲರನ್ನು ಒಲೈಸುವ ಬುದ್ಧಿವಂತಿಕೆಯಿಂದ ಬಂದ ಮಾತುಗಳಷ್ಟೆ ಆಗಿದೆ. ಆದ್ದರಿಂದ ನಿಜವಾದ ಜಿಜ್ಞಾಸುಗಳು ಪುರಾಣಗಳ-ಪ್ರಾಜ್ಞರ ಸಂಪ್ರದಾಯವನ್ನೇ ಅನುಸರಿಸುವುದು ಅನಂತೇಶ್ವರನ ಅನುಗ್ರಹಕ್ಕೆ ಕಾರಣವಾಗುವ ಸೂಕ್ತ ಮಾರ್ಗವೆಂದು ಅಭಿಪ್ರಾಯ.



ಪರಶುರಾಮ ದೇವರು ಲಿಂಗಾಕಾರವಾಗಿಯೇ ಏಕೆ ಆವಿರ್ಭವಿಸಿದರು ಎಂಬ ಸಂಶಯವಿತ್ತು. ಆದರೆ ಇತ್ತೀಚೆಗೆ ಆಚಾರ್ಯರ ಮಹಾಭಾರತ ತಾತ್ಪರ್ಯ ನಿರ್ಣಯ ಪುನಃ ನೋಡುವಾಗ ಒಂದು ಸಮಾಧಾನ ಸಿಕ್ಕಿತು.

ಅಧ್ಯಾಯ 30-ಶ್ಲೋಕ 78 ತಚ್ಛಂಕರ ಶರೀರಸ್ಥಂ ಜಾಮದಗ್ನ್ಯಂ ಹರಿಂ ಪರಮ್ ।
ಇಷ್ಟ್ವೈವಾನುಜ್ಞಯಾ ತಸ್ಯ ಸ್ವೀಕೃತ್ಯಂ ಯಜ ತೇನ ಚ ॥

ಅಧ್ಯಾಯ 30 – ಶ್ಲೋಕ 80 ಧನಸ್ಯ ದೇವತಾ ವಿಷ್ಣುರ್ಜಾಮದಗ್ನ್ಯಃಖಿಲೇಶ್ವರಃ
ಸ ಶಂಕರ ಶರೀರಸ್ಥೋ ಯಜ್ಞೋಚ್ಛಿಷ್ಟಧನಾದಿಪಃ ॥

ಕನ್ನಡಕ್ಕೆ ಅನುವಾದದ ಪ್ರಕಾರ – ಶಿವ ಶರೀರಾಂತರ್ಗತನಾದ ಪರಶುರಾಮರೂಪೀ ನಾರಾಯಣನನ್ನು ಯಜ್ಞದಿಂದ ಆರಾಧಿಸಿ ಯಾಗಕ್ಕೆ ಧನವನ್ನು ಸ್ವೀಕರಿಸು

ಧನಕ್ಕೆ ದೇವತೆಯಾದ ವಿಷ್ಣುವೆ ಪರಶುರಾಮರೂಪದಿಂದ ಶಿವಶರೀರಾಂತರ್ಗತನಾಗಿ ಯಜ್ಞಶೇಷವಾದ ಧನಕ್ಕೆ ಒಡೆಯನಾಗಿರುತ್ತಾನೆ.

ಈ ಎರಡೂ ಶ್ಲೋಕದ ಒಟ್ಟಾರೆ ತಾತ್ಪರ್ಯದಲ್ಲಿ ಯಜ್ಞ ಮಾಡುವಾಗ (ಧನಕ್ಕೆ) ಪರಶುರಾಮ ದೇವರೇ ರುದ್ರನ ಶರೀರಾಂತರ್ಗತನಾಗಿ ಇರುತ್ತಾರೆ.

ರುದ್ರನಿಗೆ ಪ್ರಮಾರೂಪ ಪೂಜೆ ಇಲ್ಲದಿರುವುದರಿಂದ ಇಲ್ಲಿ ಶರೀರ ಎನ್ನುವುದನ್ನು ಲಿಂಗವೆಂದು ಭಾವಿಸಿದರೂ, ಆ ಲಿಂಗರೂಪದಲ್ಲಿ ಪರಶುರಾಮನ ಸನ್ನಿಧಿ ಎಂದು ತಿಳಿಯಬಹುದು.

ಹಾಗಾಗಿ ಲಿಂಗರೂಪದಲ್ಲಿ ಶಂಕರನ (ರುದ್ರನ) ಶರೀರ ಇದೆ ಎಂದೇ ಭಾವಿಸಿ, ಅನಂತೇಶ್ವರದಲ್ಲಿ ಲಿಂಗರೂಪದಲ್ಲಿ ಶಂಕರನ ಶರೀರ (ದೇಹ) ಮತ್ತು ಅದರೊಳಗೆ ಪರಶುರಾಮರೂಪೀ ನಾರಾಯಣನ ಸನ್ನಿಧಿ ಎಂದು ತಿಳಿಯುವುದು ರಜತಪೀಠ ಮಹಾತ್ಮ್ಯೆ. ಮಧ್ವಾಚಾರ್ಯರ ತಾತ್ಪರ್ಯ, ವಾದಿರಾಜರ ತೀರ್ಥಪ್ರಬಂಧಕ್ಕೆ ಅನುಗುಣವಾಗಿದೆ ಎಂದು ಭಾವಿಸಿದರೆ, ಅನಂತೇಶ್ವರ ದೇವಸ್ಥಾನದಲ್ಲಿ ಹಿಂದಿನಿಂದಲೂ ರುದ್ರನ ಸನ್ನಿಧಿ ಇದೆ ಎಂದು ನಡೆದುಕೊಂಡು ಬಂದ ನಂಬಿಕೆಗೂ ಅಪಚಾರವಾಗುವುದಿಲ್ಲ.

ಸರ್ವಮೂಲ ಫೆಬ್ರವರಿ 2008